ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 6 ಸೋಮವಾರ 2022

ಸಂಪುಟ: 43 | ಸಂಚಿಕೆ: 51 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಭೂಮಂತ್ರ...
ಅಮ್ಮಂದಿರ ದಿನ ಹಾಗೂ ಆದರ್ಶವಾದಿ ಮಗ
ಪುಟ–4

ಪರಿಶಿಷ್ಟ ಜಾತಿ ಮಕ್ಕಳ ಶಿಕ್ಷಣಕ್ಕೆ ಹೊಸ ಯೋಜನೆ

ಬೆಂಗಳೂರು: ಪರಿಶಿಷ್ಟ ಜಾತಿ ಮಕ್ಕಳಿಗಾಗಿ ಶ್ರೇಷ್ಠ ಸ್ಕೀಂ(ಫಾರ್ ರೆಸಿಡೆನ್ಸಿಯಲ್ ಎಜುಕೇಶನ್ ಟಾರ್ಗೆಟೆಡ್ ಏರಿಯಾ –SRESHTA) ವಸತಿಯುತ ಶಿಕ್ಷಣ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ▶ 8ನೇ ಪುಟಕ್ಕೆ

ನೋಟುಗಳಲ್ಲಿ ಕಲಾಂ, ಠಾಗೋರ್ ಚಿತ್ರಗಳು

ಆರ್‌ಬಿಐ ಪರಿಗಣನೆ



ನವದೆಹಲಿ, ಜೂ.5– ಪಶ್ಚಿಮಬಂಗಾಳದ ಶ್ರೇಷ್ಠ ಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾದ ರವೀಂದ್ರನಾಥ ಠಾಗೋರ್ ಮತ್ತು ಭಾರತದ 11ನೇ ರಾಷ್ಟ್ರಪತಿ, ಮಿಸೈಲ್ ಮ್ಯಾನ್ ಎಂದು ಕರೆಯಲ್ಪಡುವ ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಭಾವಚಿತ್ರಗಳನ್ನು ಮಹಾತ್ಮ ಗಾಂಧಿಯವರ ಹಾಗೆ ದೇಶದ ನೋಟುಗಳಲ್ಲಿ ಮುದ್ರಣಗೊಳ್ಳುವ ಸಾಧ್ಯತೆಯಿದೆ ಎಂದು ವರದಿಯಾಗಿದೆ.

ಭಾರತೀಯ ಕರೆನ್ಸಿ ನೋಟುಗಳಲ್ಲಿ ದೇಶದ ಪಿತಾಮಹ ಮಹಾತ್ಮ ಗಾಂಧಿಯವರ ಭಾವಚಿತ್ರ ಇರುವುದು ಸಾಮಾನ್ಯ. ಆದಾಗ್ಯೂ, ಹಣಕಾಸು ಸಚಿವಾಲಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೆಲವು ಮುಖಬೆಲೆಯ ಹೊಸ ಸರಣಿಯ ನೋಟುಗಳಲ್ಲಿ ಠಾಗೋರ್ ಮತ್ತು ಕಲಾಂ ಅವರ ಚಿತ್ರಗಳನ್ನು ಬಳಸಲು ಪರಿಗಣಿಸುತ್ತಿದೆ ಎಂದು ವರದಿಯಾಗಿದೆ.

ಇದೇ ಮೊದಲ ಬಾರಿಗೆ ಆರ್‌ಬಿಐ ಮಹಾತ್ಮ ಗಾಂಧಿ ಹೊರತುಪಡಿಸಿ ಇತರ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳನ್ನು ನೋಟುಗಳಲ್ಲಿ ಬಳಸಲು ಪರಿಗಣಿಸುತ್ತಿದೆ. ಆರ್‌ಬಿಐ ಮತ್ತು ಹಣಕಾಸು ಸಚಿವಾಲಯದ ಅಧೀನದಲ್ಲಿರುವ ಸೆಕ್ಯುರಿಟಿ ಪ್ರಿಂಟಿಂಗ್ ಮತ್ತು ಮಿಂಟಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಪಿಎಂಸಿಐಎಲ್) ಕಳುಹಿಸಿದೆ ಎಂದು ತಿಳಿದುಬಂದಿದೆ. ಮಹಾತ್ಮಾ ಗಾಂಧಿ, ರವೀಂದ್ರನಾಥ್ ಠಾಗೋರ್ ಮತ್ತು ಅಬ್ದುಲ್ ಕಲಾಂ ವಾಟರ್‌ಮಾರ್ಕ್‌ಗಳ ಎರಡು ಪ್ರತ್ಯೇಕ ಸೆಟ್ ಮಾದರಿಗಳನ್ನು ಐಐಟಿ–ದೆಹಲಿ ಎಮೆರಿಟಸ್ ಪ್ರೊಫೆಸರ್ ದಿಲೀಪ್ ಟಿ ಶಹಾನಿ ಅವರಿಗೆ ನೀಡಲಾಗಿದೆ, ಅವರು ಎರಡು ಸೆಟ್‌ಗಳಿಂದ ಆಯ್ಕೆ ಮಾಡಲು ಮತ್ತು ಸರ್ಕಾರದಿಂದ ಅಂತಿಮ ಪರಿಗಣನೆಗೆ ಕಳುಹಿಸಲು ತಿಳಿಸಲಾಗಿದೆ. ನೋಟುಗಳಲ್ಲಿ ಒಂದು ಅಥವಾ ಎಲ್ಲಾ 3 ಚಿತ್ರಗಳನ್ನು ಆಯ್ಕೆ ಮಾಡುವ ಕುರಿತು ಅಂತಿಮ ನಿರ್ಧಾರವನ್ನು ಸರ್ಕಾರದ ಉನ್ನತ ಮಟ್ಟದಲ್ಲಿ ತೆಗೆದುಕೊಳ್ಳಲಾಗುವುದು ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ಮೂರು ವಾಟರ್‌ಮಾರ್ಕ್ ಮಾದರಿಗಳನ್ನು ವಿನ್ಯಾಸಗೊಳಿಸಲು ಅಧಿಕೃತ ಅನುಮತಿ ಇತ್ತು. ಇನ್ನೂ ಯಾವುದೇ ದೃಢ ನಿರ್ಧಾರವನ್ನು ತೆಗೆದುಕೊಂಡಿಲ್ಲ.

2021ರಲ್ಲಿ, ಆರ್‌ಬಿಐ ತನ್ನ ಮೈಸೂರು ಮೂಲದ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್ ಮತ್ತು ಹೊಶಂಗಾಬಾದ್‌ನಲ್ಲಿರುವ ಎಸ್‌ಪಿಎಂಸಿಐಎಲ್‌ನ ಸೆಕ್ಯುರಿಟಿ ಪೇಪರ್ ಮಿಲ್‌ಗೆ ತಮ್ಮದೇ ಆದ ವಾಟರ್‌ಮಾರ್ಕ್ ಮಾದರಿಗಳನ್ನು ವಿನ್ಯಾಸಗೊಳಿಸಲು ಸೂಚನೆಗಳನ್ನು ನೀಡಿತು. ಬಳಿಕ RBI ಮತ್ತು SPMCIL ತಮ್ಮ ಮಾದರಿಗಳನ್ನು ಪರೀಕ್ಷಿಸಲು ಶಹಾನಿಗೆ ಕಳುಹಿಸಿದವು. ಮಾದರಿಗಳ ಸೂಕ್ಷ್ಮ ಅಂಶಗಳ ಕುರಿತು ಶಹಾನಿ ಅಧಿಕಾರಿಗಳೊಂದಿಗೆ ಹಲವಾರು ಸುತ್ತಿನ ಚರ್ಚೆಗಳನ್ನು ನಡೆಸಿದ್ದಾರೆ.

ಪರಿಷ್ಕೃತ ಪಠ್ಯವನ್ನು ಕಸದ ಬುಟ್ಟಿಗೆ ಎಸೆಯಿರಿ



ಬೆಂಗಳೂರು, ಜೂ.5– ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರ ನಡುವೆ ವಾಗ್ಯುದ್ಧ ಮುಂದುವರೆದಿದೆ. ಹಿಂದೂ ಭಾವನೆಗೆ ಧಕ್ಕೆಯಾಗಿದ್ದಕ್ಕೆ ಪಠ್ಯ ಪರಿಷ್ಕರಣೆ ಮಾಡಲಾಗಿದೆ ಎಂಬ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ನಾಗೇಶ್ ಅವರಿಗೆ ಟ್ವೀಟ್ ಮಾಡುವ ಮೂಲಕ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶ್ನೆಗಳ ಸುರಿಮಳೆಗೈದಿದ್ದಾರೆ.

ಹಿಂದೂ ಭಾವನೆಗೆ ಧಕ್ಕೆಯಾಗಿದ್ದಕ್ಕೆ ಪಠ್ಯ ಪರಿಷ್ಕರಣೆ ಮಾಡಲಾಗಿದೆ ಎಂದು ಸಚಿವ ಬಿ.ಸಿ.ನಾಗೇಶ್ ಅಸಲಿ ಕಾರಣವನ್ನು ಬಹಿರಂಗಪಡಿಸಿದ್ದಾರೆ. ಈ ಹಿಂದೂಗಳು ಯಾರು? ಎನ್ನುವುದನ್ನು ಸಚಿವರು ಬಹಿರಂಗಪಡಿಸಿ, ಯಾವುದರಿಂದ ಯಾರ ಭಾವನೆಗೆ ಧಕ್ಕೆಯಾಗಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪರಿಷ್ಕೃತ ಪಠ್ಯದಲ್ಲಿ ಬಸವಣ್ಣ, ಅಂಬೇಡ್ಕರ್, ಸಾವಿತ್ರಿಬಾಯಿ ಫುಲೆ, ನಾರಾಯಣ ಗುರು, ಕುವೆಂಪು ಸೇರಿದಂತೆ ಹಲವು ಮಹನೀಯರ ವ್ಯಕ್ತಿತ್ವವನ್ನು ಕಡೆಗಣಿಸಲಾಗಿದೆ. ಇವರನ್ನು ಸಮಿತಿಯ ಕಿಡಿಗೇಡಿ ಅಧ್ಯಕ್ಷ ತುಚ್ಛೀಕರಿಸಿದ್ದಾನೆ ಎಂದು ಪ್ರತಿಭಟಿಸುತ್ತಿರುವವರು ಅನ್ಯಧರ್ಮಿಯರಲ್ಲ, ಹಿಂದೂಗಳೇ ಅಲ್ವಾ? ಎಂದು ಪ್ರಶ್ನಿಸಿದ್ದಾರೆ.


ಪಠ್ಯ ಪರಿಷ್ಕರಣಾ ಸಮಿತಿಯಲ್ಲಿ ದಲಿತ ಹಾಗೂ ಹಿಂದುಳಿದ ಜಾತಿಗಳ ವಿದ್ವಾಂಸರಿಗೆ ಪ್ರಾತಿನಿಧ್ಯವೇ ನೀಡಿಲ್ಲವಲ್ಲಾ? ಶಿಕ್ಷಣ ಸಚಿವರು ಕಾಳಜಿ ತೋರುತ್ತಿರುವ ಹಿಂದೂಗಳ ವ್ಯಾಖ್ಯಾನದಲ್ಲಿ ಈ ಸಮುದಾಯಗಳು ಸೇರಿಕೊಳ್ಳುವುದಿಲ್ಲವೇ? ಈ ಕಾರಣಕ್ಕಾಗಿ ಅವರಿಗೆ ಪ್ರಾತಿನಿಧ್ಯ ನೀಡಿಲ್ಲವೇ? ಬಸವಣ್ಣ,ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸಿದ ಕಾರಣಕ್ಕೆ ಅವರನ್ನು ನಿರ್ಲಕ್ಷಿಸಲಾಯಿತೇ? ಅವಮಾನ ಮಾಡಲಾಯಿತೇ? ನಾರಾಯಣ ಗುರು, ಪೆರಿಯಾರ್, ಕುವೆಂಪು ಅವರು ಹಿಂದೂ ಧರ್ಮದ ದೋಷಗಳನ್ನು ಎತ್ತಿ ತೋರಿಸಿದ್ದಕ್ಕಾಗಿ ನಿರ್ಲಕ್ಷ್ಯ ಮಾಡಲಾಯಿತೇ? ಹಾಗೆಂದು ಹೇಳಿಬಿಡಿ ಎಂದಿದ್ದಾರೆ. ವಿಕೃತ ಮನಸ್ಸಿನ ಕಿಡಿಗೇಡಿ ಅಧ್ಯಕ್ಷ ತಯಾರಿಸಿರುವ ಪರಿಷ್ಕೃತ ಪಠ್ಯದಿಂದ ಬಹುಸಂಖ್ಯಾತ ಹಿಂದೂಗಳ ಮನಸ್ಸಿಗೆ ಮಾತ್ರವಲ್ಲ, ರಾಜ್ಯದ ಆರೂವರೆ ಕೋಟಿ ಕನ್ನಡಿಗರ ಮನಸ್ಸಿಗೆ ಘಾಸಿಯಾಗಿದೆ. ಕನ್ನಡಿಗರ ಸಹನೆಯನ್ನು ಪರೀಕ್ಷಿಸಲು ಹೋಗಬೇಡಿ, ಮೊದಲು ಈ ಪರಿಷ್ಕೃತ ಪಠ್ಯವನ್ನು ಕಸದ ಬುಟ್ಟಿಗೆ ಎಸೆಯಿರಿ ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್

ಬೆಂಗಳೂರು, ಜೂ.5– ರಾಜ್ಯದಲ್ಲಿ ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್ ನಡೆಸಬೇಕು ಎಂದು ಇಂಧನ ಸಚಿವ ಸುನೀಲ್‌ಕುಮಾರ್ ಭಾನುವಾರ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ. ಈ ಕುರಿತು ಆದೇಶ ನೀಡಿರುವ ಅವರು,



ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳ ಬಗ್ಗೆ ಅರಿತು, ತಕ್ಷಣ ಪರಿಹಾರ ಮಾಡಲು ಆಂದೋಲನ ರೀತಿಯ ಕಾರ್ಯಕ್ರಮ ರೂಪಿಸಬೇಕು. ಪ್ರತಿ ತಿಂಗಳ 3ನೇ ಶನಿವಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸೇರಿದಂತೆ ಎಲ್ಲ ಅಧಿಕಾರಿಗಳು ತಾಲೂಕಿನ ಕೊನೇ ಹಳ್ಳಿವರೆಗೆ ಭೇಟಿ ನೀಡಬೇಕು. ವಿದ್ಯುತ್ ಅದಾಲತ್ ಮಾಡಿ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದಿದ್ದಾರೆ.



ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಮಟ್ಟದ ಅಧಿಕಾರಿಗಳಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ವರೆಗಿನ ಅಧಿಕಾರಿಗಳು ತಾಲೂಕಿನ ಎಲ್ಲ ಹಳ್ಳಿಗಳಿಗೆ ಹೋಗಿ, ಸಮಸ್ಯೆ ಆಲಿಸಿ, ಪರಿಹಾರ ▶ 8ನೇ ಪುಟಕ್ಕೆ

ಅಭಿವೃದ್ಧಿ ರಾಷ್ಟ್ರಗಳಿಂದ ಪರಿಸರಕ್ಕೆ ದೊಡ್ಡ ಹಾನಿ: ಪ್ರಧಾನಿ

ದೆಹಲಿ, ಜೂ.5– ವಿಶ್ವ ಪರಿಸರ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಭಾನುವಾರ 'ಮಣ್ಣು ಉಳಿಸಿ ಅಭಿಯಾನ್' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈಶಾ ಫೌಂಡೇಶನ್‌ನ ಸಂಸ್ಥಾಪಕರಾದ ಸದ್ಗುರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ವಿಶ್ವ ಪರಿಸರ ದಿನದಂದು ಇಡೀ ವಿಶ್ವದ ಜನರಿಗೆ ಶುಭಾಶಯಗಳನ್ನು ತಿಳಿಸಿದರು. ಇಂದು ದೇಶ 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಈ ಅಮೃತ ಕಾಲದಲ್ಲಿ ಹೊಸ ಸಂಕಲ್ಪಗಳನ್ನು ಕೈಗೊಳ್ಳುತ್ತಿದೆ. ಹಾಗಾಗಿ ಈ ರೀತಿಯ ಸಾರ್ವಜನಿಕ ಅಭಿಯಾನ ಬಹಳ ಮುಖ್ಯವಾಗುತ್ತದೆ. ಕಳೆದ 8 ವರ್ಷಗಳಿಂದ ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಯೋಜನೆಗಳು ಒಂದಲ್ಲ ಒಂದು ರೀತಿಯಲ್ಲಿ ಪರಿಸರವನ್ನು ಸಂರಕ್ಷಿಸುವ ಹಂಬಲವನ್ನು ಹೊಂದಿವೆ ಎಂಬ ತೃಪ್ತಿ ನನಗಿದೆ ಎಂದರು. ಸ್ವಚ್ಛ ಭಾರತ್ ಮಿಷನ್, ▶ 8ನೇ ಪುಟಕ್ಕೆ



ವಿಶ್ವ ಪರಿಸರ ದಿನದ ಅಂಗವಾಗಿ ನಡೆದ 'ಮಣ್ಣು ಉಳಿಸಿ ಅಭಿಯಾನ'ದಲ್ಲಿ ಪ್ರಧಾನಿ ಮೋದಿ, ಈಶಾ ಫೌಂಡೇಶನ್‌ನ ಸಂಸ್ಥಾಪಕ ಸದ್ಗುರು ಭಾಗವಹಿಸಿದ್ದರು.

ಮಣ್ಣು ಆರೋಗ್ಯ ಕಾರ್ಡ್ ರೈತರಿಗೆ ಅನುಕೂಲ

ಈ ಹಿಂದೆ ನಮ್ಮ ದೇಶದ ರೈತನಿಗೆ ಯಾವ ರೀತಿಯ ಮಣ್ಣು ಅವನ ಮಣ್ಣಿನ ಕೊರತೆ ಏನು, ಎಷ್ಟು ಇದೆ ಎಂಬ ಮಾಹಿತಿ ಕೊರತೆ ಇತ್ತು. ಈ ಸಮಸ್ಯೆಯನ್ನು ಹೋಗಲಾಡಿಸಲು, ದೇಶದ ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್ ನೀಡಲು ಬೃಹತ್ ಅಭಿಯಾನ ಪ್ರಾರಂಭಿಸಲಾಯಿತು. ದೇಶಾದ್ಯಂತ 22 ಕೋಟಿಗೂ ಹೆಚ್ಚು ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ರೈತರಿಗೆ ನೀಡಲಾಗಿದೆ. ಇದರಿಂದ ಶೇ.8ರಿಂದ 10ರಷ್ಟು ವೆಚ್ಚ ಉಳಿತಾಯವಾಗಿದ್ದು, ಇಳುವರಿಯಲ್ಲಿ ಶೇ.5ರಿಂದ 6ರಷ್ಟು ಹೆಚ್ಚಳವಾಗಿದೆ. –ಪ್ರಧಾನಿ


ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನೋತ್ಸವಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ

ಅರಮನೆ ಆವರಣದಲ್ಲಿ ಮೊದಲ ಹಂತದ ಯೋಗ ಪೂರ್ವಾಭ್ಯಾಸ

- 10,000ಕ್ಕೂ ಹೆಚ್ಚು ಯೋಗ ಪಟುಗಳು ಭಾಗಿ
- ಮುಂದಿನ ಭಾನುವಾರದ 2ನೇ ಪೂರ್ವಾಭ್ಯಾಸಕ್ಕೆ 20,000 ಉತ್ಸಾಹಿಗಳನ್ನು ಸೇರಿಸುವ ಗುರಿ



ಮೈಸೂರಿನ ಅರಮನೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನೋತ್ಸವದ ಮೊದಲ ಹಂತದ ಪೂರ್ವಾಭ್ಯಾಸಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು. ಚಿತ್ರದಲ್ಲಿ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಭಾಷ್ಯಂ ಸ್ವಾಮೀಜಿ, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಶ್ರೀನಿವಾಸ್ ಗುರೂಜಿ, ಯೋಗ ಫೆಡರೇಶನ್ ಆಫ್ ಮೈಸೂರು ಅಧ್ಯಕ್ಷ ಡಿ.ಶ್ರೀಹರಿ, ಪದಾಧಿಕಾರಿಗಳಾದ ಸತ್ಯನಾರಾಯಣ್, ಬಿ.ಪಿ.ಮೂರ್ತಿ, ಡಾ.ಗಣೇಶ್‌ಕುಮಾರ್, ಎಸ್.ಶಶಿಕುಮಾರ್ ಇನ್ನಿತರರಿದ್ದಾರೆ.



ಅರಮನೆ ಆವರಣದಲ್ಲಿ ಯೋಗದ ಪೂರ್ವಾಭ್ಯಾಸದಲ್ಲಿ ಪಾಲ್ಗೊಂಡಿದ್ದ ಯೋಗ ಪಟುಗಳು.

ಮೈಸೂರು, ಜೂ.5(ಆರ್‌ಕೆಬಿ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂ.21ರಂದು ಮೈಸೂರಿನಲ್ಲಿ ಯೋಗ ಪ್ರದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿರುವ ಯೋಗ ದಿನೋತ್ಸವಕ್ಕೆ ಇನ್ನೂ 2 ವಾರ ಬಾಕಿ ಇದ್ದು, ಪ್ರೋಟೋಕಾಲ್ ಆಧಾರಿತ ಮೊದಲ ಯೋಗ ಪೂರ್ವಾಭ್ಯಾಸ ಭಾನುವಾರ ಮೈಸೂರಿನ ಅರಮನೆ ಆವರಣದಲ್ಲಿ ನಡೆಯಿತು.

ಅರಮನೆಯ ಸುಂದರ ವಿಹಂಗಮ ನೋಟದ ಹಿನ್ನೆಲೆಯಲ್ಲಿ 10,000ಕ್ಕೂ ಹೆಚ್ಚು ಉತ್ಸಾಹಿ ಯೋಗಪಟುಗಳು ಭಾಗವಹಿಸಿ ಯೋಗ ಪ್ರದರ್ಶಿಸಿದರು. ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ದೀಪ ಬೆಳಗಿಸಿ ಮೊದಲ ಹಂತದ ಯೋಗ ಪೂರ್ವಾಭ್ಯಾಸಕ್ಕೆ ಚಾಲನೆ ನೀಡಿದರು. ಬಳಿಕ ಅವರು ವಿಶ್ವ ಪರಿಸರ ದಿನಾಚರಣೆ ಅಂಗವಾಗಿಯೂ ಗಿಡಗಳಿಗೆ ನೀರೆರೆದರು. ಅರಮನೆ ಆವರಣದ ಎಲ್ಲಾ ಜಾಗಗಳಲ್ಲೂ ಸಾವಿರಾರು ಯೋಗಪಟುಗಳು ಸಮವಸ್ತ್ರದೊಂದಿಗೆ ಭಾಗವಹಿಸಿದ್ದರು. ಶಾಲಾ, ಕಾಲೇಜು ವಿದ್ಯಾರ್ಥಿಗಳು ಕೂಡ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಒಟ್ಟು 90 ನಿಮಿಷಗಳ ಪೂರ್ವಾಭ್ಯಾಸವು ಪ್ರಾರ್ಥನೆ, ಚಲನ ಕ್ರಿಯೆ, ಸಮಸ್ಥಿತಿ, ತಾಡಾಸನ, ವೃಕ್ಷಾಸನ, ಪಾದಹಸ್ತಾಸನ, ಭದ್ರಾಸನ, ವಜ್ರಾಸನ, ಮಕರಾಸನ, ಅರ್ಧ ಹಲಾಸನ, ಶವಾಸನ ಇತ್ಯಾದಿ ಆಸನಗಳನ್ನು ಒಳಗೊಂಡಿತ್ತು, ಕಪಾಲಭಾತಿ, ಪ್ರಾಣಾಯಾಮ, ಧ್ಯಾನ, ಸಂಕಲ್ಪ ಮತ್ತು ಶಾಂತಿ ಮಂತ್ರದೊಂದಿಗೆ ಮುಕ್ತಾಯಗೊಂಡಿತು. ▶ 8ನೇ ಪುಟಕ್ಕೆ

> “ ಜೂ.21 ಹಗಲು ಹೆಚ್ಚಿರುವ ದಿನ. ಅದೇ ದಿನದಂದು ಅಂತಾರಾಷ್ಟ್ರೀಯ ಯೋಗ ದಿನೋತ್ಸವಕ್ಕೆ ಮೈಸೂರಿಗೆ ಮೋದಿ ಭೇಟಿ ನೀಡುತ್ತಿರುವುದು ವಿಶೇಷವಾಗಿದೆ. ಶ್ರೇಷ್ಠ ನಡವಳಿಕೆ, ಸಿದ್ಧಾಂತ ಹೊಂದಿರುವ ಮೋದಿ ಅವರಲ್ಲಿ ಕರ್ಮ ಯೋಗ ನೆಲೆ ನಿಂತಿದೆ.
> –ಯೋಗಾಚಾರ್ಯ ಡಾ.ಸತ್ಯನಾರಾಯಣ ಜೋಯಿಸ್

> “ ಅಂತಾರಾಷ್ಟ್ರೀಯ ಯೋಗ ದಿನ ಆರಂಭವಾಗಿ 8 ವರ್ಷಗಳ ಜೊತೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ವೇಳೆ ಪ್ರಧಾನಿ ಮೋದಿ ಮೈಸೂರು ಭೇಟಿ ವಿಶೇಷ. ಮುಂದಿನ ಭಾನುವಾರ 20 ಸಾವಿರ ಜನರನ್ನು ಅರಮನೆ ಆವರಣದಲ್ಲಿ ಸೇರಿ, 2ನೇ ಪೂರ್ವಾಭ್ಯಾಸ ನಡೆಸುವ ಗುರಿ ಇದೆ. ಜೂ.8, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಲಿದ್ದು, ಜೂ.21ರ ಯೋಗ ದಿನದ ಸಂಬಂಧ ರೂಪುರೇಷೆಗಳ ಕುರಿತು ಸಮಿತಿಯೊಂದಿಗೆ ಚರ್ಚಿಸಲಿದ್ದಾರೆ. –ಎಸ್.ಎ.ರಾಮದಾಸ್, ಶಾಸಕ

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಸುಗಮ

ಮೈಸೂರು, ಜೂ.5 (ಆರ್‌ಕೆಬಿ)– ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ (ಯುಪಿಎಸ್ಸಿ) ನಡೆಸಿದ ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆ–2022 ಇಂದು ಮೈಸೂರಿನ 17 ಕೇಂದ್ರಗಳಲ್ಲಿ ಸುಗಮವಾಗಿ ನಡೆಯಿತು. ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿತ್ತು. ಸಾಮಾನ್ಯ ಅಧ್ಯಯನಗಳು–I ಮತ್ತು ಸಾಮಾನ್ಯ ಅಧ್ಯಯನಗಳು–II – ಇದು ಎರಡು ಅವಧಿಗಳಲ್ಲಿ ನಡೆಯಿತು. ಮೈಸೂರಿನ 17 ಕೇಂದ್ರಗಳಲ್ಲಿ ಒಟ್ಟು 6,468 ಅಭ್ಯರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದು, ಈ ಪೈಕಿ 3651 ಮಂದಿ ಹಾಜರಾಗಿದ್ದರೆ, 2,817 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸಮೂರ್ತಿ ಅವರು ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷೆಯ ಮೇಲ್ವಿಚಾರಣೆ ನಡೆಸಿದರು. ಪರೀಕ್ಷೆಯನ್ನು ಸುಗಮವಾಗಿ ನಡೆಸಲು ನಗರ ಪೊಲೀಸರು ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ದಿನದ ಮಟ್ಟಿಗೆ ಮುಚ್ಚುವಂತೆ ತಿಳಿಸಲಾಗಿತ್ತು.

ಯುಪಿಎಸ್‌ಸಿ: ಜೆಎಸ್‌ಎಸ್‌ನ ಇಬ್ಬರು ಆಯ್ಕೆ

ಮೈಸೂರು, ಜೂ.5–ಕೇಂದ್ರ ಲೋಕಸೇವಾ ಆಯೋಗ ನಾಗರಿಕ ಸೇವೆ (ಯುಪಿಎಸ್‌ಸಿ) ನಡೆಸಿದ ಅಂತಿಮ ಮೌಖಿಕ ಪರೀಕ್ಷೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಬೆಂಗಳೂರಿನ ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಿಂದ ತರಬೇತಿ ಪಡೆದ ಡಾ.ಬೆನಕಪ್ರಸಾದ್ ಎನ್.ಜೆ. ಮತ್ತು ಆರ್.ಮಂಜುನಾಥ್ ಆಯ್ಕೆಯಾಗಿದ್ದಾರೆ.


ಡಾ.ಬೆನಕ ಪ್ರಸಾದ್


ಆರ್.ಮಂಜುನಾಥ್

ಇವರುಗಳು ಕ್ರಮವಾಗಿ 92 ಮತ್ತು 219ನೇ ರ್‍ಯಾಂಕ್‌ಗಳನ್ನು ಪಡೆದಿದ್ದಾರೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಡಳಿತಾತ್ಮಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅವರಿಗೆ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲಿ ಎಂದು ಶುಭ ಹಾರೈಸಿದ್ದಾರೆ. ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಿಂದ ಕೇಂದ್ರೀಯ ನಾಗರಿಕ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆ ಪರೀಕ್ಷೆಗಳಿಗೆ 1991ರಿಂದ ತರಬೇತಿಯನ್ನು ನೀಡಲಾಗುತ್ತಿದೆ. ಇದುವರೆಗೆ ಸಂಸ್ಥೆಯಿಂದ 5000ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. 409 ಅಭ್ಯರ್ಥಿಗಳು ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್, ಕೆಎಎಸ್ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ. ಅನೇಕರು ವಿವಿಧ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಬ್ಯಾಂಕುಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಜೂ.7, 8ರಂದು ಫ್ಯಾಷನವ್ಯಾ ವಿಶೇಷ ವಸ್ತ್ರ, ವಸ್ತುಗಳ ಪ್ರದರ್ಶನ, ಮಾರಾಟ

ಮೈಸೂರು,ಜೂ.5–ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಆವರಣದಲ್ಲಿ ಜೂ.7 ಮತ್ತು 8ರಂದು 'ಫ್ಯಾಷನವ್ಯಾ' ವಿಶೇಷ ವಿನ್ಯಾಸದ ವಸ್ತ್ರ ಹಾಗೂ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿದೆ.



ಫ್ಯಾಷನಿಸ್ಟಾ ವತಿಯಿಂದ ಆಯೋಜಿಸಲಾಗುವ ಈ ಪ್ರದರ್ಶನವನ್ನು ಕಿರುತೆರೆ ನಟ ಪವನ್ ಶಂಕರ್ ಉದ್ಘಾಟಿಸಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ.

ವಿಭಿನ್ನ ಉಡುಪುಗಳು, ಆಭರಣಗಳು, ಸೌಂದರ್ಯ ಉತ್ಪನ್ನಗಳು, ಸೌಂದರ್ಯ ವರ್ಧಕಗಳು, ಸುಗಂಧ ದ್ರವ್ಯಗಳು, ಗೃಹಾಲಂಕಾರ ವಸ್ತುಗಳು, ಉಡುಗೊರೆಗಳು ಸೇರಿದಂತೆ ದೇಶದ ಉತ್ಸಾಹಿ ವಿನ್ಯಾಸಕರಿಂದ ಆಯ್ಕೆ ಮಾಡಿರುವ ಅನನ್ಯ ಹಾಗೂ ಅತ್ಯಾಕರ್ಷಕ ವಸ್ತುಗಳು ಲಭ್ಯವಿರಲಿವೆ.

ಅಂಗವಿಕಲ ಕ್ರೀಡಾಪಟು ಮಹೇಂದ್ರಗೆ ಸನ್ಮಾನ

ಮೈಸೂರು, ಜೂ. 5(ಎಸ್‌ಪಿಎನ್)–ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ ರಂಗತಿಟ್ಟು ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಹಕಾರ ಸಂಘದ ವತಿಯಿಂದ ರೈತ ಹಾಗೂ ರಾಷ್ಟ್ರೀಯ ಅಂಗವಿಕಲ ಕ್ರೀಡಾಪಟು ಮಹೇಂದ್ರ ಅವರನ್ನು ಗೌರವಿಸಲಾಯಿತು.



ಬೋನ್ ಕ್ಯಾನ್ಸರ್‌ನಿಂದ ಬಲ ಕಾಲು ಕಳೆದುಕೊಂಡರೂ ಎದೆಗುಂದದೆ ಸ್ವಾಭಿಮಾನಿ ಬದುಕು ರೂಪಿಸಿಕೊಳ್ಳುವ ಛಲದಿಂದ ಮಹೇಂದ್ರ ಅವರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ ಹಾಗೂ ಅಂಗವಿಕಲರಿಗಾಗಿಯೇ ರೂಪಿಸುವ ರಾಷ್ಟ್ರೀಯ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಹಲವು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇಂತಹ ಯುವ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಉತ್ತಮ ಸಂಗತಿ ಎಂದು ಜನ ಸಂಗ್ರಾಮ ಪರಿಷತ್ ರಾಜ್ಯ ಉಪಾಧ್ಯಕ್ಷ ಪ್ರಸನ್ನ ತಿಳಿಸಿದ್ದಾರೆ. ಈ ವೇಳೆ ಪಾಲಹಳ್ಳಿಯ ತಿಮ್ಮಪ್ಪ, ಪಿ.ಮಹದೇವು, ಅಶ್ವಥ್, ಈಶ್ವರ್, ಕರಿಯಪ್ಪ, ಪಿ.ಜಿ.ಭಾಸ್ಕರ, ನಿಂಗರಾಜು, ಚಂದ್ರವಾರಿ ಜಯರಾಂ, ಮಾಸ್ಟರ್ ರೋಹನ್ ಚಿತ್ರದಲ್ಲಿದ್ದಾರೆ.

ಮೈಸೂರಲ್ಲಿ ಭಾರೀ ಬಿರುಗಾಳಿ ಸಹಿತ ಧಾರಾಕಾರ ಮಳೆ

ಜನಜೀವನ ಅಸ್ತವ್ಯಸ್ತ, ವಾಹನ ಸವಾರರ ಪರದಾಟ

ಮೈಸೂರು,ಜೂ 5(ಜಿಎ)– ಮೈಸೂರಿನ ಹಲವೆಡೆ ಭಾನುವಾರ ರಾತ್ರಿ ಭಾರೀ ಬಿರುಗಾಳಿಯೊಂದಿಗೆ ಧಾರಾಕಾರವಾಗಿ ಮಳೆ ಸುರಿಯಿತು. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿತ್ತಲ್ಲದೆ ವಾಹನ ಸವಾರರು ಪರದಾಡುವಂತಾಯಿತು. ಮೈಸೂರಿನಲ್ಲಿ ಶನಿ ವಾರ ಸಂಜೆ ಅಲ್ಲಲ್ಲಿ ಚದುರಿದಂತೆ ಮಳೆಯಾ ಗಿತ್ತು. ಭಾನುವಾರ ಬೆಳಗ್ಗೆ ಸಾಧಾರಣ ಬಿಸಿಲಿತ್ತಾರೂ ಮಧ್ಯಾಹ್ನ ಮೋಡ ಕವಿದ ವಾತಾವರಣವಿತ್ತು.




ರಾತ್ರಿ 11 ಗಂಟೆಯ ನಂತರ ಬನ್ನಿಮಂಟಪ, ಕೆಸರೆ, ಎನ್.ಆರ್. ಮೊಹಲ್ಲ, ಮೇದರ್ ಬ್ಲಾಕ್, ಹೆಬ್ಬಾಳ್, ಮೇಟಗಳ್ಳಿ, ಒಂಟಿಕೊಪ್ಪಲ್, ವಿಜಯನಗರ, ಯಾದವಗಿರಿ, ಗೋಕುಲಂ, ದಟ್ಟಗಳ್ಳಿ, ಬೋಗಾದಿ 2ನೇ ಹಂತ, ಶಾರದದೇವಿನಗರ, ಕುವೆಂಪುನಗರ, ವಿದ್ಯಾರಣ್ಯಪುರಂ, ಸಿದ್ಧಾರ್ಥ ಬಡಾವಣೆ ಸೇರಿದಂತೆ ಇತರೆಡೆ ಗಾಳಿ ಸಮೇತ ತಡರಾತ್ರಿವರೆಗೂ ಮಳೆ ಸುರಿಯಿತು. ಅಲ್ಲದೆ ಜೋರು ಮಳೆಯಿಂದಾಗಿ ಚರಂಡಿ ನೀರು ರಸ್ತೆ ಮೇಲೆ ಹರಿದು ರಸ್ತೆಗಳೆಲ್ಲ ಹೊಳೆಯಂತೆ ಕಾಣುತ್ತಿದ್ದವು. ಮಳೆ ಅವಘಡ ಕುರಿತು ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ ಮತ್ತು ಅಭಯ ತಂಡವನ್ನು 'ಮೈಸೂರು ಮಿತ್ರ' ಪ್ರತಿನಿಧಿ ಸಂಪರ್ಕಿಸಿದಾಗ ಯಾವುದೇ ಅವಘಡ ಈವರೆಗೂ ವರದಿಯಾಗಿಲ್ಲ ಎಂದು ತಿಳಿಸಿದ್ದಾರೆ.

ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು, ಜೂ.5– ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ 2022ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಜನವರಿ 1ರಿಂದ ಜೂನ್ 30ರವರೆಗೆ ಪ್ರಕಟಣೆಯಾದ ಸಾಹಿತ್ಯ, ಕಲೆ, ವಿಜ್ಞಾನ, ಸ್ಪರ್ಧಾತ್ಮಕ, ಪಠ್ಯ, ಸಾಂದರ್ಭಿಕ, ಮಕ್ಕಳ ಸಾಹಿತ್ಯ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ, ಇತ್ಯಾದಿ ವಿಷಯಗಳ ಕನ್ನಡ, ಆಂಗ್ಲ ಹಾಗೂ ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕ, ಲೇಖಕ ಪ್ರಕಾಶಕ, ಪ್ರಕಾಶಕರ ಹಾಗೂ ಪ್ರಕಟಣಾ ಸಂಸ್ಥೆಗಳಿಂದ ಪುಸ್ತಕಗಳನ್ನು ಆಹ್ವಾನಿಸಿದ್ದು, ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು, ಇಲ್ಲ ಕಾಪಿರೈಟ್ ಮಾಡಿಸಿರುವ ಪುಸ್ತಕದ ಪ್ರತಿಯನ್ನು ನೋಂದಣಿ ಪತ್ರದ ಪ್ರತಿಯೊಂದಿಗೆ ಆಯ್ಕೆಗಾಗಿ ಅರ್ಜಿಯೊಂದಿಗೆ ನಿರ್ದೇಶಕರ ಕಚೇರಿಗೆ ಜುಲೈ 20ರ ಸಂಜೆ 5ರ ಒಳಗಾಗಿ ಅರ್ಜಿ ಸಲ್ಲಿಸಬಹುದು.


ನಿಧನ

ಅಬ್ದುಲ್ ರೆಹಮಾನ್



ಮೈಸೂರು, ಜೂ.5– ಮೈಸೂರಿನ ರಾಜೀವ್‌ನಗರ ನಿವಾಸಿ, ಸ್ಕ್ರ್ಯಾಪ್ ವ್ಯಾಪಾರಿ ಅಬ್ದುಲ್ ರೆಹಮಾನ್ (43) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಜೂ.6) ಬೆಳಗ್ಗೆ 10 ಗಂಟೆಗೆ ಟಿಪ್ಪು ಸರ್ಕಲ್‌ನಲ್ಲಿರುವ ಖಬರಸ್ತಾನದ ಗೇಟ್ ನಂ.8ರಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಮ್ಮ



ಕೇರ್ಗಳ್ಳಿ ಗ್ರಾಮದ ನಿವಾಸಿ ದಿವಂಗತ ಕರಿಶೆಟ್ಟಿ ಅವರ ಪತ್ನಿ ಶ್ರೀಮತಿ ಮರಮ್ಮ ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಕೇರ್ಗಳ್ಳಿ ಗ್ರಾಮದಲ್ಲಿ ನೆರವೇರಿಸಲಾಯಿತು.

ಯುವ ಪರಿವರ್ತಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಜೂ.5– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜನಾರೋಗ್ಯ ಕೇಂದ್ರ, ಎಪಿಡಿಮಿಯಾಲಜಿ ವಿಭಾಗ ನಿಮ್ಹಾನ್ಸ್ ಸಹಯೋಗದಲ್ಲಿ ಅನುಷ್ಠಾನಗೊಂಡಿರುವ ಹಾಗೂ ರಾಜ್ಯ ಸರ್ಕಾರದ ಅನುದಾನಿತ ಯೋಜನೆಯಾದ ಯುವಜನ ಮಾನಸಿಕ ಆರೋಗ್ಯಕ್ಕೆ ಪೂರಕ ಸೇವೆಗಳ ಸಮಗ್ರ ಅಭಿವೃದ್ಧಿ ಮತ್ತು ಅನುಷ್ಠಾನ ಯೋಜನೆಯ ಅಡಿಯಲ್ಲಿ ಯುವಸ್ಪಂದನ ಕಾರ್ಯಕ್ರಮವು ಅನುಷ್ಠಾನಗೊಂಡಿದ್ದು ಗೌರವಧನದ ಆಧಾರದಲ್ಲಿ ಯುವ ಪರಿವರ್ತಕರ ಹುದ್ದೆಗೆ ಅರ್ಹ ಯುವಕ–ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಹುಣಸೂರು, ಪಿರಿಯಾಪಟ್ಟಣ, ಟಿ.ನರಸೀಪುರ ಮತ್ತು ಸರಗೂರು ತಾಲೂಕು ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. 21ರಿಂದ 35 ವರ್ಷದೊಳಗಿನ ಪದವಿ ಹಾಗೂ ಮೇಲ್ಪಟ್ಟ ವಿದ್ಯಾಭ್ಯಾಸ ಮಾಡಿರುವ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು. ಆಸಕ್ತರು ಜೂ.10ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೇರವಾಗಿ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ 0821–2444922, ಕ್ಷೇತ್ರ ಸಂಪರ್ಕಾಧಿಕಾರಿ ಎಂ.ಚೇತನ್, ಮೊ.ಸಂ: 9731947828, ಯುವ ಸಮಾಲೋಚಕಿ ಎಸ್.ಸುಷ್ಮಾ, ಮೊ.ಸಂ: 9482949161 ಸಂಪರ್ಕಿಸಿ.


ಗಿಡ–ಮರ ಕಾಪಾಡುವುದರೊಂದಿಗೆ ಪರಿಸರ ಸಂರಕ್ಷಿಸಿ

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ

ಮೈಸೂರು, ಜೂ. 5(ಎಂಟಿವೈ)– ಜನರು ತಮ್ಮ ಮನೆ ಬಳಿ ಹಾಗೂ ಸುತ್ತಮುತ್ತಲಿರುವ ಬಡಾವಣೆಗಳಲ್ಲಿರುವ ಗಿಡ–ಮರ ರಕ್ಷಣೆಯ ಜವಾಬ್ದಾರಿ ಹೊರುವ ಮೂಲಕ ಪರಿಸರ ಸಂರಕ್ಷಣೆಗೆ ಪಣತೊಡಬೇಕು ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದ್ದಾರೆ.

ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬೆಂಗಳೂರಿನ ವೃಕ್ಷ ಫೌಂಡೇಷನ್ ಆಯೋಜಿಸಿದ್ದ 'ಮರಗಳ ಗಣತಿ' ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ವಿಚಾರ ಯಾರೋ ಒಬ್ಬರಿಗೆ ಸೀಮಿತವಾದುದ್ದಲ್ಲ ಎಲ್ಲರ ಮೇಲೂ ಪರಿಸರ ಸಂರಕ್ಷಣೆಯ ಜವಾಬ್ದಾರಿ ಇದೆ ಎಂದರು.

ಇಂದಿನ ಪ್ರಜೆಗಳು ಪ್ರಭುಗಳೆನ್ನುತ್ತಾರೆ. ಇದರಿಂದಾಗಿ ಪ್ರತಿಯೊಬ್ಬರೂ ತಮ್ಮ ಮನೆ ಬಳಿ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿರುವ ಗಿಡ–ಮರಗಳ ಜವಾಬ್ದಾರಿ ವಹಿಸಿಕೊಳ್ಳಬೇಕು. ಅವುಗಳ ರಕ್ಷಣೆಗೆ ಸ್ಥಳೀಯರೇ ಕಂಕಣಬದ್ಧರಾಗಬೇಕು. ಆಗ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯ. ನಾವು ನಮ್ಮ ಸುತ್ತಲಿನ ಮರಗಿಡಗಳ ಬಗ್ಗೆ ತಿಳಿದುಕೊಳ್ಳುವುದರೊಂದಿಗೆ ಬೇರೆಯವರಿಗೆ ಅರಿವು ಮೂಡಿಸಬೇಕು ಎಂದರು.


ವೃಕ್ಷಾ ಫೌಂಡೇಷನ್‌ನಿಂದ ನಡೆದ ಕಾರ್ಯಕ್ರಮದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವೃಕ್ಷಗಣತಿ ಬಗ್ಗೆ ವೆಬ್‌ಸೈಟ್‌ನಲ್ಲಿರುವ ಮಾಹಿತಿ ವೀಕ್ಷಿಸಿದರು.

ಇತ್ತೀಚಿನ ದಿನಗಳಲ್ಲಿ ಪರಿಸರ ಮೇಲೆ ದೌರ್ಜನ್ಯದಿಂದಾಗಿ ಹವಾಮಾನದಲ್ಲಿ ವೈಪರೀತ್ಯ ಉಂಟಾಗುತ್ತಿದೆ. ಅಕಾಲಿಕ ಮಳೆ ಹೆಚ್ಚಾಗುತ್ತಿದೆ. ಪ್ರತಿಕೂಲ ವಾತಾವರಣದಿಂದ ಮಳೆಗಾಲವಲ್ಲದಿದ್ದರೂ ಮಳೆ ಬೀಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಾವಿನ ಹೂವು ಕಚ್ಚುವ ಸಮಯದಲ್ಲಿ ಮಳೆ ಬಂದಿರಲೇ ಇಲ್ಲ. ಹೂವು ಕಚ್ಚಿದ ಕೆಲವೇ ಸಮಯದಲ್ಲಿ ಮಳೆ ಬಂದರೆ ಅವುಗಳು ಉದುರುವುದರಿಂದ ಫಸಲು ಕ್ಷೀಣಿಸುತ್ತದೆ. ಇದಕ್ಕೆ ಪರಿಸರ ಮಾಲಿನ್ಯವೇ ಕಾರಣ. ಅದನ್ನು ತಡೆಗಟ್ಟಬೇಕಾದರೆ ಪರಿಸರ ಸಂರಕ್ಷಣೆ ಅಗತ್ಯ. ಜನರು ಈಗ ಸಣ್ಣದಾಗಿ ಯೋಚನೆ ಮಾಡಿದರೆ ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಯೋಜನವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ನಾನು ಮೊದಲಿಂದಲೂ ಪರಿಸರದ ಮೇಲೆ ಕಾಳಜಿಯಿಟ್ಟುಕೊಂಡಿದ್ದೇನೆ. ಅದರಲ್ಲೂ ರಾಜಮನೆದ ಜವಾಬ್ದಾರಿ ಪಡೆದ ದಿನದಿಂದಲೂ ಎಲ್ಲೆಡೆ ಪರಿಸರ ಸಂರಕ್ಷಿಸುವಂತೆ ಮೈಸೂರು ರಾಜಮನೆತನದ ಪರವಾಗಿ ಸಂದೇಶ ನೀಡುತ್ತಾ ಬಂದಿದ್ದೇನೆ. ರಾಜರ ಆಳ್ವಿಕೆ ಕಾಲದಲ್ಲಿ ಪ್ರತಿಯೊಂದು ರಸ್ತೆಗಳ ಎರಡೂ ಬದಿಯಲ್ಲೂ ಗಿಡ–ಮರ ಬೆಳೆಸಿದ್ದನ್ನು ಈ ಹಿಂದೆ ನೋಡಬಹುದಾಗಿತ್ತು. ರಸ್ತೆಯಲ್ಲಿ ಸಂಚರಿಸುವ ಜನರಿಗೆ ನೆರಳು ಬೀಳುವುದು ಅದರ ಉದ್ದೇಶವಾಗಿತ್ತು. ಮೈಸೂರು–ಬೆಂಗಳೂರು ಮುಖ್ಯರಸ್ತೆಯುದ್ದಕ್ಕೂ ಮರಗಳಿತ್ತು. ಆದರೆ ಈಗ ರಸ್ತೆ ಅಭಿವೃದ್ಧಿಗಾಗಿ ಮರ ಕಡಿಯಲಾಗಿದೆ ಎಂದು ವಿಷಾದಿಸಿದರು.

ಮೈಸೂರು ಸಂಸ್ಥಾನದ ಮೂಲಕ ಅತ್ಯುತ್ತಮ ಕೊಡುಗೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನ್ಮ ದಿನವನ್ನು ನಿನ್ನೆ ಆಚರಿಸಲಾಯಿತು. ಇಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರ ಕಂಠೀರವ ನರಸಿಂಹರಾಜ ಒಡೆಯರ್ ಅವರ ಜನ್ಮದಿನ. ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತಂದ ಕಂಠೀರವ ನರಸಿಂಹರಾಜ ಒಡೆಯರ್ ಅವರನ್ನು ಸ್ಮರಿಸಬೇಕು ಎಂದರು. ಈ ವೇಳೆ ಗಣತಿಗೆ ನೆರವಾದ ಸ್ವಯಂಸೇವಕರಿಗೆ ಗಿಡ ನೀಡಲಾಯಿತು. ವೃಕ್ಷ ಫೌಂಡೇಷನ್‌ನ ಅಧ್ಯಕ್ಷ ವಿಜಯ್ ನಿಶಾಂತ್, ರವಿಕುಮಾರ್, ಷರೀಫ್, ನವೀನ್, ತೇಜಸ್ವಿ ಭಾಗ್ಯಲಕ್ಷ್ಮಿ, ಮನೋಹರ್ ಇದ್ದರು.

ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ದಂಪತಿಗೆ ಸನ್ಮಾನ



ಮೈಸೂರು, ಜೂ.5(ಆರ್‌ಕೆಬಿ)– ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ವತಿಯಿಂದ ಭಾನುವಾರ ಆಯೋಜಿಸಿದ್ದ 'ಬ್ರಾಹ್ಮಣ ದಂಪತಿಗೆ ಗೌರವ– ಅಭಿನಂದನೆ' ಕಾರ್ಯಕ್ರಮದಲ್ಲಿ ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತು ಅವರ ಪತ್ನಿ ಮಹಾರಾಣಿ ಕಾಲೇಜು ಕಂಪ್ಯೂಟರ್ ಉಪನ್ಯಾಸಕಿ ಟಿ.ಎಸ್.ಕುಸುಮಾ ಅವರನ್ನು ಸನ್ಮಾನಿಸಲಾಯಿತು. ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ಸುಬ್ರಹ್ಮಣ್ಯ ದಂಪತಿಗೆ ಗೌರವಿಸಿದರು. ಈ ಸಂದರ್ಭದಲ್ಲಿ ಬ್ರಾಹ್ಮಣ ಮಹಾಸಭಾದ ವಲಯ ಅಧ್ಯಕ್ಷ ನಟರಾಜ್ ಜೋಯಿಸ್, ಹಿರಿಯ ಸಲಹೆಗಾರ ಹಿರಿಯಣ್ಣ ಸ್ವಾಮಿ, ಧರ್ಮಪ್ರವರ್ತಕ ಡಾ.ಭಾನುಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಕನ್ನಡ ರಕ್ಷಣಾ ನಿರ್ದೇಶನಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯಿಂದ ಸೂರು ಜಿಲ್ಲೆಯ 18 ವರ್ಷ ಮೇಲ್ಪಟ್ಟ ಹೆಣ್ಣುಮಕ್ಕಳಿಗಾಗಿ ಅನುಪಾಲನ ಗೃಹವನ್ನು ಆರಂಭಿಸಲು ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ. ಜೂ.10ರೊಳಗೆ ಮೈಸೂರಿನ 2ನೇ ಫೇಸ್, ವಿಜಯನಗರದ 4ನೇ ಹಂತದಲ್ಲಿರುವ ಅಂಜನಾದ್ರಿ ಮುಖ್ಯರಸ್ತೆಯ 1ನೇ ಮಹಡಿಯಲ್ಲಿರುವ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ ಇವರಿಗೆ ಸಲ್ಲಿಸುವುದು. ಮಾಹಿತಿಗೆ ದೂ.ಸಂ: 0821–2543003.

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೊದಲ ಪದವಿ ಪ್ರದಾನ ಸಮಾರಂಭ

ಮೈಸೂರು, ಜೂ.5– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಕಾಲೇಜಿನ ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಮೊದಲ ಪದವಿ ಪ್ರದಾನ ಸಮಾರಂಭ ನಡೆಯಿತು.

ಸಮಾರಂಭದಲ್ಲಿ ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ವಿವಿಧ ವಿಷಯಗಳಲ್ಲಿ ಒಟ್ಟು 274 ವಿದ್ಯಾರ್ಥಿಗಳು ಪದವಿ ಪಡೆದರು. ಇವರಲ್ಲಿ 40 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 232 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಪದವಿ ಪ್ರದಾನ ಭಾಷಣ ಮಾಡಿದ ಆಂಧ್ರಪ್ರದೇಶ ಗುಂಟೂರಿನಲ್ಲಿರುವ ವಿಜ್ಞಾನ ಫೌಂಡೇಶನ್ ಫಾರ್ ಸೈನ್ಸ್, ಟೆಕ್ನಾಲಜಿ ಅಂಡ್ ರಿಸರ್ಚ್ (ಡೀಮ್ಡ್) ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ನಾಗಭೂಷಣ್ ಉನ್ನತ ಶ್ರೇಣಿ ಹಾಗೂ ಪದವಿ ಪಡೆದ 10 ವಿದ್ಯಾರ್ಥಿಗಳಿಗೆ ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಸಿ.ಕೆ.ರೇಣುಕಾರ್ಯ ದತ್ತಿ ಪದಕ ಹಾಗೂ 5,000 ರೂ.ಗಳ ನಗದು ಬಹುಮಾನ ಮತ್ತು ರಾಮಣ್ಣ ವಿ. (ದಿ. ಶ್ರೀ ಸುಕೃತ್ ಅವರ ಹೆಸರಿನಲ್ಲಿ) ಇಬ್ಬರು ವಿದ್ಯಾರ್ಥಿಗಳಿಗೆ 1,000 ರೂ.ಗಳ ನಗದು ಬಹುಮಾನ ನೀಡಿ, ಗೌರವಿಸಿದರು.



ನಂತರ ಮಾತನಾಡಿದ ಅವರು, ಇಂದಿನ ತಾಂತ್ರಿಕ ಹಾಗೂ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ನಾವು ಯಂತ್ರೋಪಕರಣಗಳಿಗೆ ತಲೆ ಬಾಗುತ್ತಿದ್ದೇವೆ. ಇದು ನಮ್ಮನ್ನು ಸೃಜನಶೀಲ ವ್ಯಕ್ತಿತ್ವ, ಆಲೋಚಿಸುವ ಗುಣಗಳನ್ನು ಕುಂಠಿತಗೊಳಿಸುತ್ತಿದೆ. ವಿದ್ಯಾರ್ಥಿಗಳು ಮಹತ್ತರವಾದ ಮಹತ್ವಾಕಾಂಕ್ಷೆಗಳನ್ನು ಉಳ್ಳವರಾಗಬೇಕು. ಪ್ರತಿಯೊಬ್ಬರೂ ಪರಿಶ್ರಮದಿಂದ ಯಶಸ್ಸನ್ನು ಕಾಣಬೇಕೇ ಹೊರತು, ಕೇವಲ ಮಹತ್ವಾಕಾಂಕ್ಷೆಯಿಂದಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್ ಅತೀ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಮಾತನಾಡಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯ ಒಟ್ಟು ಕೋರ್ಸ್ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ, ವಿಶೇಷಚೇತನ, ಸೇನೆಯಲ್ಲಿ ಸೇವೆಸಲ್ಲಿಸುತ್ತಿರುವ ಮತ್ತು ಸೇನೆಯಿಂದ ನಿವೃತ್ತಿ ಹೊಂದಿರುವವರ ಮಕ್ಕಳಿಗೆ ಕೋರ್ಸ್ ಶುಲ್ಕದಲ್ಲಿ ಶೇ.25 ವಿನಾಯಿತಿ. ಕ್ರೀಡೆ ಮತ್ತು ಅತಿ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರವೇಶಾತಿಯ ಕೋರ್ಸ್ ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು ಎಂದರು.

ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಆರ್.ಮಂಜುನಾಥ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ರಮೇಶ್ ಹಾಗೂ ಸಂಸ್ಥೆ ಆಡಳಿತಾಧಿಕಾರಿ ಪ್ರೊ. ಪಿ.ಸರೋಜಮ್ಮ, ಖಜಾಂಚಿ ಎನ್.ವಿಜಯಕುಮಾರ್ ಹಾಗೂ ಅಡ್ವೈಸರಿ ಕಮಿಟಿ ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಶ್ರೀಮತಿ ಲಕ್ಷ್ಮೀಭೂಷಣ್ ಉಪಸ್ಥಿತರಿದ್ದರು. ಕಾಲೇಜಿನ ಶೈಕ್ಷಣಿಕ ಡೀನ್ ಡಾ. ಶ್ರೀಧರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಮುಖ್ಯ ಅತಿಥಿಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಕು. ಅನನ್ಯ ಭುವನ್ ಮತ್ತು ತಂಡ ನಾಡಗೀತೆ ಹಾಡಿದರು. ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ ಸ್ವಾಗತಿಸಿ ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ವಂದಿಸಿದರು. ಅಧ್ಯಾಪಕರಾದ ಶ್ರೀಮತಿ ಗೀತಾ, ಸುನೀಲ್ ಮತ್ತು ಶ್ರೀಮತಿ ರಚನಾ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು, ಪೋಷಕರು, ವಿದ್ಯಾರ್ಥಿಗಳು, ಎನ್‌ಎಸ್‌ಎಸ್, ಎನ್‌ಸಿಸಿ ಕೆಡೆಟ್‌ಗಳು, ಕಾಲೇಜಿನ ಸ್ವಯಂಸೇವಕ ವಿದ್ಯಾರ್ಥಿಗಳು, ನಿವೃತ್ತ ಪ್ರಾಧ್ಯಾಪಕರು ಹಾಗೂ ವಿಶೇಷ ಆಹ್ವಾನಿತರು ಹಾಜರಿದ್ದರು.



ಮೈಸೂರು ಅವಿಲಾ ಕಾನ್ವೆಂಟ್ ಪ್ರೌಢಶಾಲೆಯಲ್ಲಿ 2021–22ನೇ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ್ ಪಡೆದ ವತ್ಸಲ ಪಿ.ಪ್ರಭು, ಕನ್ನಡ ಮಾಧ್ಯಮದಲ್ಲಿ ಉನ್ನತ ಅಂಕಗಳಿಸಿದ ನಿಸರ್ಗ ಬಿ.ಆರ್. ಹಾಗೂ ಉತ್ತಮ ಅಂಕಗಳಿಸಿದ ಎಲ್ಲಾ ವಿದ್ಯಾರ್ಥಿನಿಯರನ್ನು ಆಡಳಿತ ಮಂಡಳಿ ಹಾಗೂ ಶಿಕ್ಷಕ ವರ್ಗದವರು ಸನ್ಮಾನಿಸಿ, ಗೌರವಿಸಿದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ತುರ್ತು ಕಾರ್ಯ ನಿಮಿತ್ತ ಜೂ.6ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಮುಖ್ಯ ರಸ್ತೆ, ಯೂನಿವರ್ಸಿಟಿ ಕ್ವಾರ್ಟರ್ಸ್, ಮುಸ್ಲಿಂ ಹಾಸ್ಟೆಲ್, ವಿಶ್ವ ಮಾನವ ಜೋಡಿ ರಸ್ತೆ ಮುರುಗನ್ ಮೆಡಿಕಲ್ಸ್‌ನಿಂದ ಕುಕ್ಕರಳ್ಳಿಕೆರೆ ರಸ್ತೆಯವರೆಗೆ, ಸರಸ್ವತಿಪುರಂ 5ರಿಂದ 10ನೇ ಮೇನ್, ಪಡುವಾರಳ್ಳಿ ಡಿಸಿ ರೆಸಿಡೆನ್ಸಿ, ರೀಜನಲ್ ಕಮಿಷನರ್ ಆಫೀಸ್, ಸಿಎಫ್‌ಟಿಆರ್‌ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟರ್ಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯರಸ್ತೆ, ವಾಗ್ದೇವಿನಗರ, ಜೆಸಿ ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಪಂ ಕಚೇರಿ, ಕೋರ್ಟ್, ಅರಸು ರಸ್ತೆ ಡಿಸಿ ಕಚೇರಿ, ಮಹಾರಾಜ, ಯುವರಾಜ ಕಾಲೇಜು ಸುತ್ತಮುತ್ತ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಮೆಟ್ರೋ ಪೋಲ್, ಜೆಎಲ್‌ಬಿ ರಸ್ತೆ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


6.06.2022 ಸೋಮವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಸಪ್ತಮಿ, ನಕ್ಷತ್ರ : ಮಖಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ಏಕಾದಶವಾರ ರುದ್ರ ಪಾರಾಯಣ, ಸಂಜೆ ಪವಮಾನ ಪಾರಾಯಣ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಓಟಿಕೇರ್ ಆಸ್ಪತ್ರೆ:** ಉಚಿತ ಕಿವಿ ಪರೀಕ್ಷೆ, ಸ್ಪೀಚ್ ಥೆರಪಿ, ಸಮಯ: ಬೆಳಗ್ಗೆ 11ರಿಂದ ಮಧ್ಯಾಹ್ನ 3ರ ವರೆಗೆ, ಸ್ಥಳ: ಅಗ್ರಹಾರ, ರಾಮಾನುಜ ರಸ್ತೆಯ ಆಸ್ಪತ್ರೆಯ ಆವರಣ.

■ **ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಒಕ್ಕೂಟ:** ಮೈಸೂರು ಜಿಲ್ಲಾ ಕೈಗಾರಿಕಾ ಸಂಘ, ಜಿಲ್ಲಾ ಸಣ್ಣ ಕೈಗಾರಿಕೆಗಳ ಒಕ್ಕೂಟ, ಕೈಗಾರಿಕಾ ಪ್ರಶಸ್ತಿ ಪುರಸ್ಕತರಿಗೆ ಅಭಿನಂದನಾ ಸಮಾರಂಭ ಹಾಗೂ B2B ಆನ್‌ಲೈನ್ ಪೋರ್ಟಲ್ www.mysbb2b.in ಉದ್ಘಾಟನೆ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಅಭಿನಂದನೆ: ನೀತಿ ಆಯೋಗ ಪ್ರಶಸ್ತಿ ಪುರಸ್ಕೃತ ಉದ್ಯಮಿ ಛಾಯಾ ನಂಜಪ್ಪ ಹಾಗೂ ಸರ್ವಶ್ರೇಷ್ಠ ಉದ್ಯಮಿ ಪ್ರಶಸ್ತಿ ಪುರಸ್ಕೃತ ಸತೀಶ್ ಎನ್, ಮುಖ್ಯ ಅತಿಥಿಗಳು: ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ವಾಸು, ಐಎಂಎಸ್ ಫೌಂಡೇಷನ್ ಸಂಸ್ಥಾಪಕ ಹೆಚ್.ವಿ.ಎಸ್.ಕೃಷ್ಣ, ಎಲ್ಯುಬಿ ಮೈಸೂರು ವಲಯ ಅಧ್ಯಕ್ಷ ಡಾ. ಮಹೇಶ್ ಶೆಣೈ, ಸ್ಥಳ: ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಸಮಯ: ಸಂಜೆ 5ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ ಶಂಕರ ದೇವನೂರು, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ ಲೇಖನ ಪ್ರಸ್ತುತಿ: ಡಾ. ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5ಕ್ಕೆ ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ: ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಟಿ.ಎಸ್ ಸ್ನೇಹಾ, ಎಂ.ಎ. ಶೋಭಾ, ವ್ಯಾಖ್ಯಾನ– ಡಾ.ಜಿ.ಆರ್.ತಿಪ್ಪೇಸ್ವಾಮಿ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ ನಿರ್ಮಾಣ: ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ ನಿರ್ಮಾಣ: ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು, ವಿಶೇಷ ಸರಣಿ ಯೋಗಗುರು ಡಾ. ಕೆ. ರಾಘವೇಂದ್ರ ಅವರೊಂದಿಗೆ ಸಂದರ್ಶನ.

ಮಧ್ಯಾಹ್ನ : 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು– ಬಸವರಾಜ್ ರಾಜ್ ಗುರು, 12.45 ನಮ್ಮ ಆರೋಗ್ಯ: ಮಧುಮೇಹ ರೋಗಿಗಳಲ್ಲಿ ಕಂಡುಬರುವ ಚರ್ಮದ ಸಮಸ್ಯೆಗಳೂ ಮತ್ತು ಆರೈಕೆ ಕುರಿತು ಡಾ. ಎಂ. ಸಂದೀಪ್ ಅವರೊಂದಿಗೆ ಮಾತುಕತೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ 'ಯೋಗ ಸುಯೋಗ' ಬಾನುಲಿ ಸರಣಿ, 3.00 ಎನ್. ನಂಜುಂಡಸ್ವಾಮಿ– ಹಾಡುಗಾರಿಕೆ, 4.00 ಮಹಿಳಾರಂಗ: ಡಾಕ್ಟರ್ ಸಮಯ 'ಋತುಬಂಧ' ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ. ಜಯಶ್ರೀ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: 'ಕಿಸಾನ್ ವಾಣಿ' ಔಷಧಿಯುತ ಸಸ್ಯಗಳ ಕೃಷಿ ಹಾಗೂ ವೈದ್ಯಕೀಯ ಚಿಕಿತ್ಸೆಯಲ್ಲಿ ಬಳಕೆ ಕುರಿತು ಡಾ. ಎಲ್.ಪಿ.ಅವಿನಾಶ್ ಅವರೊಡನೆ ಸಂದರ್ಶನ, 7.15 ಚಿಲ್ಲರೆ ವಿಷಯ: ಪ್ರವೀಣ್‌ಕುಮಾರ್ ಮಾವಿನಕಾಡು ಅವರಿಂದ ವಿನೋದ ಭಾಷಣ, 9.05 ಚಿಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30ಸವಿನೆನಪು.

ರಂಗಾಯಣದಿಂದ ವಿಶ್ವ ಪರಿಸರ ದಿನಾಚರಣೆ

ಭೂಮಿ ಯೋಗಕ್ಷೇಮ ಕಾಪಾಡುವ ನಿಟ್ಟಿನಲ್ಲಿ ಅದರೊಂದಿಗಿನ ನಮ್ಮ ಸಂಬಂಧ ಗಟ್ಟಿಗೊಳ್ಳುವುದು ಅಗತ್ಯ

ಸಾವಯವ ಕೃಷಿಕರೂ ಆದ ಪರಿಸರ ತಜ್ಞೆ ಜೂಲಿ ಕಾರ್ಯಪ್ಪ ಅಭಿಮತ



ಮೈಸೂರು,ಜೂ.5(ಪಿಎಂ)– ಭೂಮಿಯ ಆರೋಗ್ಯ ಮತ್ತು ಯೋಗಕ್ಷೇಮ ಕಾಪಾಡಬೇಕು. ಈ ನಿಟ್ಟಿನಲ್ಲಿ ಭೂಮಿಯೊಂದಿಗೆ ನಮ್ಮ ಸಂಬಂಧ ಗಟ್ಟಿಗೊಳ್ಳುವುದು ಅತ್ಯಗತ್ಯ ಎಂದು ಸಾವಯವ ಕೃಷಿಕರೂ ಆದ ಪರಿಸರ ತಜ್ಞೆ ಜೂಲಿ ಕಾರ್ಯಪ್ಪ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಕುಟೀರದ ಅಂಗಳದಲ್ಲಿ ಭಾನುವಾರ ರಂಗಾಯಣ ವತಿಯಿಂದ 'ರಂಗ ಹೊನ್ನಾರು–3' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಭೂಮಿ ತಾಯಿ ಸ್ವರೂಪಿಣಿ. ಅಂತಹ ಭೂದೇವಿಯೊಂದಿಗೆ ನಮ್ಮ ಸಂಬಂಧ ಗಟ್ಟಿಗೊಳ್ಳಬೇಕು. ಇಂದು ನಮ್ಮ (ಮಾನವನ) ಪ್ರವೃತ್ತಿಗಳಿಂದ ಭೂದೇವಿಯಿಂದ ದೂರ ಆಗುತ್ತಿದ್ದೇವೆ. ಭೂಮಿ ತಾಯಿಯನ್ನು ವಿಷಪೂರಿತಗೊಳಿಸಿದರೆ, ನಮ್ಮ ನಾಶ ಮಾತ್ರವಲ್ಲ, ನಮ್ಮ ಮುಂದಿನ ಪೀಳಿಗೆಗೂ ಉಳಿಗಾಲವಿಲ್ಲ. ಭೂಮಿ ತಾಯಿ ಅನುಭವಿಸುತ್ತಿರುವ ನೋವಿನ ಪರಿಣಾಮ ನಮ್ಮ ಮೇಲೂ ಆಗುತ್ತಿದೆ. ಏರುತ್ತಿರುವ ತಾಪಮಾನ, ನೈಸರ್ಗಿಕ ವಿಕೋಪ, ಹವಾಮಾನ ಬದಲಾವಣೆಯೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಸಸಿಗಳನ್ನು ನೆಟ್ಟು ಪೋಷಿಸುವ ಮೂಲಕ ನಾವು ಹೆಚ್ಚು ಆರೋಗ್ಯಕರ ಸಂಬಂಧವನ್ನು ಭೂಮಿಯೊಂದಿಗೆ ಹೊಂದಬೇಕು. ಭೂತಾಯಿ ನಮಗಾಗಿ ಬಹಳಷ್ಟು ಕಾಯ್ದಿರಿಸಿದ್ದಾಳೆ. ನಾವು ಎಷ್ಟೇ ವಿದ್ಯಾವಂತರಾಗಿದ್ದರೂ ಭೂತಾಯಿಗಿಂತ ನಮಗೆ ಹೆಚ್ಚು ತಿಳಿದಿಲ್ಲ. ಹೀಗಾಗಿ, ಪ್ರಕೃತಿಯ ಮುಂದೆ ವಿನಮ್ರವಾಗಿ ತಲೆಬಾಗಬೇಕು. ಅದರಿಂದ ನಾವು ಪ್ರೀತಿ, ಸಹಾನುಭೂತಿ, ಸೌಂದರ್ಯ ಪ್ರಜ್ಞೆಯನ್ನು ಕಲಿಯುತ್ತೇವೆ ಎಂದರು.

ನಾನು ಮೈಸೂರಿನ ಮಗಳು. ನಾನಿಲ್ಲಿ 1965ರಲ್ಲಿ ಜನಿಸಿದೆ ಆಗ ನಮ್ಮ ತಂದೆಯವರು ಸಿಎಫ್‌ಟಿಆರ್‌ಐನಲ್ಲಿ ನಿರ್ದೇಶಕರಾಗಿದ್ದರು. ಅಂದು ಆ ಸಂಸ್ಥೆಯ ಆವರಣ ಇಂದಿಗಿಂತ ಇನ್ನು ಹೆಚ್ಚಿನ ಹಸಿರಿನಿಂದ ಕೂಡಿತ್ತು ಅಂತೆಯೇ ಅಂದಿನ ಮೈಸೂರು ಇಂದಿಗಿಂತ ಹಸಿರುಮಯವಾಗಿತ್ತು ಎಂದು ತಮ್ಮ ಬಾಲ್ಯ ನೆನಪಿಸಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, 2020ರ ಜನವರಿಯಲ್ಲಿ ರಂಗಾಯಣಕ್ಕೆ ನಿರ್ದೇಶಕನಾಗಿ ನಾನು ಬಂದಾಗ, ಇಲ್ಲಿನ ಆವರಣದಲ್ಲಿ ಒಂದು ಸುತ್ತು ಹಾಕಿದೆ. ಆಗ ಸಹಜವಾಗಿಯೇ ನನ್ನಲ್ಲಿದ್ದ ಕೊಡಗಿನ ಸಸ್ಯ ಪ್ರೀತಿ ಜಾಗೃತಗೊಂಡಿತು. ಬಳಿಕ ಇದನ್ನು ಹಸಿರು ರಂಗಾಯಣ ಮಾಡಬೇಕೆಂದು ಅಂದೇ ನಿರ್ಧಾರ ಮಾಡಿದೆ. ಪ್ರತಿ ಬಾರಿ ಕೊಡಗಿಗೆ ಹೋದಾಗ, ಅಲ್ಲಿಂದ ಗಿಡಗಳನ್ನು ತಂದು ಇಲ್ಲಿ ನೆಡುತ್ತಿದ್ದೆ ಎಂದು ಹೇಳಿದರು.

ಗಿಡಗಳನ್ನು ನೆಡುತ್ತ ಈಗ ರಂಗಾಯಣ ಆವರಣ ಹಸಿರೀಕರಣಗೊಂಡಿದೆ. ಹಸಿರು ಮತ್ತು ಸ್ವಚ್ಛ ರಂಗಾಯಣ ನನ್ನ ಉದ್ದೇಶವಾಗಿತ್ತು ಅದನ್ನೀಗ ಸಾಧಿಸಿ, ಇಂದು ಮೂರನೇ ರಂಗ ಹೊನ್ನಾರು ಕಾರ್ಯಕ್ರಮಕ್ಕೆ ಬಂದಿದ್ದೇವೆ ಎಂದರು.

ರಾಜ್ಯದಲ್ಲಿ ಎಷ್ಟೋ ಗಿಡಗಳನ್ನು ನೆಡಲಾಗುತ್ತದೆ. ಆದರೆ ಅವುಗಳನ್ನು ಪೋಷಣೆ ಮಾಡಿ ಬೆಳೆಸುವಲ್ಲಿ ವಿಫಲವಾಗುತ್ತಿದ್ದೇವೆ. ನಾವು ನೆಟ್ಟ ಗಿಡಗಳಲ್ಲಿ ಒಂದು ಗಿಡವೂ ಸಾಯಲಿಲ್ಲ, ಕಾರಣ ಸಾಯಲು ನಾವು ಬಿಡಲಿಲ್ಲ ಇಲ್ಲಿನ ಮರಗಳಿಂದ ಉದುರುವ ಎಲೆಗಳನ್ನು ಗುಡಿಸಿ ಬಿಸಾಡುವುದನ್ನು ನಿಲ್ಲಿಸಿ, ಅವುಗಳನ್ನು ಒಂದು ರಾಶಿ ಹಾಕಲು ಪ್ರಾರಂಭಿಸಿ, ಅವುಗಳನ್ನು ಮರಗಳ ಬುಡಕ್ಕೆ ಹಾಕಲು ಶುರು ಮಾಡಲಾಯಿತು. ಅದೀಗ ಸಾವಯವ ಗೊಬ್ಬರವಾಗಿ ಬಳಕೆಯಾಗುತ್ತಿದೆ ಎಂದು ತಿಳಿಸಿದರು.

ನಮ್ಮ ಕೊಡಗಿನಲ್ಲಿ ಗ್ರಾಮವೊಂದಕ್ಕೆ ದೇವರ ಕಾಡು ಇರುತ್ತದೆ. ಆ ಗ್ರಾಮದ ಎತ್ತರ ಪ್ರದೇಶದಲ್ಲಿ ದೇವರ ಕಾಡು ನಿರ್ಮಾಣ ಮಾಡುತ್ತೇವೆ. ದೇವರ ಕಾಡಿನಲ್ಲಿ ದೇವಸ್ಥಾನಗಳನ್ನು ಕಟ್ಟುತ್ತಿರಲಿಲ್ಲ. ಅಲ್ಲಿ ಒಂದು ಕಲ್ಲು ನೆಟ್ಟು ಅದನ್ನೇ ಮಹಾದೇವ ಎಂದು ಕರೆಯುತ್ತಿದ್ದರು. ಈಗ ಅಲ್ಲಿ ದೊಡ್ಡ ಕಟ್ಟಡ ಕಟ್ಟಿ ದೇವಾಲಯ ನಿರ್ಮಿಸುವ ಪ್ರವೃತ್ತಿ ಶುರುವಾಗಿದೆ. ಅಲ್ಲಿರುವ ಮರಗಳನ್ನು ಕಡಿದು ದೇವಸ್ಥಾನ ಕಟ್ಟುವುದು ಅವೈಜ್ಞಾನಿಕವಲ್ಲವೇ? ಎಂದು ಪ್ರಶ್ನಿಸಿದರು.

ಕಲಾಮಂದಿರ ಅಲಂಕಾರಕ್ಕೆ ಸೀಮಿತ: ರಂಗಾಯಣ ಆವರಣದಲ್ಲಿ ಗಿಡ ನೆಟ್ಟ ಸಂದರ್ಭದಲ್ಲಿ ಕಲಾಮಂದಿರ ಆವರಣದಲ್ಲೂ 600 ಗಿಡ ನೆಡಲಾಯಿತು ಎಂದ ಅವರು, ನಾವು ಎಲ್ಲವನ್ನೂ ನೋಡಿಕೊಳ್ಳಲು ಸಾಧ್ಯವೇ? ಎಂದು ಪ್ರಶ್ನಿಸಿದರಲ್ಲದೆ, ಅಲ್ಲಿ ಸುಮಾರು 300ಕ್ಕೂ ಹೆಚ್ಚು ಗಿಡಗಳು ಸಾವನ್ನಪ್ಪಿದವು. ಅಲ್ಲಿ ಕೇವಲ ಬಣ್ಣ ಹೊಡೆಯೋದು, ಅಲಂಕಾರ ಮಾಡಿಕೊಳ್ಳುವುದು ಮಾತ್ರವೇ ಆಗುತ್ತಿದೆ ಎಂದು ಅಡ್ಡಂಡ ಸಿ.ಕಾರ್ಯಪ್ಪ ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ವಿವಿಧ ಅಕಾಡೆಮಿಗಳ ಪ್ರಶಸ್ತಿ ಪುರಸ್ಕೃತರಾದ ರಂಗಾಯಣದ ಸಂತೋಷ್‌ಕುಮಾರ್ ಕುಸನೂರು (ನಾಟಕ ಅಕಾಡೆಮಿ), ಸರೋಜಾ ಹೆಗಡೆ (ನಾಟಕ ಅಕಾಡೆಮಿ) ಮತ್ತು ಆಲೂರು ದೊಡ್ಡನಿಂಗಪ್ಪ (ಸಾಹಿತ್ಯ ಅಕಾಡೆಮಿ) ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ರಂಗಾಯಣ ಆವರಣದಲ್ಲಿ ಜೂಲಿ ಕಾರ್ಯಪ್ಪ ಮತ್ತು ಮತ್ತೊಬ್ಬ ಅತಿಥಿ ಪರಿಸರ ಸೇವಕ ಕೆ.ಆರ್.ಗುರುಕಾರ್ ಒಂದೊಂದು ಗಿಡ ನೆಟ್ಟು ನೀರೆರೆದರು. ಅಲ್ಲದೆ, ಜೂಲಿ ಕಾರ್ಯಪ್ಪ ಬಿ.ವಿ.ಕಾರಂತ ಶಿಲ್ಪವನ ಉದ್ಘಾಟಿಸಿದರು. ಸಭಾ ಕಾರ್ಯಕ್ರಮದ ಬಳಿಕ ಇಲ್ಲಿನ ಭೂಮಿಗೀತ ಸಭಾಂಗಣದಲ್ಲಿ ಬಹುರೂಪಿಗಳ ತಾಯಿ 'ಬಹುರೂಪಿ' ನಾಟಕೋತ್ಸವದ 30 ನಿಮಿಷಗಳ ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿ, ಪ್ರದರ್ಶಿಸಲಾಯಿತು.

ಬಯಲು ರಂಗ ಮಂದಿರ ಮಾಡಿಬಿಟ್ಟಾರು ಈ ಬುದ್ಧಿಜೀವಿಗಳು!

ಮುಂದೆ ಬರುವ ನಿರ್ದೇಶಕರಿಗೆ ಬಯಲು ಇಷ್ಟವಾಗಿ ಇಲ್ಲಿ (ರಂಗಾಯಣ ಆವರಣ) ಬಯಲು ರಂಗಮಂದಿರ ನಿರ್ಮಾಣ ಮಾಡಿಬಿಟ್ಟರೇ? ಎಂಬ ಆತಂಕವಿದೆ ಎಂದು ಹಾಸ್ಯಧಾಟಿಯಲ್ಲಿ ಹೇಳುವ ಮೂಲಕ ಸಭಿಕರನ್ನು ಅಡ್ಡಂಡ ಸಿ.ಕಾರ್ಯಪ್ಪ ನಕ್ಕು ನಲಿಯುವಂತೆ ಮಾಡಿದರು. ಮುಂದುವರೆದು ಮಾತನಾಡಿದ ಅವರು, ಅಂತಹವರನ್ನು ಬುದ್ಧಿಜೀವಿಗಳು ಎಂದು ಕರೆಯುತ್ತಾರೆ. ಹಾಗಾಗಿ ತುಂಬಾ ಬುದ್ಧಿವಂತಿಕೆಯಿಂದ ಈ ಮರಗಳನ್ನು ಕಡಿದು ಬಿಟ್ಟಾರು? ಎಂಬ ಭಯವಿದೆ ಎಂದು ಟೀಕಾ ಪ್ರಹಾರ ನಡೆಸಿದರು.

ಮನೆ ಬಾಗಿಲಿಗೆ ಡೀಸೆಲ್ ಪೂರೈಸುವ 'ಫ್ಯೂಯಲ್ ಬಡ್ಡಿ' ಮೈಸೂರಲ್ಲಿ ಕಾರ್ಯಾರಂಭ



ಮೈಸೂರು, ಜೂ.5–ಭಾರತದ ಅತೀ ದೊಡ್ಡ ಇಂಧನ ಸರಬರಾಜು ಸಂಸ್ಥೆಯಾದ 'ಫ್ಯೂಯಲ್ ಬಡ್ಡಿ' ಮೈಸೂರಲ್ಲಿ ಕಾರ್ಯಾರಂಭಗೊಂಡಿದ್ದು, ಈ ಸಂಸ್ಥೆಯ ಸೇವೆಗೆ ಮೈಸೂರು ಬಿಷಪ್ ಕೆ.ಎ.ವಿಲಿಯಂ ಅವರು ಚಾಲನೆ ನೀಡಿದರು.

ಫ್ಯೂಯಲ್ ಬಡ್ಡಿ ಆ್ಯಪ್ ಮೂಲಕ ಆರ್ಡರ್ ಮಾಡಿ ಮನೆ ಬಾಗಿಲಿಗೆ ಡೀಸೆಲ್ ತರಿಸಿಕೊಳ್ಳಬಹುದಾಗಿದೆ. ಮನೆ ಬಾಗಿಲಿಗೆ ಡೀಸೆಲ್ ಸರಬರಾಜು ಮಾಡುವ ಮೈಸೂರಿನ ಪ್ರಥಮ ಸಂಸ್ಥೆ ಇದಾಗಿದ್ದು, ಮೈಸೂರಿನ 50 ಕಿ.ಮೀ. ವ್ಯಾಪ್ತಿ, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲೂ ಮನೆ ಬಾಗಿಲಿಗೆ ಡೀಸೆಲ್ ಪೂರೈಸುವ ಸೇವೆಯನ್ನು ಈ ಸಂಸ್ಥೆ ಒದಗಿಸಲಿದೆ. ಸಂಸ್ಥೆಯ ನೇತೃತ್ವವನ್ನು ಫಾರೆಸ್ ಡಾಮಿನಿಕ್ ಮತ್ತು ಮೀನಾ ಅವರುಗಳು ವಹಿಸಿಕೊಂಡಿದ್ದಾರೆ. ಸಂಸ್ಥೆಯು ಇಂಧನ ಮೂಲವನ್ನು ನೇರವಾಗಿ ಓಎಂಸಿಯಿಂದ ಒದಗಿಸುತ್ತದೆ. ನಿಯಮಿತವಾಗಿ ಟ್ಯಾಂಕ್‌ಗಳನ್ನು ಖಾಲಿ ಮಾಡಲಾಗುತ್ತದೆ. ಇದರಿಂದ ಗ್ರಾಹಕರು ಸ್ವಚ್ಛವಾದ ಹಾಗೂ ಉತ್ತಮವಾದ ಇಂಧನವನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ. ಡೀಸೆಲ್ ಅನ್ನು ಯಾವಾಗ? ಎಲ್ಲಿಗೆ ಪೂರೈಸಬೇಕು ಎಂದು ಹೇಳಿದರೆ ಸಾಕು, ಅದೇ ಸ್ಥಳಕ್ಕೆ ಡೀಸೆಲ್ ಸರಬರಾಜು ಆಗುತ್ತದೆ. ಫ್ಯೂಯಲ್ ಬಡ್ಡಿ ಸಂಸ್ಥೆಯು ಅಗತ್ಯವಿರುವ ಎಲ್ಲಾ ಸರ್ಕಾರಿ ನಿಯಮಗಳನ್ನು ಪಾಲಿಸುತ್ತಿದೆ. ಅಗತ್ಯವಾದ ಪರ್ಮಿಟ್, ಅನುಮತಿ ಪಡೆದಿದ್ದು, ಕಾನೂನಾತ್ಮಕ ಕಾರ್ಯ ನಿರ್ವಹಿಸುತ್ತದೆ. ಫ್ಯೂಯಲ್ ಬಡ್ಡಿ ಕಡ್ಡಾಯವಾಗಿ ರಕ್ಷಣೆಯ ಮಾನದಂಡಗಳಿಗೆ ಬದ್ಧವಾಗಿದ್ದು, ಚಾಲಕರು ತರಬೇತಿ ಹೊಂದಿದ ಹಾಗೂ ವಾಣಿಜ್ಯ ರಹದಾರಿಗಳನ್ನು ಪಡೆದವರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಮಕ್ಕಳಿಂದ ಪರಿಸರ ಸಂರಕ್ಷಣೆಗಾಗಿ ಸೈಕಲ್ ಜಾಥಾ



ಮೈಸೂರು, ಜೂ.5–ಮೈಸೂರಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಮಾನಸ ಗಂಗೋತ್ರಿಯಲ್ಲಿ ಆಯೋಜಿಸಲಾಗಿತ್ತು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸೈಕಲ್ ಜಾಥಾ ಮತ್ತು ಫ್ಯಾನ್ಸಿ ಡ್ರೆಸ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸೈಕಲ್ ಜಾಥಾಕ್ಕೆ ಕುಲಪತಿ ಹೇಮಂತ್ ಕುಮಾರ್ ಚಾಲನೆ ನೀಡಿದರು. ಸಸ್ಯಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಅಮೃತೇಶ್, ಹಿರಿಯ ಉಪನ್ಯಾಸಕರಾದ ಡಾ. ಶಿವಮೂರ್ತಿ, ಡಾ. ಜನಾರ್ದನ್, ಡಾ. ನಾಗೇಂದ್ರನ್, ಡಾ. ಗಿರೀಶ್ ಜಾಥಾದ ನಡುವೆ ಮಕ್ಕಳಿಗೆ ಮಾನಸಗಂಗೋತ್ರಿಯ ವೃಕ್ಷಗಳ ಬಗ್ಗೆ ಮಾಹಿತಿ ನೀಡಿದರು. ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಕಾರ್ಯದರ್ಶಿ ಚಂದ್ರಶೇಖರ್ ಮತ್ತು ಮಲ್ಲರಾಜೇ ಅರಸು, ನಿರ್ದೇಶಕರಾದ ಡಾ.ಎಲ್.ಸವಿತ, ಪ್ರಧಾನಾಚಾರ್ಯ ಅನಿತ. ಡಿ ಉಪಸ್ಥಿತರಿದ್ದರು. ಮಾನಸ ಗಂಗೋತ್ರಿಯ ಬುದ್ಧವನದಲ್ಲಿ 3ರಿಂದ 7 ವಯಸ್ಸಿನ ಮಕ್ಕಳಿಗಾಗಿ "ಇರುವುದೊಂದೇ ಭೂಮಿ" ಎಂಬ ಶೀರ್ಷಿಕೆ ಅಡಿಯಲ್ಲಿ ಫ್ಯಾನ್ಸಿ ಡ್ರೆಸ್ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳು, ಪೋಷಕರು, ಶಿಕ್ಷಕರು, ಶಿಕ್ಷಕೇತರರು ಭಾಗವಹಿಸಿದ್ದರು.

ಒಂದು ದಿನದ ಪರಿಸರ ಪ್ರೇಮಿಗಳಾಗಬೇಡಿ, ವರ್ಷವಿಡೀ ಪರಿಸರ ಪ್ರೇಮಿಗಳಾಗಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಕರೆ



ಮೈಸೂರು, ಜೂ. 5(ಎಂಟಿವೈ)– ಜನರು ಪರಿಸರದೊಂದಿಗೆ ಸಹಬಾಳ್ವೆಯಿಂದ ಬದುಕುವುದನ್ನು ಕಲಿಯುವುದರೊಂದಿಗೆ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಸಲಹೆ ನೀಡಿದ್ದಾರೆ.

ವಿಶ್ವ ಪರಿಸರ ದಿನದ ಅಂಗವಾಗಿ ಮೈಸೂರು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯ ಮುಂಭಾಗ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ) ಆಯೋಜಿಸಿದ್ದ ಸೈಕಲ್ ಜಾಥಾಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲೆ ವಿವಿಧ ರೂಪದಲ್ಲಿ ದೌರ್ಜನ್ಯ ನಡೆಯುತ್ತಿದೆ. ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ಪರಿಸರದ ಮೇಲೆ ಆಗುವ ಹಾನಿ ತಡೆಗೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು.

ವಿಶ್ವ ಪರಿಸರ ದಿನದ ಅಂಗವಾಗಿ ಕೇವಲ ಒಂದು ದಿನಕ್ಕೆ ಮಾತ್ರ ಪರಿಸರ ಪ್ರೇಮಿಗಳಾಗುವುದಕ್ಕೆ ಸೀಮಿತವಾಗಬಾರದು. ವರ್ಷವಿಡೀ ಪರಿಸರ ಸಮತೋಲನ ಕಾಪಾಡುವುದಕ್ಕೆ ಚಿಂತನೆ ಮಾಡಬೇಕು. ಇತ್ತೀಚೆಗೆ ಕೇದಾರ್‌ನಾಥಕ್ಕೆ ಪ್ರವಾಸಕ್ಕೆ ಹೋಗಿದ್ದೆ. ಈ ವೇಳೆ ಅಲ್ಲಿನ ಬೆಟ್ಟಗುಡ್ಡಗಳ ಮೇಲೆ ಕಣ್ಣು ಹಾಯಿಸಿದಷ್ಟು ಎತ್ತರಕ್ಕೆ ಗುಡ್ಡಗಳೇ ಕಾಣುತ್ತವೆ. ಕೆಳಗೆ ನೋಡಿದಷ್ಟು ಪಾತಾಳ ಕಾಣುತ್ತವೆ. ಪ್ರಕೃತಿ ಸಮತೋಲನ ಹದಗೆಡಲು ನಾವು ಎಷ್ಟರ ಮಟ್ಟಿಗೆ ಕಾರಣರಾಗಿದ್ದೇವೆ ಎಂದು ಅವಲೋಕಿಸಬೇಕಾಗಿದೆ. ಇದುವರೆಗೆ ಎಷ್ಟು ಗಿಡ ಮರ ಕಡಿದು ಹಾಕಿದ್ದೀವಿ ಎಂದು ಯೋಚಿಸಬೇಕು ಎಂದು ಅವರು ಹೇಳಿದರು.

ನಾವುಗಳು ಯಾರೂ ಅಭಿವೃದ್ಧಿ ವಿರೋಧಿಯಲ್ಲ. ಕಾರ್ಖಾನೆಗಳ ಸ್ಥಾಪನೆಗೆ ವಿರೋಧಿಯಲ್ಲ. ಮೈಸೂರು ಸುತ್ತಮುತ್ತಲಿನ ಕೆರೆಗಳಿಗೆ ಕಾರ್ಖಾನೆಗಳು ಕಲುಷಿತ ನೀರನ್ನು ಬಿಡುತ್ತಿವೆ. ಈ ಸಂಬಂಧ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಇಂತಹ ಬೇಜವಾಬ್ದಾರಿತನ ಮುಂದುವರೆಸುತ್ತಾ ಹೋದರೆ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಸಂಕಷ್ಟ ಎದುರಾಗಬಹುದು. ಈ ಹಿನ್ನೆಲೆಯಲ್ಲಿ ಎಲ್ಲರೂ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿರುವುದರಿಂದ ಎಲ್ಲರೂ ಪರಿಸರ ರಕ್ಷಣೆಗೆ ಬದ್ಧರಾಗಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಲತಜ್ಞ ಪ್ರೊ.ರವಿಕುಮಾರ್, ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿ ಪ್ರೊ.ಜೋಸ್, ನಿರ್ದೇಶಕಿ ಸರಸ್ವತಿ, ಶಾಲಿನಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಸೈಕಲ್ ಜಾಥಾ ಟೌನ್‌ಹಾಲ್, ಮಹಾತ್ಮಗಾಂಧಿ ವೃತ್ತ, ಮಕ್ಕಾಜಿ ಚೌಕ, ಆಯುರ್ವೇದ ಆಸ್ಪತ್ರೆ ವೃತ್ತ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಕೋಟೆ ಆಂಜನೇಯ ದೇವಾಲಯದ ಆವರಣ ತಲುಪಿ ಕೊನೆಗೊಂಡಿತು.

ಮೈಸೂರು ದಟ್ಟಗಳ್ಳಿ 3ನೇ ಹಂತದ ಉದ್ಯಾನವನದಲ್ಲಿ 120 ಗಿಡ ನೆಟ್ಟು ಮುಡಾದಿಂದ ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ದಟ್ಟಗಳ್ಳಿ 3ನೇ ಹಂತದ ಉದ್ಯಾನವನ ಸಂಖ್ಯೆ 10ರಲ್ಲಿ (ಜೋಡಿ ಬೇವಿನ ಮರ ಸಮೀಪ) ಭಾನುವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಶಾಸಕ ಜಿ.ಟಿ.ದೇವೇಗೌಡ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮತ್ತಿತರರು ಚಿತ್ರದಲ್ಲಿದ್ದಾರೆ.


ಮೈಸೂರು,ಜೂ.5(ಪಿಎಂ)–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ಭಾನುವಾರ ಮೈಸೂರಿನ ದಟ್ಟಗಳ್ಳಿ 3ನೇ ಹಂತದ ಉದ್ಯಾನವನ ಸಂಖ್ಯೆ 10ರಲ್ಲಿ (ಜೋಡಿ ಬೇವಿನಮರ ಸಮೀಪ) ವಿವಿಧ ಜಾತಿಯ 120 ಗಿಡಗಳನ್ನು ನೆಡಲಾಯಿತು.

ಮಾಜಿ ಸಚಿವರೂ ಆದ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಉಸ್ತುವಾರಿ ಸಚಿವರು, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರು ತಮ್ಮ ರಾಜೀವ್ ಸ್ನೇಹ ಬಳಗದಿಂದ 30 ಸಾವಿರ ಗಿಡ ನೆಡುವ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಲಾಗಿದೆ. ರಾಜೀವ್ ಅವರು ಪರಿಸರದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದು, ಪ್ರತಿವರ್ಷ ಗಿಡಗಳನ್ನು ನೆಡಲು ನೀಡುವ ಮೂಲಕ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಹೆಚ್.ವಿ.ರಾಜೀವ್, ರಾಜೀವ್ ಸ್ನೇಹ ಬಳಗದಿಂದ ಲಕ್ಷವೃಕ್ಷ ಅಭಿಯಾನದಡಿ ಕಳೆದ ವರ್ಷದವರೆಗೆ 50 ಸಾವಿರ ಗಿಡಗಳನ್ನು ನೆಡಲು ನೀಡಲಾಗಿದೆ. ಈ ಬಾರಿ 20 ಸಾವಿರ ಗಿಡಗಳನ್ನು ವಿತರಣೆ ಮಾಡಲು ಮುಂದಾಗಿದ್ದೇವೆ. ಅಲ್ಲದೆ, ಇನ್ನು 10 ಸಾವಿರ ಗಿಡಗಳನ್ನು ಆಂಧ್ರಪ್ರದೇಶದ ರಾಜಮಂಡ್ರಿಯಿಂದ ತರಿಸಿ ಒಟ್ಟು 30 ಸಾವಿರ ಗಿಡಗಳನ್ನು ನೆಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ಮುಡಾ ಮತ್ತು ಪಾಲಿಕೆಯ ಉದ್ಯಾನಗಳಲ್ಲಿ ಈ ಗಿಡಗಳನ್ನು ನೆಡಲಾಗುವುದು. ಜೊತೆಗೆ ಅವುಗಳ ನಿರ್ವಹಣೆ ಜವಾಬ್ದಾರಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಮತ್ತು ಅದರಡಿಯ ಸ್ವಸಹಾಯ ಸಂಘಗಳಿಗೆ ನೀಡಲಾಗುವುದು. ಇದಕ್ಕೆ ಶ್ರೀಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಸಮ್ಮತಿಸಿದ್ದಾರೆ ಎಂದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಎಸ್‌ಕೆಡಿಆರ್‌ಡಿಪಿ ಮೈಸೂರು ನಿರ್ದೇಶಕ ಎಂ.ಲಕ್ಷ್ಮಣ್, ಯೋಜನಾಧಿಕಾರಿ ಶಕುಂತಲಾ, ಮೇಲ್ವಿಚಾರಕ ನಾಗಭೂಷಣ್‌ಪೈ ಮತ್ತಿತರರು ಹಾಜರಿದ್ದರು.



ಮೈಸೂರಿನ ಅಶೋಕಪುರಂ ಆದಿಕರ್ನಾಟಕ ಜನಾಂಗದ ರುದ್ರಭೂಮಿಯಲ್ಲಿ 20 ಸಸಿಗಳನ್ನು ನೆಡುವುದರ ಮೂಲಕ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ವತಿಯಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಪಿ.ರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ನಗರಾಧ್ಯಕ್ಷ ಕಂಸಾಳೆ ರವಿ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರು, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಸಿದ್ದಪ್ಪಾಜಿ, ಪದಾಧಿಕಾರಿಗಳಾದ ಚಂದ್ರ, ರಾಜೇಂದ್ರ, ಸ್ವಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಪರಿಸರ ದಿನಾಚರಣೆ



ಮೈಸೂರು,ಜೂ. 5(ಎಂಟಿವೈ)– ಉತ್ತಮ ಪರಿಸರದಿಂದ ಜನರ ಆರೋಗ್ಯವೂ ಚೆನ್ನಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕರು ಒಂದೊಂದು ಗಿಡವನ್ನು ನೆಡುವುದರ ಮೂಲಕ ಮುಂದಿನ ಪೀಳಿಗೆಗೆ ಪರಿಸರವನ್ನು ಉಳಿಸಿಕೊಳ್ಳಬೇಕಾಗಿದೆ ಎಂದು ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ್ ತಿಳಿಸಿದ್ದಾರೆ.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಮೈಸೂರಿನ ಜಯದೇವ ಆಸ್ಪತ್ರೆಯ ಆವರಣದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಇರುವುದೊಂದೇ ಭೂಮಿ. ಈ ಭೂಮಿಯನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಸಮಸ್ತ ಜನರ ಮೇಲಿದೆ. ಭೂಮಿಯು ಕಡಿಮೆ ಆಗುತ್ತಿದ್ದು, ನೀರು ಭೂಮಿಯನ್ನು ಆಕ್ರಮಿಸುತ್ತಿದೆ. ಮನುಷ್ಯನಿಗೆ ಕಾಯಿಲೆಗಳು ಬರಲು ಮುಖ್ಯಕಾರಣ ಪರಿಸರ ಹಾಳಾಗಿರುವುದು. ಆಹಾರದಲ್ಲಿ ಕಲಬೆರಕೆ, ಗಾಳಿ, ನೀರು, ಕಲುಷಿತವಾಗಿರುವುದರಿಂದ ಹೃದಯ ಖಾಯಿಲೆ, ಕ್ಯಾನ್ಸರ್, ಸಕ್ಕರೆ ಖಾಯಿಲೆ ಹೆಚ್ಚಾಗುತ್ತಿವೆ. ಕಳೆದ ಮೂರು ವರ್ಷದಿಂದ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಇಂದು 75 ಗಿಡಗಳನ್ನು ನೆಟ್ಟಿದ್ದೇವೆ ಆಸ್ಪತ್ರೆಯ ವೈದ್ಯೆ ಡಾ.ಶ್ವೇತಾರವರು ಪರಿಸರ ಪ್ರೇಮಿಯಾಗಿದ್ದು, ಟ್ರಾಮಾ ಕೇರ್ ಸೆಂಟರ್ ಆವರಣ, ನಿವೇದಿತ ನಗರದ ಸುತ್ತಮುತ್ತ 500 ಗಿಡಗಳನ್ನು ನೆಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಜಯದೇವ ಆಸ್ಪತ್ರೆಯ ಆರ್‌ಎಂಓ ಡಾ.ಪಶುಪತಿ, ವೈದ್ಯರಾದ ಡಾ.ರಾಜೀತ್, ಡಾ.ಮಂಜುನಾಥ್, ಡಾ.ಶ್ರೀನಿಧಿ ಹೆಗಡೆ, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ಇಂಜಿನಿಯರ್ ಸ್ವರೂಪ್, ಅರುಣ್ ಶುಶ್ರೂಷಕರಾದ ಮಂಜುನಾಥ್, ಯಶೋಧ, ಸಭೀನ್, ಸಯ್ಯದ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಕಂದಕಕ್ಕೆ ಉರುಳಿ ಬಿದ್ದ ಬಸ್, 22 ಮಂದಿ ಸಾವು

ಡೆಹ್ರಾಡೂನ್, ಜೂ. 5– ಸುಮಾರು 40 ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಬಸ್ಸೊಂದು ಉತ್ತರಾಖಂಡದಲ್ಲಿ ಕಂದಕಕ್ಕೆ ಉರುಳಿಬಿದ್ದಿದ್ದು, 17 ಮಂದಿ ಮೃತಪಟ್ಟಿದ್ದಾರೆ. ಯಮುನೋತ್ರಿ ಕಡೆಗೆ ಪ್ರಯಾಣಿಸುತ್ತಿದ್ದ ಬಸ್ ಉತ್ತರಾಖಂಡದ ದಮ್ತಾದಲ್ಲಿ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯ ಬಳಿ ಕಮರಿಗೆ ಬಿದ್ದಿದ್ದು ದುರಂತದಲ್ಲಿ 22 ಮಂದಿ ಸಾವನ್ನಪ್ಪಿದ್ದಾರೆ. ಮಧ್ಯಪ್ರದೇಶದ ಯಾತ್ರಾರ್ಥಿಗಳು ಯಮುನೋತ್ರಿಗೆ ತೆರಳುತ್ತಿದ್ದರು. ಸದ್ಯ ಪೊಲೀಸರು ಮತ್ತು ಎಸ್‌ಡಿಆರ್‌ಎಫ್ ತಂಡಗಳ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಅವೈಜ್ಞಾನಿಕ ಪಠ್ಯ ಪರಿಷ್ಕರಣೆ ವಿರುದ್ಧ ಸಾಹಿತಿಗಳು, ಚಿಂತಕರು ಮಾತನಾಡುತ್ತಿಲ್ಲ

ಎಂಎಲ್‌ಸಿ ಎ.ಎಚ್.ವಿಶ್ವನಾಥ್ ಬೇಸರ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ, ಚಿಂತನ ಚಿತ್ತಾರ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ಕಾದಂಬರಿಕಾರ ಪ್ರೊ.ಬಸವರಾಜ ನಾಯ್ಕರ 'ಅಮರಶಿಲ್ಪಿ ಜಕ್ಕಣ', 'ದೇಶಾಭಿಮಾನಿ ರಾಯಣ್ಣ' ಕಾದಂಬರಿಗಳನ್ನು ಎಂಎಲ್‌ಸಿ ಎ.ಎಚ್.ವಿಶ್ವನಾಥ್ ಬಿಡುಗಡೆಗೊಳಿಸಿದರು.

ಮೈಸೂರು, ಜೂ.5(ಎಸ್‌ಪಿಎನ್)–ಶಿಕ್ಷಣ ಇಲಾಖೆಯಲ್ಲಿನ ಪಠ್ಯಗಳಲ್ಲಿ ಅವೈಜ್ಞಾನಿಕ ಪರಿಷ್ಕರಣೆ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್, ಸಾಹಿತಿಗಳು, ಪ್ರಗತಿಪರ ಚಿಂತಕರು, ಕನ್ನಡ ಪರ ಹೋರಾಟಗಾರರು ಗಟ್ಟಿ ದನಿಯಲ್ಲಿ ಮಾತನಾಡುತ್ತಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ, ಚಿಂತನ ಚಿತ್ತಾರ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ಕಾದಂಬರಿಕಾರ ಪ್ರೊ.ಬಸವರಾಜ ನಾಯ್ಕರ ರಚಿತ 'ಅಮರ ಶಿಲ್ಪಿ ಜಕ್ಕಣ', 'ದೇಶಾಭಿಮಾನಿ ರಾಯಣ್ಣ' ಕಾದಂಬರಿಗಳು ಬಿಡುಗಡೆಗೊಳಿಸಿ ಮಾತನಾಡಿದರು.

ಜನಾದೇಶ ಪಡೆದ ಸರ್ಕಾರ ಜನರ ಆಶಯಕ್ಕೆ ವಿರುದ್ಧ ನಡೆದುಕೊಂಡರೆ ಅಂತಹ ನಡೆಯನ್ನು ಖಂಡಿಸಬೇಕು. ಆದರೆ, ಯಾವುದೇ ಕನ್ನಡ ಪರ ಹೋರಾಟಗಾರರು, ಸಾಹಿತಿಗಳು, ಪ್ರಗತಿಪರ ಚಿಂತಕರು, ಸ್ವಾಮೀಜಿಗಳು ಸಾರ್ವಜನಿಕವಾಗಿ ಖಂಡಿಸುತ್ತಿಲ್ಲ. ಸರ್ಕಾರದ ನಡೆ ಖಂಡಿಸಿದರೆ ಇವರಿಗೆಲ್ಲಾ ಸರ್ಕಾರದಿಂದ ಸಿಗುತ್ತಿರುವ ಸವಲತ್ತುಗಳಿಗೆ ಎಲ್ಲಿ ಕೊಕ್ಕೆ ಬೀಳುತ್ತದೆ ಎಂಬ ಭೀತಿಯಿಂದ ಸುಮ್ಮನಿರುವುದು ಸಲ್ಲದು ಎಂದರು.

ಇತ್ತೀಚೆಗೆ ರಾಜಕಾರಣಿಗಳು ಮಾಧ್ಯಮಗಳ ಮುಂದೆ ಬೇರೆಯವರ ವಿರುದ್ಧ ಮಾತನಾಡುವಾಗ 'ನಪುಂಸಕ' ಇತರೆ ಕೀಳುಮಟ್ಟದ ಪದ ಬಳಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಇಂತಹ ಪದ ಪ್ರಯೋಗದಿಂದ ಕನ್ನಡ ಭಾಷೆಯ ಘನತೆಯನ್ನು ವಿಶ್ವಮಟ್ಟದಲ್ಲಿ ಕುಗ್ಗಿಸಿದಂತೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ 'ಮತಾಂತರ ಕಾಯ್ದೆ'ಯನ್ನು ಜಾರಿಗೆ ತಂದಿದೆ. ಇದರ ಸಾಧಕ–ಬಾಧಕ ಕುರಿತು ಸಾರ್ವಜನಿಕವಾಗಿ ಚರ್ಚೆಯಾಗುತ್ತಿಲ್ಲ. 12ನೇ ಶತಮಾನದಲ್ಲಿ ಬಸವಣ್ಣ ವೈದಿಕ ಪರಂಪರೆ ವಿರುದ್ಧ ದಂಗೆ ಎದ್ದು, ಶರಣ ಪರಂಪರೆಯನ್ನು ಸ್ಥಾಪಿಸಿದರು. ಇದರಲ್ಲಿ 370ಕ್ಕೂ ಹೆಚ್ಚು ವಿವಿಧ ವರ್ಗದ ಶರಣರು ಭಾಗಿಯಾಗಿದ್ದಾರೆ. ಈ ಧರ್ಮದಲ್ಲಿ ಲಿಂಗಾಯತರು, ಕುರುಬರು, ಕುಂಬಾರರು, ಮಡಿವಾಳರು ಸೇರಿದಂತೆ ಎಲ್ಲಾ ವರ್ಗದವರಿದ್ದಾರೆ. ಇಂತಹ ಧರ್ಮವನ್ನು ಪ್ರತಿನಿಧಿಸುವ ಸ್ವಾಮೀಜಿಗಳು, ಚಿಂತಕರು, ಸಾಹಿತಿಗಳು ಸುಮ್ಮನಿರುವುದು ತರವೇ? ಎಂದು ಪ್ರಶ್ನಿಸಿದರು.

ಇಂದಿನ ಸರ್ಕಾರದಲ್ಲಿ ನಾಯಿ–ನರಿಗಳೆಲ್ಲಾ ಕುವೆಂಪು, ಬಸವಣ್ಣ, ಅಂಬೇಡ್ಕರ್ ಬಗ್ಗೆ ಮಾತನಾಡುತ್ತಿವೆ. ಅವರ ಸಾಧನೆಯನ್ನು ಪಠ್ಯದಲ್ಲಿ ಮರೆಮಾಚುವ ಕೆಲಸವಾಗುತ್ತಿದ್ದರೂ ಕನ್ನಡ ಮತ್ತು ಶರಣ ಸಾಹಿತ್ಯ ಪರಿಷತ್ ಪ್ರತಿನಿಧಿಗಳು ಸುಮ್ಮನಿರುವುದೇಕೆ ಎಂದು ಪ್ರಶ್ನಿಸಿದ ಅವರು, ಶಿಕ್ಷಣ ಇಲಾಖೆಯ ನಡೆಯನ್ನು ಇನ್ನಾದರು ಖಂಡಿಸಲಿ. ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿ ಪಡೆದ ಕುವೆಂಪು ಅವರ ಬಗ್ಗೆ, ವೈದಿಕ ಸಂಸ್ಕೃತಿ ವಿರುದ್ಧ ಮಾತನಾಡಿದ ಬಸವಣ್ಣನವರ ವಿರುದ್ಧ ಅಪಪ್ರಚಾರ ಮಾಡಿದರೆ ಸುಮ್ಮನಿರುವುದುಂಟೇ ಎಂದು ಪ್ರಶ್ನಿಸಿದರು.

ರಾಜಕೀಯ ಸಾಹಿತ್ಯಕ್ಕೂ ಮನ್ನಣೆ ಸಿಗಬೇಕು: ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯ, ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ, ನವ್ಯ, ಗದ್ಯ ಸಾಹಿತ್ಯ ಇರುವಂತೆ ರಾಜಕೀಯ ಸಾಹಿತ್ಯಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಮನ್ನಣೆ ಸಿಗಬೇಕು. ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು ತಮ್ಮ ಅಧಿಕಾರಾವಧಿಯಲ್ಲಿ ಯಾವಯಾವ ಜನಪರ ಕೆಲಸ ಮಾಡಿದ್ದಾರೆ ಎಂಬುದು ಇಂದಿನ ಯುವಕರಿಗೆ ತಿಳಿಸಿದಂತಾಗುತ್ತದೆ ಎಂದರು. ಈ ವೇಳೆ ಕಾದಂಬರಿಕಾರ ಹೆಚ್.ಎಸ್.ರೇಣುಕಾರಾಧ್ಯ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಚಿಂತನ ಚಿತ್ತಾರ ಪ್ರಕಾಶನದ ಪ್ರಕಾಶಕ ನಿಂಗರಾಜು ಚಿತ್ತಣ್ಣನವರ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಬಾಸ್ : ನನಗೆ ಒಬ್ಬ ಡ್ರೈವರ್ ಬೇಕು, ಸ್ಟಾರ್ಟಿಂಗ್ 2000 ಕೊಡ್ತೀನಿ
ಗುಂಡ : ಏನ್ ಗ್ರೇಟ್ ಸರ್ ನೀವು, ಸ್ಟಾರ್ಟಿಂಗ್ 2000 ಕೊಟ್ರೆ ಡ್ರೈವಿಂಗ್ ಸಂಬಳ ಎಷ್ಟು?

ಮೈಸೂರು ಮಿತ್ರ

ಸೋಮವಾರ, 6 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ

– ತರಾಸು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಲ್ಪರ ಸಂಘ ಅಭಿಮಾನ ಭಂಗ.

ನಿಮ್ಮ ಪತ್ರಗಳು

ಬಿಸಿಯೂಟದಲ್ಲಿ ವೈವಿಧ್ಯತೆ ಇರಲಿ!



ಮಾನ್ಯರೇ

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಆಹಾರ ಸೇವಿಸುತ್ತಿದ್ದಾರೆ ಇದರಿಂದ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದೆ. ಮಕ್ಕಳಿಗೆ ಪಾಠದ ಜೊತೆಗೆ ಸತ್ವಯುತ ಆಹಾರ ದೊರೆಯುವುದರಿಂದ ಕಲಿಕೆಯಲ್ಲಿ ಹೆಚ್ಚು ಲವಲವಿಕೆಯಿಂದ ತೊಡಗಿಸಿಕೊಳ್ಳುವಂತಾಗಿದೆ.

ಆದರೆ ಪ್ರಸ್ತುತ ಮಧ್ಯಾಹ್ನದ ಬಿಸಿಯೂಟದ ಸಾಂಬಾರಿಗೆ ಸರ್ಕಾರ ತೊಗರಿ ಬೇಳೆಯನ್ನು ಮಾತ್ರ ಸರಬರಾಜು ಮಾಡುತ್ತಿದೆ. ಆದರೆ ದಿನವೂ ತೊಗರಿಬೇಳೆ ಸಾಂಬಾರು ತಿನ್ನುವುದು ಮಕ್ಕಳಿಗೆ ಬೇಸರ ತರಿಸಬಹುದಲ್ಲವೇ? ತೊಗರಿಬೇಳೆಯ ಜೊತೆಗೆ ಕಡಲೇಕಾಳು, ಅವರೆಕಾಳು, ಹುರುಳಿಕಾಳು ಹಾಗೂ ಇನ್ನಿತರ ಕಾಳುಗಳನ್ನು ಮತ್ತು ಮಧ್ಯಾಹ್ನದ ಬಿಸಿಯೂಟಕ್ಕೆ ಮೊಟ್ಟೆ ಹಾಗೂ ಬಾಳೆಹಣ್ಣನ್ನು ಸರಬರಾಜು ಮಾಡಿದರೆ ಉತ್ತಮ ಪೌಷ್ಟಿಕಾಂಶ ದೊರೆಯಲು ಸಾಧ್ಯವಾಗುತ್ತದೆ. ಮಕ್ಕಳು ಇನ್ನಷ್ಟು ಆರೋಗ್ಯದಿಂದಿರಲೂ ನೆರವಾದಂತಾಗುತ್ತದೆ. ಸರ್ಕಾರ ಈ ಬಗ್ಗೆ ಯೋಚಿಸಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಬಸವ ಎಕ್ಸಪ್ರೆಸ್ ರೈಲು ಪ್ರಯಾಣದ ನರಕಯಾತನೆ



ಮಾನ್ಯರೇ,

ಬಸವ ಎಕ್ಸಪ್ರೆಸ್ ರೈಲಿನಲ್ಲಿ ಜೂ.5 ರಂದು ನಾವು ಮಂತ್ರಾಲಯದಿಂದ ಮೈಸೂರಿನ ಕಡೆಗೆ ರಾತ್ರಿ ಪ್ರಯಾಣ ಬೆಳೆಸಿದಾಗ ಆದ ಅನುಭವವಿದು. ಮುಂಗಡ ಟಿಕೆಟ್ ಕಾಯ್ದಿರಿಸಿದ ಪ್ರಯಾಣ. ಪ್ರಯಾಣವದು. ಬೆಳಸಿದ ಕೆಲವೇ ಗಂಟೆಗಳಲ್ಲಿ ನಮಗೆ ನರಕಯಾತನೆ ಶುರುವಾಯಿತು. ಹೆಸರಿಗಷ್ಟೆ ಅದು ಕಾಯ್ದಿರಿಸಿದ ಪ್ರಯಾಣ, ಆದರೆ ಅದು ನಿಜಕ್ಕೂ ಸಂತೆಯಂತೆ ಇತ್ತು, ಇಡೀ ರಾತ್ರಿ ಕನಿಷ್ಠ ಒಂದು ಗಂಟೆಯೂ ನೆಮ್ಮದಿಯಿಂದ ಮಲಗಲು ಆಗಲಿಲ್ಲ. ಇದು ಮೊದಲ ಭಾಗ, ನಂತರ ಅದಕ್ಕಿಂತ ಹೆಚ್ಚಿನ ತೊಂದರೆಯಾಯಿತು.

ಇಡೀ ರಾತ್ರಿ ಬೆಂಗಳೂರು ತಲುಪುವ ತನಕ ಶೌಚಾಲಯದಲ್ಲಿ ಒಂದು ಹನಿ ನೀರು ಬರಲಿಲ್ಲ, ನಾವು ಫೋನ್ ಮೂಲಕ ದೂರು ನೀಡಿದ ಕಾರಣದಿಂದ ಬೆಂಗಳೂರಿನಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಲಾಯಿತು. ಆದರೆ ಶೌಚಾಲಯ ಸ್ವಚ್ಛಗೊಳಿಸಿರಲಿಲ್ಲ. ಇದನ್ನು ಇಲಾಖೆಯ ಗಮನಕ್ಕೆ ತಂದಾಗ ಸಹ ಆ ತುದಿಯಲ್ಲಿ ಮಾತನಾಡಿದ ವ್ಯಕ್ತಿ ನಿಸ್ಸಹಾಯಕನಂತೆ ಮಾತನಾಡಿದರು. ರೈಲ್ವೆ ಇಲಾಖೆ ತನ್ನ ಆದಾಯ ವೃದ್ಧಿ ಮಾಡಿಕೊಳ್ಳುವುದರೊಂದಿಗೆ ಪ್ರಯಾಣಿಕರ ಹಿತ ಕಾಯಬೇಕು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇತ್ತ ಗಮನ ಹರಿಸದೆ ಇದ್ದರೆ ಜನ ನರಕಯಾತನೆ ಅನುಭವಿಸಬೇಕಾಗುತ್ತದೆ.

–ಮೈಕಾ. ಪ್ರೇಮ್‌ಕುಮಾರ್, ಮೈಸೂರು

ಕೆಸರೆ ಪಾರ್ಕ್‌ಗೆ ಅಗತ್ಯ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಹೊರವಲಯದಲ್ಲಿರುವ ಕೆಸರೆ 3ನೇ ಹಂತದ ಬಡಾವಣೆಯ ನಾಗಲಿಂಗೇಶ್ವರ ದೇವಾಲಯದ ಬಳಿ ಪಾಲಿಕೆಯಿಂದ ನಿರ್ಮಿಸಿರುವ ಉದ್ಯಾನವನದಲ್ಲಿ ಅಗತ್ಯ ಮೂಲ ಸೌಕರ್ಯ ಹಾಗೂ ಸ್ವಚ್ಛತೆಯಿಲ್ಲದೇ ಅಧ್ವಾನದಿಂದ ಕೂಡಿದೆ. ಇದರಿಂದ ಪಾರ್ಕ್‌ನಲ್ಲಿ ಮುಂಜಾನೆ ಹಾಗೂ ಸಂಜೆಯ ವೇಳೆ ವಾಯುವಿಹಾರಕ್ಕೆ ಬರುವ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ.

ವಾಯುವಿಹಾರಕ್ಕೆ ಬರುವವರಿಗೆ ವಿಶ್ರಮಿಸಲು ಕಲ್ಲು ಬೆಂಚು, ಬಾಯಾರಿದವರಿಗೆ ಕುಡಿಯಲು ನೀರಿನ ವ್ಯವಸ್ಥೆಯಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಪಾರ್ಕ್‌ನಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ಹಾಗೂ ಕಸವನ್ನು ತೆರವುಗೊಳಿಸದೇ ಇರುವುದರಿಂದ ಅನೈರ್ಮಲ್ಯ ವಾತಾವರಣ ಉಂಟಾಗಿದೆ.

ನಗರಪಾಲಿಕೆ ಅಧಿಕಾರಿಗಳು ಇತ್ತ ಗಮನ ಹರಿಸಿ ಪಾರ್ಕ್‌ಗೆ ಕುಡಿಯುವ ನೀರು, ಕಲ್ಲುಬೆಂಚು ಮೊದಲಾದ ಮೂಲ ಸೌಕರ್ಯವನ್ನು ಕಲ್ಪಿಸುವುದರೊಂದಿಗೆ ಪಾರ್ಕ್‌ನಲ್ಲಿ ಬೆಳೆದಿರುವ ಗಿಡಗಂಟಿಗಳು ಹಾಗೂ ಕಸವನ್ನು ತೆರವುಗೊಳಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಕ್ರಮ ಕೈಗೊಳ್ಳಬೇಕಾಗಿದೆ.

– ಆನಂದರಾವ್ ನಖಾತೆ, ಮೈಸೂರು

ಅರೇನಹಳ್ಳಿ, ರಾವಂದೂರಿಗೆ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೇ


ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಾಲೂಕುಗಳಿಗೆ ಪ್ರಮುಖ ಸಂಪರ್ಕದ ಮುಖ್ಯರಸ್ತೆಯಲ್ಲಿರುವ ಅರೇನಹಳ್ಳಿ ಗ್ರಾಮ ಹಾಗೂ ಹೋಬಳಿ ಕೇಂದ್ರ ರಾವಂದೂರು ಗ್ರಾಮಗಳಿಗೆ ಬಸ್ ಸಂಪರ್ಕ ಕಲ್ಪಿಸುವ ಕೆಲಸ ಜರೂರಾಗಿ ಆಗಬೇಕಾಗಿದೆ.

ಈ ಮಾರ್ಗದಲ್ಲಿ ಬಸ್ ಸಂಚಾರ ಅಸಮರ್ಪಕತೆಯಿಂದ ಕೂಡಿರುವುದರಿಂದ ಖಾಸಗಿ ವ್ಯಾನ್, ಜೀಪ್‌ನಂತಹ ವಾಹನಗಳ ಓಡಾಟ ಹೆಚ್ಚಾಗಿದೆ. ಇವು ಆಗೊಮ್ಮೆ ಈಗೊಮ್ಮೆ ಇರುವ ಬಸ್‌ಗಳು ಬರುವ ಐದು ನಿಮಿಷ ಮೊದಲು ಹೊರಡುತ್ತವೆ. ಜತೆಗೆ ಮಿತಿಮೀರಿದ ಪ್ರಮಾಣದಲ್ಲಿ ಪ್ರಯಾಣಿಕರನ್ನು ತುಂಬಿಕೊಂಡು ಚಲಿಸುತ್ತವೆ. ಇದರಿಂದಾಗಿ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಪ್ರಯಾಣಿಕರಿಂದ ಅಧಿಕ ಹಣವನ್ನು ಸಹ ಪಡೆಯಲಾಗುತ್ತಿದೆ.

ಈ ಮೊದಲು ಪಿರಿಯಾಪಟ್ಟಣ ತಾಲೂಕಿನಲ್ಲಿ ಬಸ್ ಡಿಪೋ ಇರಲಿಲ್ಲ. ಇಲ್ಲಿಗೆ ಹುಣಸೂರು ಮತ್ತು ಕೆಆರ್ ನಗರ ತಾಲೂಕುಗಳ ಡಿಪೋಗಳಿಂದ ಬಸ್ ಸಂಪರ್ಕ ಕಲ್ಪಿಸಲಾಗಿತ್ತು. ಆದರೆ ಇತ್ತೀಚೆಗೆ ನಮ್ಮ ಪಿರಿಯಾಪಟ್ಟಣದಲ್ಲೇ ಬಸ್ ಡಿಪೋ ಆಗಿರುವುದರಿಂದ ಒಂದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಸ್ ಓಡಾಟವಿದ್ದರೆ ಅನೇಕ ಪ್ರಯಾಣಿಕರಿಗೆ ಮಹದುಪಕಾರವಾಗುತ್ತದೆ. ಈ ಬಗ್ಗೆ ಪಿರಿಯಾಪಟ್ಟಣದ ಸಾರಿಗೆ ನಿಯಂತ್ರಣ ಅಧಿಕಾರಿಗಳಿಗೆ ಸವಿನಯ ವಿಜ್ಞಾಪನೆ.

ರಾತ್ರಿ 7.30 ನಂತರ ಬಸ್ ಇರುವುದಿಲ್ಲ. ಇದರ ಬದಲು 8 ಗಂಟೆಗೆ ಇದ್ದರೆ ಒಳಿತು. ಊರಿಗೆ ಬರುವ ಕಾರ್ಮಿಕರು ಹಾಗೂ ಮತ್ತಿತರೇ ಜನರಿಗೆ ಅನುಕೂಲವಾಗುತ್ತದೆ.


–ಎ.ಎಸ್.ಗೋವಿಂದೇಗೌಡ,
ಅರೇನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲೂಕು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಅಮ್ಮಂದಿರ ದಿನ ಹಾಗೂ ಆದರ್ಶವಾದಿ ಮಗ



ಪಾಶ್ಚಿಮಾತ್ಯ ದೇಶದ ಸಂಸ್ಕೃತಿಯಲ್ಲಿ ಕೆಲವು ವಿಶೇಷ ವ್ಯಕ್ತಿಗಳ ದಿವಸಗಳನ್ನು ಆಚರಿಸಲಾಗುವುದು. ಅವುಗಳಲ್ಲಿ ನನಗೆ ಹೆಚ್ಚು ಪರಿಚಯವಿರುವುದು 'ಸಂತ ವ್ಯಾಲೈಂಟಿನ್ ದಿನ' ಅದನ್ನು ಪ್ರತಿ ವರ್ಷ ಫೆಬ್ರವರಿ 14ರಂದು ಆಚರಿಸಲಾಗುತ್ತದೆ. ಹೆಚ್ಚಾಗಿ ಯುವಕ–ಯುವತಿಯರಿಗೆ ಈ ದಿನದ ಆಚರಣೆ ತುಂಬಾ ಇಷ್ಟ. ಏಕೆಂದರೆ ಅದನ್ನು ಲವರ್ಸ್‌ಗಳ (ಪ್ರೀತಿಸುವವರ) ಪವಿತ್ರ ದಿನವೆಂದು ಪರಿಗಣಿಸಲಾಗುತ್ತದೆ.

ಅದೇನೆ ಇರಲಿ, ಜೊತೆಗೆ ವಿಶ್ವ ಸಂಸ್ಥೆಯವರಿಂದಲೂ ಅನೇಕ ಬೇರೆ ಬೇರೆ ವಿಷಯಕ್ಕೆ ಸಂಬಂಧಪಟ್ಟ ದಿನಗಳನ್ನು ಆಚರಿಸಲಾಗುತ್ತಿದೆ. ಇತ್ತೀಚೆಗೆ ಅಮ್ಮಂದಿರ ದಿನ (Mothers Day)ವನ್ನು ಮಾರ್ಚ್ 8ರಂದು ಆಚರಿಸಲಾಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ನಿನ್ನೆ ನನಗೆ ವಾಟ್ಸ್ ಅಪ್‌ನಲ್ಲಿ ಕೊಡಗಿನ 'ಶಕ್ತಿ' ಪತ್ರಿಕೆಯ ಅನಂತಶಯನ ಅವರಿಂದ ಒಂದು ಸಂದೇಶ ಬಂತು. ಅದನ್ನು ಓದಿ ನನ್ನ ಹೃದಯ ತುಂಬಿ ಬಂತು. ಅನಂತಶಯನ ಅವರಿಗೆ ತಕ್ಷಣ ಫೋನ್ ಮಾಡಿ ಮಾತಾಡಿದೆ. ಇದರ ಬಗ್ಗೆ 'ಭೂಮಂತ್ರ'ದಲ್ಲಿ ಬರೆಯಲಾ ಎಂದೆ. ಅವರ ನಗು ಫೋನ್‌ನಲ್ಲಿ ಅಲೆಅಲೆಯಾಗಿ ನನ್ನ ಕಿವಿ ತಲುಪಿತು. "ಅವರ ಲಿಂಕ್ ಕೊಡುತ್ತೀನಿ, ಮಾತಾಡಿ" ಎಂದರು.

ನನಗಂತೂ ನಮ್ಮ ಓದುಗರೊಟ್ಟಿಗೆ ಇದನ್ನು ಹಂಚಿಕೊಳ್ಳುವ ಹಂಬಲ. ಸರಿ ಅನಂತಶಯನ ಅವರು ಏನನ್ನು ನನಗೆ ವಾಟ್ಸ್‌ಅಪ್‌ನಲ್ಲಿ ಕಳುಹಿಸಿದರೋ ಅದನ್ನೇ ಇಲ್ಲಿ ಪ್ರಕಟಿಸುತ್ತಿದ್ದೇನೆ, ನೀವೂ ನನ್ನ ಹಾಗೆ ಓದಿ ಭಾವುಕರಾಗುತ್ತೀರಿ ಅಂದುಕೊಳ್ಳುತ್ತೇನೆ.

ಅಮ್ಮಂದಿರ ದಿನ...
ಮಗನಿಗೆ ಹೇಳಿ ಶುಭಾಶಯ!
ಮಾರ್ಚ್ 8 ಅಮ್ಮಂದಿರ ದಿನ.

ಸುಂದರ, ಮುದ್ದು ಮುಖದ, ಕನ್ನಡಕ ತೊಟ್ಟ ಬಿದ್ದಂಡ ಕಾಮಿನಿ ಟೀಚರ್ ನನಗೆ ಅಚ್ಚುಮೆಚ್ಚಿನ ಅಧ್ಯಾಪಕಿ. ಈಗ ಅವರಿಲ್ಲ. ಅವರ ನಗುಮುಖದ ಪುತ್ರಿಯರು ಇದ್ದಾರೆ. ಹಿರಿಯ ಪುತ್ರಿ ಕಂಬೆಯಂಡ ಪುಷ್ಪ ದೇವಯ್ಯ ಅವರು ನಕ್ಷತ್ರ ನಾಚುವಷ್ಟು ಹೆಸರು ಮಾಡಿದ್ದಾರೆ.

ನೃತ್ಯ, ಬರಹ, ಹಾಡು, ನಟನೆ, ಮಾಡೆಲಿಂಗ್, ಪತ್ರಿಕೋದ್ಯಮ... ಹೀಗೆ ಕಾಲಚಕ್ರ ತಿರುಗುತ್ತದೆ. ಅಲ್ಲೆಲ್ಲ ಓಡಾಡಿ ಹೆಸರು ಮಾಡಿರುವ ಆಕೆಗೆ ಈಗ ಗಾಲಿಕುರ್ಚಿಯೇ ಪ್ರಪಂಚ ಆಗಿದೆ.

'ಪುಷ್ಪಾ, Happy Mothers Day' ಎಂದು ಮಾರ್ಚ್ 8 ರಂದು ಆಕೆಗೆ ಸಂದೇಶ ಕಳುಹಿಸಿದೆ. ಉತ್ತರ ಬಂತು. 'ಅನಂತ್, ನಾನೀಗ ಕುರ್ಚಿಗೆ ಅಂಟಿ ಹೋಗಿರುವೆ. **ನನ್ನನ್ನು ಅಮ್ಮನಿಗಿಂತ ಚೆಂದ ಆರೈಕೆ ಮಾಡೋ ಮಗನಿಗೇ Mothers Day Wish** ಮಾಡಿದರೆ ಹೆಚ್ಚು ಸೂಕ್ತ' ಎಂದು ಬರೆದರು.

ಅವರ ಮಗ ಯಾರು?

ಸಿಂಹದ ಮಗು ಸಿಂಹವೇ ಎಂಬಂತೆ, ರೂಪ, ಗುಣ, ವರ್ಚಸ್ಸಿನಲ್ಲಿ ಅಮ್ಮನಿಗೆ ಸರಿಸಾಟಿಯಾಗಿ ಹೋಲುವ ಹಿಂದಿ ಚಿತ್ರರಂಗದಲ್ಲಿ ಹೆಸರು ಮಾಡುತ್ತಿರುವ, ಉತ್ತಮ Bollywood Star ಗುಲ್ಶನ್ ದೇವಯ್ಯ.

ದೇವಯ್ಯ ಕಾರ್ಯವ್ಯಾಪ್ತಿ ಮುಂಬೈ. ಅಮ್ಮ ಬೆಂಗಳೂರು. ಅಮ್ಮನ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ ಓಡಿ ಬರುವ ಗುಲ್ಶನ್, ಅಮ್ಮ ಓಕೆ ಅನ್ನುವ ತನಕ ಅಲ್ಲಿಂದ ಕದಲುವುದಿಲ್ಲ. **ಅಮ್ಮನಿಗೆ ತುತ್ತು ನೀಡುವುದು, ನೀರು, ಔಷಧಿ ಕುಡಿಸುವುದು, ತಲೆಕೂದಲು ತೊಳೆದು ಬಾಚಿ ಕೊಡುವುದು... ಯಾವ ಅಮ್ಮನಿಗೆ ಇದೆ ಈ ಭಾಗ್ಯ?** ಇಷ್ಟೇ ಅಲ್ಲ... ಅಮ್ಮನಿಗೆ ಡೆಂಗ್ಯೂ ಆದಾಗ ಸತತ ಹದಿನೈದು ದಿನ ಆಯಾಗಳನ್ನು ಆಚೆ ತಳ್ಳಿ, ಅಮ್ಮನಿಗೆ ಬೆಡ್ ಪ್ಯಾನ್ ಕೂಡಾ ತಾನೇ ಕೊಟ್ಟು, ಜೊತೆ ಕೂತು... ನೋವಿನ ನಡುವೆಯೂ ಅಮ್ಮನಿಗೆ ನಗು ತರಿಸುತ್ತಿದ್ದ ಬಾಲಿವುಡ್ ಹೀರೋ... ಗುಲ್ಶನ್ ಜೀವನದಲ್ಲೂ ರಿಯಲ್ ಹೀರೋ.

ಇಂತಹ ಗುಲ್ಶನ್‌ಗೆ 'ಹ್ಯಾಪಿ ಮದರ್ಸ್ ಡೇ' ಅಂದ್ರೆ ತಪ್ಪೇನಿದೆ ಅಲ್ವಾ?

Wish you a very happy mother's day Gulshan

ಅಂದಹಾಗೆ ಇಂದು ಗುಲ್ಶನ್ ಹುಟ್ಟುಹಬ್ಬ;

Wish you a very Happy birthday Gulshan. Let the Almighty shower you with abundant peace, joy, health n wealth.

- Anantha Shayana

Email:
kbg@starofmysore.com

ಇಂಧನ ಸಂರಕ್ಷಣೆ ಕಾರ್ಯಾಗಾರ ಯಶಸ್ವಿ



ಮೈಸೂರು, ಜೂ.5(ಎಂಕೆ)– ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಹಾಗೂ ವಿದ್ಯಾ ವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಒಂದು ತಿಂಗಳ 'ಇಂಧನ ಸಂರಕ್ಷಣೆ' ಜಾಗೃತಿ ಕಾರ್ಯಾಗಾರ ಯಶಸ್ವಿಯಾಗಿ ನೆರವೇರಿತು.

ವಿದ್ಯಾ ವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯ 50 ವಿದ್ಯಾರ್ಥಿಗಳ ತಂಡ ಪಾರ್ಕ್‌ಗಳು, ಶಾಪಿಂಗ್ ಮಾಲ್ ಸೇರಿದಂತೆ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಕಿರು ನಾಟಕ ಪ್ರದರ್ಶನ ಹಾಗೂ ಸುಮಾರು 200 ಮನೆಗಳಿಗೆ ತೆರಳಿ ವಿದ್ಯುತ್ ಉಳಿತಾಯದ ಬಗ್ಗೆ ಮಾಹಿತಿ ನೀಡಿ, ಅರಿವು ಮೂಡಿಸಿದರು. ಕೆಆರ್‌ಈಡಿಎಲ್‌ನ ತಾಂತ್ರಿಕ ಅಧಿಕಾರಿ ಡಿ.ಕೆ.ದಿನೇಶ್ ಕುಮಾರ್, ಕಾಲೇಜು ಪ್ರಾಂಶುಪಾಲ ಡಾ.ಡಿ.ಎಸ್.ಮಂಜುನಾಥ್, ಡಾ.ಚಿದ್ದ್ ಕುಮಾರ್, ಡಾ ಬಿಂದು ಎ.ಥಾಮಸ್ ಉಪಸ್ಥಿತರಿದ್ದರು.

ಪ್ರೇಕ್ಷಕರ ಹೃದಯ ಗೆದ್ದ ವೈದ್ಯರ 'ಗೀತ್ ಗಾತಾ ಚಲ್'

ಕನ್ನಡ, ಹಿಂದಿ ಚಿತ್ರಗೀತೆಗಳ ರಸದೌತಣ, ಸಂಗೀತ ನಿನಾದ

ಮೈಸೂರು, ಜೂ.5(ಎಂಕೆ)– ಸದಾ ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರುಗಳು ಇಂದು ತಮ್ಮ ನಾದ ಚಿಕಿತ್ಸೆ ಮೂಲಕ ನೆರೆದ ಪ್ರೇಕ್ಷಕರ ಹೃದಯವನ್ನು ಗೆದ್ದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಸಭಾಂಗಣದಲ್ಲಿ ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಹಾಗೂ ಕುಸುಮಾ ಶೆಣೈ ಪ್ರಾಯೋಜಕತ್ವದಲ್ಲಿ ವೈದ್ಯರು ಮತ್ತು ಅವರ ಕುಟುಂಬ ಸದಸ್ಯರಿಂದ ಏರ್ಪಡಿಸಿದ್ದ ಜನಪ್ರಿಯ 'ಗೀತ್ ಗಾತಾ ಚಲ್' 20ನೇ ಆವೃತ್ತಿಯ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ವೈದ್ಯರುಗಳು ತಮ್ಮ ಕಂಠಸಿರಿಯಲ್ಲಿ ಸುಮಧುರ ಗೀತೆಗಳನ್ನು ಹಾಡಿದರು.

ವೃತ್ತಿಯಲ್ಲಿ ವೈದ್ಯರಾಗಿ ಹಾಡುಗಾರರೂ ಆದ ಡಾ.ಪಿ.ಎ.ಕುಶಾಲಪ್ಪ , ಡಾ.ಎಂ.ಎಸ್.ನಟಶೇಖರ್, ಡಾ.ಹೇಮಲತಾ, ಡಾ.ಗಣೇಶ್‌ರಾವ್, ಡಾ.ಯು.ಜಿ.ಶೆಣೈ, ಡಾ.ಸ್ನೇಹಶ್ರೀ, ಡಾ.ಸುಷ್ಮಾ, ಡಾ.ಸೀತಾಲಕ್ಷ್ಮಿ, ಡಾ.ಸೋಮನಾಥ್, ಡಾ.ಪ್ರೀತಿ ಪ್ರಭು, ಡಾ.ಜಿ.ಡಿ.ರವಿಕುಮಾರ್, ಡಾ.ಶ್ಯಾಮ್ ಪ್ರಸಾದ್, ಡಾ.ಶಿವಾನಿ ನಾಯಕ್ ಹಾಗೂ ಕುಟುಂಬಸ್ಥರಾದ ಸ್ಪರ್ಶ, ಅಪೂರ್ವ, ಆರ್.ಎಲ್.ವರ್ಷ, ರಂಜಿತಾ, ಪೃಥ್ವಿ, ಶ್ವೇತಾ ಹಾಗೂ ದೀಕ್ಷಾ ಅವರುಗಳ ಗೀತೆಗಳು ಪ್ರೇಕ್ಷಕರನ್ನು ಸಂಗೀತದ ಅಲೆಯಲ್ಲಿ ತೇಲುವಂತೆ ಮಾಡಿತು. ನಿರೂಪಕ ಸೈಯದ್ ಅಫ್ತಾಬ್ ಅಹಮ್ಮದ್ ಮಾತಿನಲ್ಲೇ ಮೋಡಿ ಮಾಡಿದರು.

ಮೊದಲಿಗೆ ಡಾ.ಎಂ.ಎಸ್.ನಟಶೇಖರ್ 'ಕೋಟಿಗೊಬ್ಬ' ಚಿತ್ರದ 'ಕಲ್ಲಾದರೆ ನಾನು' ಹಾಡನ್ನು ಹಾಡುವ ಮೂಲಕ ಸಭಾಂಗಣದಲ್ಲಿ ಕನ್ನಡದ ಕಂಪನ್ನು ಹರಿಸಿದರು. ಬಳಿಕ ಡಾ.ಎ.ಎಲ್.ಹೇಮಲತಾ 'ಮೇರಾ ಸಾಯಾ' ಹಿಂದಿ ಚಿತ್ರದ 'ತೂ ಜಹಾನ್ ಚಲೇಗಾ', ಡಾ.ಪಿ.ಎ.ಕುಶಾಲಪ್ಪ 'ಆಪ್ ಕಿ ಕಸಮ್' ಚಿತ್ರದ 'ಜಿಂದಗಿ ಕೆ ಸಫರ್', ಡಾ.ಸ್ನೇಹಶ್ರೀ 'ಮಹಲ್' ಹಿಂದಿ ಚಿತ್ರದ 'ಆಯೇಗ ಆನೇವಾಲಾ' ಹಾಡುಗಳನ್ನು ಹಾಡಿ ಎಲ್ಲರ ಗಮನ ಸೆಳೆದರು.

ಡಾ.ಎಂ.ಎಸ್.ನಟಶೇಖರ್ ಹಾಗೂ ಅಪೂರ್ವ ನಟಶೇಖರ್ 'ಅನಾರಿ' ಹಿಂದಿ ಚಿತ್ರದ 'ದಿಲ್ ಕಿ ನಜರ್', ಡಾ.ಸೋಮನಾಥ್ ಹಾಗೂ ಡಾ.ಸೀತಾಲಕ್ಷ್ಮಿ 'ರಾತ್ ಔರ್ ದಿನ್' ಚಿತ್ರದ 'ದಿಲ್ ಕಿ ಗಿರಾ', ಆರ್.ಎಲ್.ವರ್ಷ '1942 ಎ ಲವ್ ಸ್ಟೋರಿ' ಚಿತ್ರದ 'ಪ್ಯಾರ್ ಹುವಾ ಚುಪ್ಕೆ ಹಾಡನ್ನು ಹಾಡಿದರೆ, ಡಾ.ಪ್ರೀತಿ ಪ್ರಭು ಅವರು,



ಮೈಸೂರಿನ ಮುಕ್ತ ವಿವಿ ಸಭಾಂಗಣದಲ್ಲಿ ಭಾನುವಾರ ನಡೆದ 'ಗೀತ್ ಗಾತಾ ಚಲ್' ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ (ಎಡದಿಂದ) ಚೆವರನ್ ಲ್ಯಾಬೋರೇಟರೀಸ್‌ನ ವ್ಯವಸ್ಥಾಪಕ ಶ್ಯಾಮ್ ಚೆರಿಯನ್, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಕರ್ನಲ್ ಎಂ.ದಯಾನಂದ್, ಶ್ರೀಮತಿ ಸರ್ವಮಂಗಳ, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ.ಶೇಖರ್ ಅವರನ್ನು ಸನ್ಮಾನಿಸಲಾಯಿತು. ನಿರೂಪಕಿ ರೂಪಾ ಪ್ರಕಾಶ್, ಕುಸುಮಾ ಶೆಣೈ, ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಡಾ.ರೇಖಾ ಕಾಮತ್, ಗೀತ್ ಗಾತಾ ಚಲ್ ಸ್ಥಾಪಕ ಪೋಷಕರಾದ ಡಾ.ಸಿ.ಉಮೇಶ್ ಕಾಮತ್, ಡಾ. ಪಿ.ಎ. ಕುಶಾಲಪ್ಪ ಉಪಸ್ಥಿತರಿದ್ದರು.

> ಗೀತ್ ಗಾತಾ ಚಲ್ ಸಂಗೀತ ಕಾರ್ಯಕ್ರಮವನ್ನು ಮೈಸೂರಿಗರು ಸ್ವೀಕರಿಸಿದ್ದಾರೆ. ಕೊರೊನಾ ಸಂದರ್ಭದಲ್ಲಿ ಯಾವಾಗ ಮತ್ತೆ ಸಂಗೀತ ಕಾರ್ಯಕ್ರಮ ಆಯೋಜನೆ ಮಾಡುತ್ತೀರಿ ಎಂದು ಕೇಳುತ್ತಿದ್ದರು. ಅಲ್ಲದೆ ನನ್ನನ್ನು ಉದ್ಯಮಿ ಎನ್ನುವ ಬದಲು ಗೀತ್ ಗಾತಾ ಚಲ್‌ನ ಪ್ರಮೋಟರ್ ಎನ್ನುತ್ತಿದ್ದರು. 20 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿರುವ ಸಂಗೀತ ಕಾರ್ಯಕ್ರಮಕ್ಕೆ ಮುಂದೆಯೂ ಸಂಪೂರ್ಣ ಸಹಕಾರ ನೀಡಲಾಗುವುದು.
>
> - **ಡಾ.ಎಂ.ಜಗನ್ನಾಥ್ ಶೆಣೈ**, ಖ್ಯಾತ ಉದ್ಯಮಿ

ಡಾ.ರಾಜ್‌ಕುಮಾರ್ ಅಭಿನಯದ 'ಜೀವನ ಚೈತ್ರ' ಚಿತ್ರದ 'ನಾದಮಯ ಈ ಲೋಕವೆಲ್ಲಾ' ಹಾಗೂ ಡಾ.ಗಣೇಶ್ ರಾವ್ ಅವರು, ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ' ಹಾಡುಗಳನ್ನು ಹಾಡಿ ನೆಚ್ಚಿನ ನಟರನ್ನು ಸ್ಮರಿಸಿದರು.

ಡಾ.ಪಿ.ಎ.ಕುಶಾಲಪ್ಪ ಹಾಗೂ ಡಾ.ಹೇಮಲತಾ 'ತಾಜ್‌ಮಹಲ್' ಹಿಂದಿ ಚಿತ್ರದ 'ಜೋ ವಾದ ಕಿಯಾ', ಅಪೂರ್ವ 'ದೋ ಬದನ್' ಚಿತ್ರದ 'ಲೋ ಆ ಗಯಿ, ಡಾ.ಶ್ಯಾಮ್ ಪ್ರಸಾದ್ 'ಬೈಜು ಬಾವ್ರಾ' ಚಿತ್ರದ 'ಓ ದುನಿಯಾ ಕೇ ರಖ್ವಾಲೆ, ಡಾ.ಯು.ಜಿ.ಶೆಣೈ 'ನಾರಾಜ್' ಚಿತ್ರದ 'ಸಂಭಾಲಾ ಹೈ ಮೈನೆ' ಹಾಡುಗಳನ್ನು ಹಾಡಿದರೆ, ಡಾ.ಜಿ.ಡಿ.ರವಿಕುಮಾರ್ 'ಆಕಾಶ್' ಚಿತ್ರದ 'ನೀನೆ ನೀನೇ ನನಗೆಲ್ಲಾ ನೀನೆ, ಡಾ.ಶಿವಾನಿ ನಾಯಕ್ 'ಗೆಜ್ಜೆಪೂಜೆ' ಚಿತ್ರದ 'ಗಗನವು ಎಲ್ಲೋ ಭೂಮಿಯೂ ಎಲ್ಲೋ' ಹಾಡುಗಳನ್ನು ಸುಮಧುರವಾಗಿ ಹಾಡಿ ಸಂಗೀತ ಪ್ರಿಯರನ್ನು ರಂಜಿಸಿದರು.

ಡಾ.ಕೆ.ಸುಶ್ಮಾ ಹಾಗೂ ಡಾ.ರವಿಕುಮಾರ್ 'ಚೋರಿ ಚೋರಿ' ಚಿತ್ರದ 'ಯೇ ರಾತ್ ಭೀಗಿ', ಪೃಥ್ವಿ ಹಾಗೂ ರಂಜಿತ 'ಛೋಟಿ ಸಿ ಬಾತ್' ಚಿತ್ರದ 'ಜಾನೇಮನ್ ಜಾನೇಮನ್', ಡಾ.ಸ್ಪರ್ಶ ಶೆಣೈ 'ಆರ್ ಪಾರ್' ಚಿತ್ರ 'ಕಭಿ ಆರ್ ಕಭಿ ಪಾರ್', ಡಾ.ಸೋಮನಾಥ್ ಹಾಗೂ ಡಾ.ಸೀತಾಲಕ್ಷ್ಮಿ 'ಇಜ್ಜತ್' ಚಿತ್ರದ 'ಯೇ ದಿಲ್ ತುಮ್ ಬಿನ್', ಡಾ.ಎಂ.ಎಸ್.ನಟಶೇಖರ್ ಹಾಗೂ ಅಪೂರ್ವ 'ಚಿರಾಗ್' ಚಿತ್ರದ 'ತೇರಿ ಆಂಖೋಂ ಕೆ ಶಿವಾ', ಡಾ.ಸ್ನೇಹಶ್ರೀ ಹಾಗೂ ಡಾ.ಶಿವಾನಿ 'ಸಮಾಧಿ' ಚಿತ್ರದ 'ಗೋರ್ ಗೋರ್ ಓ ಬಂಕೇ ಚೋರೆ', ಡಾ.ಹೇಮಲತಾ 'ಹೌರಾ ಬ್ರಿಡ್ಜ್' ಚಿತ್ರದ 'ಐಯೆ ಮೆಹರ್ಬಾನ್', ಡಾ.ನಟಶೇಖರ್ 'ಸಫರ್' ಚಿತ್ರದ 'ಜೀವನ್ ಸೆ ಭಾರಿ' ಹಾಗೂ ಡಾ.ಶ್ಯಾಮ್ 'ದುಲಾರಿ' ಚಿತ್ರದ 'ಸುಹಾನಿ ರಾತ್ ಢಲ್ ಚುಕಿ' ಹಾಡುಗಳನ್ನು ಹಾಡಿ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.



ಡಾ. ಸುಷ್ಮಾ, ಡಾ. ಶಿವಾನಿ ನಾಯಕ್, ಡಾ. ಹೇಮಲತಾ ಅವರಿಂದ ಗೀತಗಾಯನ

ಡಾ.ಗಣೇಶ್ ರಾವ್ ಹಾಗೂ ಡಾ.ಸ್ನೇಹಶ್ರೀ 'ನಾ ನಿನ್ನ ಮರೆಯಲಾರೆ' ಚಿತ್ರದ 'ನಾ ನೀನ್ನ ಮರೆಯಲಾರೆ' ಹಾಗೂ ಪೃಥ್ವಿ ಹಾಗೂ ರಂಜಿತ 'ಎಲ್ಲೆಲ್ಲಿ ನೋಡಲಿ ನಿನ್ನನ್ನೇ ಕಾಣುವೆ' ಹಾಡುಗಳನ್ನು ಹಾಡಿದರೆ, ಡಾ.ಪಿ.ಎ. ಕುಶಾಲಪ್ಪ ಹಾಗೂ ಡಾ.ವರ್ಷ 'ಕವಿರತ್ನ ಕಾಳಿದಾಸ' ಚಿತ್ರದ 'ಸದಾ ಕಣ್ಣಲಿ' ಹಾಗೂ ಡಾ.ಎಂ.ಎಸ್. ನಟಶೇಖರ್ 'ಮುಸ್ಸಂಜೆ ಮಾತು' ಚಿತ್ರದ 'ಏನಾಗಲಿ ಮುಂದೆ ಸಾಗು ನೀ' ಹಾಡನ್ನು ಹಾಡುವ ಮೂಲಕ ಎಲ್ಲರ ಮನಸ್ಸಿಗೂ ಹೊಸ ಉತ್ಸಾಹ ತುಂಬಿದರು.

ಸನ್ಮಾನ: ಸಂಗೀತ ರಸಸಂಜೆಗೂ ಮೊದಲು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಕರ್ನಲ್ ಎಂ.ದಯಾನಂದ್, ಶ್ರೀಮತಿ ಸರ್ವಮಂಗಳ, ಚೆವರನ್ ಲ್ಯಾಬೋರೇಟರೀಸ್‌ನ ವ್ಯವಸ್ಥಾಪಕ ಶ್ಯಾಮ್ ಚೆರಿಯನ್, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ.ಶೇಖರ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಕುಸುಮಾ ಶೆಣೈ, ಗೀತ್ ಗಾತಾ ಚಲ್ ಸ್ಥಾಪಕ ಪೋಷಕರಾದ ಡಾ.ಸಿ.ಉಮೇಶ್ ಕಾಮತ್, ಡಾ.ರೇಖಾ ಕಾಮತ್ ಮತ್ತಿತರರು ಉಪಸ್ಥಿತರಿದ್ದರು.



ಡಾ. ಎಂ.ಎಸ್.ನಟಶೇಖರ್ ಅವರು ಕೋಟಿಗೊಬ್ಬ ಚಿತ್ರದ ಕಲ್ಲಾದರೆ ನಾನು... ಹಾಡನ್ನು ಹಾಡುತ್ತಿರುವುದು



'ಗೀತ್ ಗಾತಾ ಚಲ್' 20ನೇ ಆವೃತ್ತಿಯ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರೇಕ್ಷಕರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿಂದ ಪರಿಸರ ದಿನಾಚರಣೆ



ಮೈಸೂರು, ಜೂ.5–ಇಂದು ವಿಶ್ವ ಪರಿಸರ ದಿನಾಚರಣೆಯನ್ನು ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ವತಿಯಿಂದ ಇಎಸ್ಐ ಆಸ್ಪತ್ರೆ ರಸ್ತೆ ಬದಿಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರು ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪರಿಸರವನ್ನು ನಾವು ಸಂರಕ್ಷಣೆ ಮಾಡಿದರೆ ಪರಿಸರವು ಮನುಜ ಕುಲವನ್ನು ರಕ್ಷಿಸುತ್ತದೆ. ಪರಿಸರವನ್ನು ನಾಶ ಮಾಡಿದರೆ ಪರಿಸರವು ಒಂದಲ್ಲಾ ಒಂದು ರೀತಿ ಮನುಷ್ಯನನ್ನು ವಿನಾಶದತ್ತ ಕೊಂಡೊಯುತ್ತದೆ ಎಂದರು. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಪರಿಸರ ಸಂತೋಷದಿಂದಿತ್ತು. ಮನುಷ್ಯ ಸಂಕಷ್ಟಕ್ಕೆ ಸಿಲುಕಿದ್ದೂ ಕೂಡ ಯಾರು ಮರೆಯುವಂತಿಲ್ಲ. ಇಂದಿನ ದಿನಗಳ ತಾಪಮಾನವನ್ನು ನೋಡಿದರೆ ನಮಗೆ ಮರಗಳ ಅವಶ್ಯಕತೆ ಎಷ್ಟಿದೆ ಎಂಬುವುದು ನಮಗೆ ತಿಳಿಯಲಾರದ ವಿಷಯವೇನಲ್ಲ. ಹೀಗಾಗಿ 'ಗಿಡ ನೆಡಿ' ಅಭಿಯಾನ ಪ್ರತಿಯೊಬ್ಬ ಭಾರತೀಯನ ನಡೆಯಾಗಿರಬೇಕು ಎಂದು ಹೇಳಿದರು. ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡರು, ಕಾರ್ಯದರ್ಶಿ ಪಿ.ವಿಶ್ವನಾಥ್, ಪ್ರಿನ್ಸಿಪಾಲ್ ಸದಾಶಿವೇಗೌಡ, ಚಾಮರಾಜ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಬಿ.ಶಣೈ, ರೈತ ಸಂಘದ ಬೆಳಗೊಳ ಸುಬ್ರಹ್ಮಣ್ಯ, ಜಯರಾವ್, ದಿನೇಶ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 6 ಜೂನ್ 2022

ಮುಂದಿನ ಪೀಳಿಗೆಗೂ ಭೂಮಿ ಉಳಿಸಬೇಕಿದೆ

ವಿಶ್ವ ಪರಿಸರ ದಿನಾಚರಣೆಯಲ್ಲಿ ಜಿಪಂ ಸಿಇಓ ಸಲಹೆ

ಮಂಡ್ಯ, ಜೂ.5(ಮೋಹನ್‌ರಾಜ್)– ಇರುವುದೊಂದೇ ಭೂಮಿ ಅದನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೂ ಉಳಿಸಬೇಕಿದೆ ಎಂದು ಜಿಪಂ ಸಿಇಓ ದಿವ್ಯಾ ಪ್ರಭು ಸಲಹೆ ನೀಡಿದರು.



ನಗರದ ಕಾಳಿಕಾಂಬ ದೇವಾಲಯದ ಆವರಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಪಂ, ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯ ವಿಭಾಗ ಮತ್ತು ವಲಯ, ನಗರಸಭೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಅನನ್ಯ ಆರ್ಟ್ಸ್, ಸುಧಾಮೂರ್ತಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪರಿಸರ ದಿನಚಾರಣೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೇರೆ ಜೀವರಾಶಿಗಳ ಬಗ್ಗೆ ಕಾಳಜಿ ವಹಿಸಬೇಕು. ಅದನ್ನು ಯೋಚಿಸದಿರುವವನು ಮನುಷ್ಯನೇ ಅಲ್ಲ. ಪ್ರಕೃತಿಯಲ್ಲಿ ಎಲ್ಲಾ ಜೀವಿಗಳು ಬದುಕುವುದಕ್ಕೆ ಅವಕಾಶವಿದೆ. ಅದನ್ನು ಕಸಿದುಕೊಳ್ಳುವ ಪ್ರಯತ್ನ ಮಾಡಬಾರದು. ಮಂಡ್ಯ ನಗರವನ್ನು ಗ್ರೀನ್ ಸಿಟಿ ಮಾಡಲು ಎಲ್ಲರೂ ಕೈಜೋಡಿಸಬೇಕು. ಎಲ್ಲ ಕಡೆ ಸಸಿಗಳನ್ನು ನೆಟ್ಟು ಗ್ರೀನ್ ಸಿಟಿ ಮಾಡಲು ನೆರವಾಗಬೇಕು ಎಂದರು.

ಎಸಿ ಐಶ್ವರ್ಯ ಮಾತನಾಡಿ, ಪ್ರಕೃತಿ ಮಾತೆ ಏನೆಲ್ಲಾ ಕೊಟ್ಟಿದ್ದಾಳೆ ಅದನ್ನು ಜಾಗ್ರತಿಯಿಂದ ಕಾಪಾಡಿಕೊಳ್ಳಬೇಕು. ಪ್ರಕೃತಿ ಜೊತೆಗೂಡಿ ಹೆಜ್ಜೆ ಹಾಕಬೇಕು. ಜಿಲ್ಲೆ ಕೃಷಿ ಪ್ರಧಾನವಾಗಿದೆ. ಜಿಲ್ಲೆಯನ್ನು ಪ್ರಕೃತಿಮಯ ಮಾಡುವುದು ಎಲ್ಲರ ಆದ್ಯ ಕರ್ತವ್ಯ. ಮಂಡ್ಯವನ್ನು ಹಸಿರೀಕರಣ ಮಾಡಬೇಕು ಎಂದರು.

ಪೌರಾಯುಕ್ತ ಮಂಜುನಾಥ್ ಮಾತನಾಡಿ, ಪರಿಸರ ದಿನಾಚರಣೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಪ್ರಕೃತಿ ನಾಶ ಮಾಡುವ ವಸ್ತುಗಳನ್ನು ತ್ಯಜಿಸಬೇಕು. ಪ್ಲಾಸ್ಟಿಕ್‌ನಿಂದ ಪರಿಸರಕ್ಕೆ ಬಹಳಷ್ಟು ಹಾನಿಯಾಗುತ್ತಿದೆ. ಇದನ್ನು ತಡೆಗಟ್ಟಲು ಕಾನೂನಿನಿಂದಲೇ ಆಗಬೇಕು ಎನ್ನುವುದಕ್ಕಿಂತ ಬದಲಿಗೆ ನಿಮ್ಮೆಲ್ಲರ ಸಹಕಾರ ಬೇಕು ಎಂದು ಮನವಿ ಮಾಡಿದರು.

ತಹಸೀಲ್ದಾರ್ ಕುಂಞ ಅಹಮ್ಮದ್, ಅರಣ್ಯಾಧಿಕಾರಿಗಳಾದ ಜ್ಯೋತಿ, ಬೆಟ್ಟಯ್ಯ, ಅನನ್ಯ ಹಾರ್ಟ್ ಸಂಸ್ಥೆ ಬಿ.ಎಸ್.ಅನುಪಮಾ, ಸಂಸ್ಥೆಯ ಶಿಲ್ಪಾ ವಸಂತ, ನಗರಸಭೆ ಪರಿಸರ ಅಭಿಯಂತರಾದ ರುದ್ರೇಗೌಡ, ಎಇಇ ರವಿಕುಮಾರ್, ತಂಬಾಕು ನಿಯಂತ್ರಣಾಧಿಕಾರಿ ತಿಮ್ಮರಾಜು, ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಕೆ.ಆರ್.ಪೇಟೆ ವಿವಿಧೆಡೆ ವಿಶ್ವ ಪರಿಸರ ದಿನಾಚರಣೆ

ಕೆ.ಆರ್.ಪೇಟೆ, ಜೂ.5(ಶ್ರೀನಿವಾಸ್)– ತಾಲೂಕಿನ ವಿವಿಧೆಡೆ ಗಿಡ ನೆಡುವ ಮೂಲಕ ವಿಶ್ವಪರಿಸರ ದಿನಾಚರಣೆ ಆಚರಿಸಲಾಯಿತು.



ಮಿನಿ ವಿಧಾನಸೌಧ: ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಎಂ.ವಿ.ರೂಪಾ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗಿಡಗಳನ್ನು ನೆಟ್ಟು ಅವುಗಳನ್ನು ಮಕ್ಕಳಂತೆ ಆರೈಕೆ ಮಾಡಿ ಜೋಪಾನ ಮಾಡಬೇಕು. ಮನೆಗೆರಡು ಮರ, ಊರಿಗೊಂದು ವನ ಎಂಬ ಹಿರಿಯರ ನಾಣ್ಣುಡಿಯನ್ನು ನನಸಾಗಿಸುವ ದಿಕ್ಕಿನಲ್ಲಿ ಪ್ರತಿಯೊಬ್ಬರೂ ತಮ್ಮ ಬದ್ಧತೆ ಹಾಗೂ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಪರಿಸರದ ಜೊತೆ ನಾವು ಅವಿನಾಭಾವ ಸಂಬಂಧ ಹೊಂದಿದ್ದು, ಕಾಡಿದ್ದರೆ ನಾಡು, ಕಾಡು ಮತ್ತು ಗಿಡಮರಗಳಿಂದ ನಾಡಿನ ಉಳಿವು ಎಂಬ ಸತ್ಯ ಸಂಗತಿ ಅರಿಯಬೇಕು ಎಂದರು. ಇದೇ ವೇಳೆ ತಾಲೂಕು ಆಡಳಿತ, ಅರಣ್ಯ ಇಲಾಖೆ ಸಹಯೋಗದಲ್ಲಿ ಕಂದಾಯ ಇಲಾಖೆ ನೇತೃತ್ವದಲ್ಲಿ ಪಟ್ಟಣದ ವಿವಿಧ ಶಾಲಾ ಕಾಲೇಜು ಮೈದಾನದಲ್ಲಿ ನೂರಾರು ಗಿಡಗಳನ್ನು ನೆಡಲಾಯಿತು.

ಈ ವೇಳೆ ತಾಲೂಕು ವಲಯ ಅರಣ್ಯಾಧಿಕಾರಿ ಹೆಚ್.ಎಸ್.ಗಂಗಾಧರ್, ಉಪ ವಲಯ ಅರಣ್ಯಾಧಿಕಾರಿ ರಾಘವೇಂದ್ರ, ಪುರಸಭೆ ಮುಖ್ಯಾಧಿಕಾರಿ ಎಂ.ಕೆ.ಕುಮಾರ್, ಪರಿಸರ ಇಂಜಿನಿಯರ್ ಅರ್ಚನಾ, ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷೆ ಚಂದ್ರಕಲಾ, ತಾಲೂಕು ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಹರೀಶ್, ಪಂಚಾಯತ್ ರಾಜ್ ಇಲಾಖೆ ಸಹಾಯಕ ನಿರ್ದೇಶಕ ಡಾ.ನರಸಿಂಹರಾಜು, ಗ್ರಾಮ ಲೆಕ್ಕಾಧಿಕಾರಿಗಳಾದ ಅಗ್ರಹಾರಬಾಚಹಳ್ಳಿ ವೃತ್ತದ ಸ್ಫೂರ್ತಿ, ಪೂಜಾ, ರೇಖಾ, ನಂದಿನಿ, ಪೂರ್ಣಿಮಾ ಮತ್ತಿತರರಿದ್ದರು.

ಗಂಜಿಗೆರೆ ಕೊಪ್ಪಲು: ತಾಲೂಕಿನ ಗಂಜಿಗೆರೆ ಕೊಪ್ಪಲು ಗ್ರಾಮದಲ್ಲೂ ಗಿಡ ನೆಟ್ಟು ನೀರೆರೆಯುವ ಮೂಲಕ ಪರಿಸರ ದಿನವನ್ನು ಆಚರಿಸಲಾಯಿತು. ಈ ವೇಳೆ ತಾಲೂಕು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಮಮತಾ ಶೆಟ್ಟಿ, ಗ್ರಾಪಂ ಅಧ್ಯಕ್ಷೆ ಆಶಾ, ಶಾಲೆ ಮುಖ್ಯ ಶಿಕ್ಷಕ ನಂದಕುಮಾರ್, ಅಂಗನವಾಡಿ ಶಿಕ್ಷಕಿ ಸಂಧ್ಯಾ, ಧರ್ಮಸ್ಥಳ ಸಂಸ್ಥೆ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಇತರರಿದ್ದರು.

ಅಣ್ಣೇಚಾಕನಹಳ್ಳಿ: ಗ್ರಾಮದ ಅಂಗನವಾಡಿ ಕೇಂದ್ರ ಆವರಣದಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು. ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೂಪರ್‌ವೈಸರ್ ಶಾಂತವ್ವಎಸ್.ಹಾವಣ್ಣನವರ್ ಸಸಿ ನೆಟ್ಟು ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಮುಖ್ಯ ಶಿಕ್ಷಕ ಅನಂತು, ಸಹ ಶಿಕ್ಷಕ ಪ್ರಕಾಶ್, ಅಂಗನವಾಡಿ ಶಿಕ್ಷಕಿ ಸುಧಾಮಣಿ, ಸಹಾಯಕಿ ಸಾಕಮ್ಮ ಹಾಗೂ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜೂ.5– ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಿಂದ 2022–23ನೇ ಸಾಲಿನ 3 ವರ್ಷಗಳ ಅವಧಿಗೆ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ವಿಶೇಷಚೇತನ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಅನುದಾನಿತ ಕೋರ್ಸ್‌ಗಳು, ಜ್ಯುಯಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್ ಅನುದಾನ ರಹಿತ ಕೋರ್ಸುಗಳಾಗಿವೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ www.jsspda.org ಅಥವಾ ಮೊ: 9686677236 ಸಂಪರ್ಕಿಸಬಹುದು.

ಶ್ರೀರಂಗಪಟ್ಟಣದಲ್ಲಿ ಸರಣಿ ಅಪಘಾತ



ಶ್ರೀರಂಗಪಟ್ಟಣ, ಜೂ.5(ವಿನಯ್ ಕಾರೇಕುರ)– ಪಟ್ಟಣದ ಕಾವೇರಿ ನದಿ ಉತ್ತರ ಸೇತುವೆ ಬಳಿಯ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಭಾನುವಾರ ಸರಣಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ 4 ಕಾರುಗಳು ಜಖಂಗೊಂಡಿದ್ದು, ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಾನುವಾರ ರಜಾ ದಿನವಾದ್ದರಿಂದ ಇಲ್ಲಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದರಿಂದ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿತ್ತು. ಈ ನಡುವೆ ಇಲ್ಲಿನ ಕಾವೇರಿ ನದಿ ಉತ್ತರ ಸೇತುವೆ ಬಳಿ ನಾಲ್ಕು ಕಾರುಗಳ ನಡುವೆ ಸರಣಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಕಾರುಗಳು ಜಖಂಗೊಂಡು, ಸಣ್ಣಪುಟ್ಟ ಗಾಯಗೊಂದಿಗೆ ಪ್ರಯಾಣಿಕರು ಪಾರಾಗಿದ್ದಾರೆ. ಹೆದ್ದಾರಿಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶ್ರೀರಂಗಪಟ್ಟಣ ಠಾಣೆ ಪೊಲೀಸರು ಕಾರುಗಳನ್ನು ತೆರವುಗೊಳಿಸಿ, ವಾಹನ ಸಂಚಾರ ಸುಗಮಗೊಳಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿ.ಎಂ.ಮಧು ಪರ ಎಂಎಲ್‌ಸಿ ಮರಿತಿಬ್ಬೇಗೌಡ ಪ್ರಚಾರ

ಮಂಡ್ಯ, ಜೂ.5(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು. ನಗರದ ಖಾಸಗಿ ಹಾಲ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪದವೀಧರ ಕ್ಷೇತ್ರದಲ್ಲಿ ನನ್ನ ಬೆಂಬಲಿಗರು ನೂರಾರು ಮಂದಿ ಇದ್ದು, ಅವರೆಲ್ಲರೂ ಮಧು ಜಿ.ಮಾದೇಗೌಡರನ್ನು ಬೆಂಬಲಿಸುವಂತೆ ಕರೆ ನೀಡಿದರು.



ಕಾವೇರಿ ಹೋರಾಟ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಡಾ.ಜಿ.ಮಾದೇಗೌಡರು ಅನೇಕ ಕೆಲಸ ಮಾಡಿದ್ದಾರೆ. ಅವರ ಸಾಧನೆ ಮನಗಂಡು ಮಧು ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಕೆ.ಎಂ.ದೊಡ್ಡಿಯಲ್ಲಿ ಸತತ 20 ವರ್ಷಗಳಿಂದ ಶೈಕ್ಷಣಿಕ ಸಂಸ್ಥೆ ಮುನ್ನಡೆಸುತ್ತಾ ಬಂದಿದ್ದಾರೆ. ಶೈಕ್ಷಣಿಕವಾಗಿ ಮಂಡ್ಯ ಜಿಲ್ಲೆಯನ್ನು ಶ್ರೀಮಂತಗೊಳಿಸಿ, ಅನೇಕ ಪದವೀಧರರಿಗೆ ಕೆಲಸ ನೀಡಿರುವ ಮಾದೇಗೌಡರ ಕುಟುಂಬಕ್ಕೆ ಒಂದು ಮತ ನೀಡಿ ಎಂದರು. ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ನನ್ನ ತಂದೆ ಜಿ.ಮಾದೇಗೌಡರ ಆಶಯದಂತೆ ಹೋರಾಟ ಹಾದಿಯಲ್ಲಿ ಸಾಗುತ್ತಿರುವೆ. ಈ ಚುನಾವಣೆಗೆ ಮಾತ್ರ ಸೀಮಿತವಾಗದೇ ಚುನಾವಣೆ ಮುಗಿದ ಬಳಿಕವೂ ನಿಮ್ಮ ಆಶೋತ್ತರಗಳಿಗೆ ಸ್ಪಂದಿಸುವೆ ಎಂದರು. ವೇದಿಕೆಯಲ್ಲಿ ಕೀಲಾರ ಜಯರಾಮು ಇತರರಿದ್ದರು.

ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ



ಶ್ರೀರಂಗಪಟ್ಟಣ, ಜೂ.5(ವಿನಯ್ ಕಾರೇಕುರ)– ಪಟ್ಟಣದ ತಾಲೂಕು ಆರೋಗ್ಯಾಧಿಕಾರಿ ಕಚೇರಿ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಡಾ.ಎನ್.ವೆಂಕಟೇಶ್, ಕೋವಿಡ್ ಸೋಂಕು ಇಡೀ ಮನುಕುಲವನ್ನೇ ಕಾಡಿದ ಸಂದರ್ಭ ಆಮ್ಲಜನಕದ ಕೊರತೆ ಕಾಡಿದ್ದನ್ನು ಎಲ್ಲರೂ ನೋಡಿದ್ದೇವೆ. ಭವಿಷ್ಯದಲ್ಲಿ ಸಮಾಜದ ಆರೋಗ್ಯ ಉತ್ತಮವಾಗಿರಲು ಪರಿಸರ ಮತ್ತು ಪ್ರಕೃತಿ ರಕ್ಷಣೆ ಬಹಳ ಮುಖ್ಯ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಪರಿಸರವನ್ನು ನಾವು ಕಾಪಾಡಿದರೆ ಪರಿಸರ ನಮ್ಮನ್ನು ಕಾಪಾಡುತ್ತದೆ ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ್ ಮಾತನಾಡಿ, ಆಸ್ಪತ್ರೆ, ಶಾಲೆ ಸೇರಿದಂತೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಗಿಡ ನೆಟ್ಟು ಅವುಗಳನ್ನು ಪೋಷಿಸುವ ಕೆಲಸವಾಗಬೇಕು. ಅರಣ್ಯ ನಾಶದಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿ ಹಂತದಿಂದಲೇ ಜಾಗೃತಿ ಮೂಡಿಸಬೇಕು ಎಂದರು. ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಲೀಂಪಾಷ, ಜಿ.ಬಿ.ಹೇಮಣ್ಣ, ಫಣೀಂದ್ರ, ಸಿಬ್ಬಂದಿಗಳಾದ ನವೀನ್, ನಂದೀಶ್ ಇದ್ದರು.

ಪಾಂಡವಪುರ ಪ್ರೆಸ್‌ಕ್ಲಬ್‌ಗೆ ಕುಮಾರಸ್ವಾಮಿ ಅಧ್ಯಕ್ಷ

ಪಾಂಡವಪುರ, ಜೂ.5– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಕುಮಾರಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.




ಈ ಹಿಂದಿನ ಆಡಳಿತ ಮಂಡಳಿ ಅಧಿಕಾರವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್, ರಾಜ್ಯ ಕಾರ್ಯದರ್ಶಿ ಮತ್ತಿಕೆರೆ ಜಯರಾಂ, ಕೆರಗೋಡು ಸೋಮಶೇಖರ್ ನೇತೃತ್ವದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕುಮಾರಸ್ವಾಮಿ, ಚಂದ್ರಕೀರ್ತಿ ಹಾಗೂ ರಘುವೀರ್ ಸ್ಪರ್ಧಿಸಿದ್ದರು. ಅಂತಿಮವಾಗಿ ಎಲ್ಲಾ ಸದಸ್ಯರು ಕುಮಾರಸ್ವಾಮಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿದರು. ಉಪಾಧ್ಯಕ್ಷರಾಗಿ ಚಂದ್ರಕೀರ್ತಿ, ಪ್ರಧಾನ ಕಾರ್ಯದರ್ಶಿಯಾಗಿ ರಘುವೀರ್, ಖಜಾಂಚಿಯಾಗಿ ಎಸ್.ನಾಗಸುಂದರ್, ಕಾರ್ಯದರ್ಶಿಯಾಗಿ ಅನಿಲ್ ಕುಮಾರ್ ಅವಿರೋಧವಾಗಿ ಆಯ್ಕೆಯಾದರು. ನೂತನ ಅಧ್ಯಕ್ಷರನ್ನು ಎಲ್ಲಾ ಸದಸ್ಯರು ಅಭಿನಂದಿಸಿದರು. ಈ ವೇಳೆ ರಾಜ್ಯಪರಿಷತ್ ಸದಸ್ಯ ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಕಾರ್ಯದರ್ಶಿ ಬಿ.ಎಸ್.ಜಯರಾಮು, ಮಾಜಿ ಕಾರ್ಯದರ್ಶಿ ಸಿ.ಎ.ಲೋಕೇಶ್, ಜಿಲ್ಲಾ ನಿರ್ದೇಶಕ ಚನ್ನಮಾದೇಗೌಡ, ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ ಮೋಹನ್‌ಕುಮಾರ್, ಸಿ.ಆರ್.ರಮೇಶ್, ಜೆ.ಎಂ.ಬಾಲಕೃಷ್ಣ, ಚಂದ್ರಶೇಖರ್, ರವಿಕುಮಾರ್, ನಾಗಮಂಗಲ ತಾಲೂಕು ಅಧ್ಯಕ್ಷ ಪಿ.ಜೆ.ಜಯರಾಮು, ಬಾಲಕೃಷ್ಣ ಸೇರಿದಂತೆ ಹಲವರಿದ್ದರು.

ಸಂವಿಧಾನ ಇಲ್ಲದಿದ್ದರೆ ನಾನು ಸಿಎಂ ಆಗುತ್ತಿರಲಿಲ್ಲ

ಸಂಶೋಧನಾ ವಿದ್ಯಾರ್ಥಿಗಳ ಸಭೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ

ಸಂವಿಧಾನ ವಿರೋಧಿಸುವವರ ಕೈಲಿ ಅಧಿಕಾರವಿದೆ



ಮೈಸೂರು,ಜೂ 5(ಜಿಎ)– ಸಂವಿಧಾನ ಇಲ್ಲದಿದ್ದರೆ ನಾನು ಮುಖ್ಯಮಂತ್ರಿಯಾಗುತ್ತಿರಲಿಲ್ಲ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನಾ ವಿದ್ಯಾರ್ಥಿಗಳೊಂದಿಗೆ ಏರ್ಪಡಿಸಿದ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದರು.

ಸಂಶೋಧನಾ ವಿದ್ಯಾರ್ಥಿಗಳಲ್ಲಿ ಬಹಳಷ್ಟು ಮಂದಿ ಸಂವಿಧಾನವನ್ನು ಓದಿಕೊಂಡಿದ್ದೀರ ಹಾಗೂ ರಾಜ್ಯ ಮತ್ತು ದೇಶದ ರಾಜಕಾರಣವನ್ನು ತಿಳಿದುಕೊಂಡಿದ್ದೀರಿ ಎಂಬ ಭಾವನೆ ಇದೆ. ಹಾಗಾಗಿ ದೇಶ, ರಾಜ್ಯವನ್ನು ಉಳಿಸುವ ಜವಾಬ್ದಾರಿ ನಮ್ಮಲ್ಲಿ ಇರಬೇಕು ಎಂದರು. ನಾನು ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವುದಿಲ್ಲ ದೇಶದಲ್ಲಿ ಯಾವುದೇ ಸರ್ಕಾರ ಬಂದಾಗ ಸಂವಿಧಾನದ ಮೂಲಭೂತ ಆಶಯಗಳಿಗೆ ಅನುಗುಣವಾಗಿ ಕೆಲಸಗಳನ್ನು ಮಾಡಬೇಕು. ಆದರೆ ಸಂವಿಧಾನ ವಿರೋಧಿಸುವವರ ಕೈಯಲ್ಲಿ ಅಧಿಕಾರವಿದೆ. ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾ ಅಂಬೇಡ್ಕರ್ ಅವರ ಸಂವಿಧಾನವನ್ನು ಒಪ್ಪಿಕೊಂಡಿರಲಿಲ್ಲ. ಅದರ ಬಗ್ಗೆ ಗೌರವವೂ ಇಲ್ಲ. ಹಾಗಾಗಿ ಅವರು ಆಗಾಗ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡುತ್ತಿರುತ್ತಾರೆ ಎಂದರು.

ಹೆಡಗೇವಾರ್ ಅವರು ಆರ್‌ಎಸ್‌ಎಸ್ ಅನ್ನು 1928ರಲ್ಲಿ ಸ್ಥಾಪಿಸಿದರು. ಅವರ ನಂತರ ಗುರುಜೀ ಎಂಬವರು ಮೊದಲ ಅಧ್ಯಕ್ಷರಾಗಿದ್ದರು. ಈ ಸಂಸ್ಥೆಯಲ್ಲಿ ರಾಜ್ಯ ಮಟ್ಟದ ಸಹ ಸಂಚಾಲಕರು ಇರುತ್ತಾರೆ. ಅವರು ಯಾವಾಗಲೂ ಮೇಲ್ಜಾತಿ ಅವರೇ ಇರುತ್ತಾರೆ. ಸ್ಥಾಪಿತವಾಗಿನಿಂದ ಇಲ್ಲಿವರೆಗೂ ಬೇರೆ ಯಾವ ಜಾತಿಯವರು ಸಹಸಂಚಾಲಕರಾಗಿಲ್ಲ. ಸಂವಿಧಾನ ಇಲ್ಲದಿದ್ದರೆ ಮತ್ತೆ ಮನಸ್ಮೃತಿ ಮನಸುಗಳು ಬರುತ್ತಿತ್ತು ಎಂದರು.

ಬಿಜೆಪಿಯ ಅನಂತ ಕುಮಾರ್ ಹಾಗೂ ತೇಜಸ್ವಿ ಸೂರ್ಯ ಇಬ್ಬರು ಸಂವಿಧಾನ ಮತ್ತು ಅಂಬೇಡ್ಕರ್ ಅವರ ವಿರುದ್ಧ ಅನೇಕ ಬಾರಿ ಮಾತನಾಡಿದ್ದಾರೆ. ನರೇಂದ್ರ ಮೋದಿ ಯಾಕೆ ಅವರ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಿಲ್ಲ. ಒಂದು ಶೋಕಾಸ್ ನೋಟಿಸ್ ಸಹ ನೀಡಿಲ್ಲ. ಇಂತಹ ಕೋಮುವಾದ ಮನಸ್ಥಿತಿಯವರ ನಡುವೆ ಸಂವಿಧಾನ ಇಲ್ಲದಿದ್ದರೆ ನಾನು ಮುಖ್ಯಮಂತ್ರಿಯಾಗಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಆಗಲು ಅವರು ಬಿಡುತ್ತಿರಲಿಲ್ಲ ಎಂದರು.


ನಾನು ನನ್ನ ಯೋಜನೆಗಳಿಗೆ ಯಾರ ಮನೆಯ ದುಡ್ಡು ತಂದಿಲ್ಲ. ಜನರ ತೆರಿಗೆ ಹಣದಿಂದ ಯೋಜನೆಗಳನ್ನು ರೂಪಿಸಿರುವುದು. ಪ್ರತಾಪ್ ಸಿಂಹ ಅವರ ಮನೆಯಿಂದ ಕೊಟ್ಟಿಲ್ಲ. ನನಗೆ ಹಣಕಾಸಿನ ಬಗ್ಗೆ ಗೊತ್ತಿಲ್ಲ ಎಂದು ಹೇಳುವ ಪ್ರತಾಪ್ ಸಿಂಹನಿಗೆ ಏನು ಗೊತ್ತು ಎಂದು ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹನಿಗೆ ತಿರುಗೇಟು ನೀಡಿದ್ದರು.

ಕರ್ನಾಟಕ ರಾಜ್ಯದಿಂದ 19 ಲಕ್ಷ ಕೋಟಿ ರೂ. ತೆರಿಗೆ ಹಣ ಸಂಗ್ರಹವಾಗಿದೆ. ಆದರೆ ರಾಜ್ಯಕ್ಕೆ 4.5 ಲಕ್ಷ ಸಾವಿರ ಕೋಟಿ ಮಾತ್ರ ನೀಡಿದ್ದಾರೆ. ಬಾಕಿ 14.46 ಸಾವಿರ ಕೋಟಿ ರೂ. ಹಣ ಬರಬೇಕಿದೆ. ಕೊಟ್ಟಿರುವ ಇಷ್ಟು ಹಣಕ್ಕೆ ದೊಡ್ಡದಾಗಿ ಜಾಹಿರಾತು ನೀಡಿ ಪ್ರಚಾರ ಮಾಡುತ್ತಿದ್ದಾರೆ. ಕಳೆದ ಮಾರ್ಚ್‌ನಿಂದ ಇಲ್ಲಿಯವರೆಗೂ 3 ಲಕ್ಷ ಕೋಟಿ ರೂ. ಸಂಗ್ರಹವಾಗಿದೆ. ಆದರೆ ರಾಜ್ಯಕ್ಕೆ ಬಂದಿರುವುದು 47 ಸಾವಿರ ಕೋಟಿ ರೂ. ಮಾತ್ರ ನಾವು ಕೇಳುತ್ತಿರುವುದು ಯಾರ ಮನೆಯ ದುಡ್ಡಲ್ಲ ಜನರ ತೆರಿಗೆ ಹಣ. 2014ರಲ್ಲಿ ಮೋದಿ ಪ್ರಧಾನಿಯಾದಾಗ 53 ಲಕ್ಷ ಸಾವಿರ ಕೋಟಿ ರೂ. ಸಾಲವಿತ್ತು. ಆದರೆ ಕಳೆದ ಎಂಟು ವರ್ಷಗಳಲ್ಲಿ 155 ಲಕ್ಷ ಸಾವಿರ ಕೋಟಿ ರೂ. ಸಾಲವಾಗಿದೆ ಬರೋಬ್ಬರಿ 102 ಲಕ್ಷ ಸಾವಿರ ಕೋಟಿ ರೂ. ಹೆಚ್ಚಳವಾಗಿದ್ದು, ದೇಶದ ಪ್ರತಿಯೊಬ್ಬ ಪ್ರಜೆಯ ಮೇಲೆ 1.70 ಲಕ್ಷ ರೂ. ಸಾಲವಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ 2018ರಲ್ಲಿ ರಾಜ್ಯದ ಸಾಲ 2.42 ಲಕ್ಷ ಕೋಟಿ ರೂ. ಸಾಲವಿತ್ತು. ಆದರೆ ಈಗ 5.40 ಲಕ್ಷ ಕೋಟಿಯಾಗಿದೆ. ಇದು ನಾನು ಹೇಳುತ್ತಿರುವುದಲ್ಲ. ಎಕಾನಾಮಿಕ್ ಸರ್ವೇಯಲ್ಲಿ ಮಾಹಿತಿ ನೀಡಲಾಗಿದೆ ಎಂದರು.

ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ಸಾಲವನ್ನು ಮಾಡಿದ್ದಾರೆ. ಇಂತವರ ಕೈಯಲ್ಲಿ ದೇಶ, ರಾಜ್ಯ, ಸಂವಿಧಾನ ಏನೂ ಉಳಿಯುವುದಿಲ್ಲ. ಆದರಿಂದ ಅವರು ಸೋಲಿಸಬೇಕು. ನಾನು ಅಥವಾ ಹೆಚ್.ಸಿ.ಮಹದೇವಪ್ಪ ಗೆಲ್ಲಬೇಕು ಎಂಬುದಲ್ಲ ಬಿಜೆಪಿ ಅಧಿಕಾರ ತೆಗೆಯಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಜೆಡಿಎಸ್‌ರವರು ಬರೀ ಗೆದ್ದು ಎತ್ತಿನ ಬಾಲ ಹಿಡಿಯುವವರು ಅಷ್ಟೇ. ಮುಂದಿನ ಚುನಾವಣೆಯಲ್ಲಿ ಅವರು ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳಬೇಕು ಹಾಗೂ ತಳ ಸಮುದಾಯದವರು ಅವರಿಗೆ ಓಟ್ ಹಾಕದಂತೆ ಅವರಿಗೆ ಮನವರಿಕೆ ಮಾಡಬೇಕು. ನೀವೆಲ್ಲರೂ ಸಂಶೋಧನಾ ವಿದ್ಯಾರ್ಥಿಗಳು ಎಲ್ಲವನ್ನು ಅರಿತು ಈ ಬಾರಿ ಮಧು ಜಿ. ಮಾದೇಗೌಡ ಅವರಿಗೆ ಮೊದಲ ಪ್ರಾಶಸ್ತ್ಯ ಮತ ನೀಡುವ ಮೂಲಕ ಜಯಶಾಲಿಯಾಗಿ ಮಾಡಬೇಕು ಎಂದು ಸಿದ್ದರಾಮಯ್ಯ ಅವರು ಸಭೆಯಲ್ಲಿ ಮನವಿ ಮಾಡಿದ್ದರು.

ನಂತರ ಸಂಜೆ ತಮ್ಮ ಮನೆಯಲ್ಲಿ ಮೈಸೂರು ನಗರ, ಗ್ರಾಮಾಂತರ ಕಾಂಗ್ರೆಸ್ ಮುಖಂಡರ ಸಭೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಮಂಡ್ಯ, ಹಾಸನ ಭಾಗಕ್ಕೆ ನಾನು ಕೆಲವು ದಿನಗಳ ಹಿಂದೆ ಭೇಟಿ ನೀಡಿದ ವೇಳೆ ನೋಡಿದ ಹಾಗೆ ಅಲ್ಲಿ ಕಾಂಗ್ರೆಸ್ ವಾತಾವರಣವಿದೆ. ಮೈಸೂರು ನಗರದಲ್ಲಿ ಅತಿ ಹೆಚ್ಚು ಮತದಾರರಿದ್ದಾರೆ. ನಿಮ್ಮ ನಿಮ್ಮ ವಾರ್ಡ್‌ಗಳಲ್ಲಿರುವ ಪದವೀಧರರನ್ನು ಗುರುತಿಸಿ ಅವರ ಮನೆ, ಕಚೇರಿಗಳಲ್ಲಿ ಅಥವಾ ಮೊಬೈಲ್ ಮೂಲಕ ಅವರನ್ನು ತಲುಪಿ ರಾಜ್ಯ ಸರ್ಕಾರದ ವೈಫಲ್ಯಗಳು ಹಾಗೂ ನಮ್ಮ ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸಿ ನಮ್ಮ ಅಭ್ಯರ್ಥಿಗೆ ಮತ ನೀಡುವಂತೆ ಮಾಡಿ ಹಾಗೂ ಪಕ್ಷದಿಂದ ನೀಡುವ ಜವಾಬ್ದಾರಿಗಳನ್ನು ಪ್ರಾಮಾಣಿಕರಾಗಿ ನಿರ್ವಹಿಸಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ದಕ್ಷಿಣ ಪಧವೀಧರ ಕ್ಷೇತ್ರದ ಅಭ್ಯರ್ಥಿ ಮಧು ಜಿ. ಮಾದೇಗೌಡ, ಶಾಸಕ ತನ್ವೀರ್ ಸೇಠ್, ಮಾಜಿ ಸಚಿವ ಎಚ್.ಸಿ. ಮಹದೇವಪ್ಪ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ವಿಧಾನ ಪರಿಷತ್ ಮಾಜಿ ಸದಸ್ಯ ಆರ್. ಧರ್ಮಸೇನಾ, ಮೈಸೂರು ಜಿಲ್ಲಾ ಮತ್ತು ಗ್ರಾಮಾಂತರ ಕಾಂಗ್ರೆಸ್ ಮುಖಂಡರು, ಮಾಜಿ ಮೇಯರ್‌ಗಳು, ಪಾಲಿಕೆ ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ತಮ್ಮ ನಿವಾಸದಲ್ಲಿ ಮೈಸೂರು ನಗರ, ಗ್ರಾಮಾಂತರ ಕಾಂಗ್ರೆಸ್ ಮುಖಂಡರ ಸಭೆ ನಡೆಸಿದರು

ಸಮಾಜಕ್ಕೆ ಸಂತರು, ಸನ್ಯಾಸಿಗಳ ಸೇವೆ ಅಗತ್ಯ

ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಅಭಿಪ್ರಾಯ



ಮೈಸೂರು, ಜೂ.5(ಎಂಟಿವೈ)– ಸಂತರು ಹಾಗೂ ಸನ್ಯಾಸಿಗಳ ಸೇವೆ ಸಮಾಜಕ್ಕೆ ಅತ್ಯಂತ ಅಗತ್ಯವಾಗಿದ್ದು, ಅವರು ಶಾಂತಿ, ನೆಮ್ಮದಿ, ಸಾಂತ್ವನ, ದೈವಿ ಭಾವನೆಗಳನ್ನು ಜನರ ಮನಸ್ಸಿಗೆ ತುಂಬುವ ಮೂಲಕ ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡುತ್ತಾರೆ ಎಂದು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕಭವನದಲ್ಲಿ ಮೈಸೂರು ತಾಲೂಕು ಕುರುಬರ ಸಂಘ ಹಾಗೂ ಸಂಗೊಳ್ಳಿ ರಾಯಣ್ಣ ಸೇವಾ ಸಮಿತಿ ವತಿಯಿಂದ ನಡೆದ ರಾಣಿ ಅಹಲ್ಯಾಬಾಯಿ ಹೋಳ್ಕರ್ ಜನ್ಮದಿನ ಹಾಗೂ ಶ್ರೀ ಡಾ.ಶಿವಾನಂದಪುರಿ ಮಹಾಸ್ವಾಮಿಜಿಯವರ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಹಾಗೂ ಶ್ರೀಗಳನ್ನು ಅಭಿನಂದಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ಜೀವನದಲ್ಲಿ ಗುರು ಮತ್ತು ಗುರಿ ಇರಬೇಕು. ಗುರು ಒಳ್ಳೆಯ ಮಾರ್ಗ ತೋರಿ ತಿದ್ದಿ ತೀಡುತ್ತಾ, ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ತೋರುತ್ತಾನೆ. ಶಿವಾನಂದಪುರಿ ಸ್ವಾಮೀಜಿಗಳು ನಾವು ಶ್ರೀ ಬಾಲಗಂಗಾಧರ ಸ್ವಾಮಿಜಿಯವರ ಶಿಷ್ಯರಾಗಿ ಅವರ ಸೇವೆಯಲ್ಲಿ ಇದ್ದವರು. ಪೂಜ್ಯರು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತ ವಿದ್ಯಾದಾನ ನೀಡುತ್ತಿದ್ದಾರೆ. ಮಕ್ಕಳಿಗೆ ವಿದ್ಯೆ ಕೊಡಿಸಿ ತಂದೆ–ತಾಯಿಯವರನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ನೋಡಿಕೊಳ್ಳಿರಿ. ಪೂಜ್ಯರ ಬಗ್ಗೆ ನಮಗೆ ಹೆಮ್ಮೆ ಇದೆ ಇವರಿಂದ ಸಮಾಜಕ್ಕೆ ಇನ್ನಷ್ಟು ಕೆಲಸಗಳು ಆಗಲಿ ಎಂದರು.

ಕಾಗಿನೆಲೆ ಶಾಖಾ ಮಠದ ಡಾ.ಶಿವಾನಂದಪುರಿ ಮಹಾಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸಿ. ತಂದೆ, ತಾಯಿ, ಸಮಾಜವನ್ನು ಪ್ರೀತಿಸುವುದನ್ನು ತಿಳಿಸಿ. ಅಹಲ್ಯಬಾಯಿ ಹೋಳ್ಕರ್ ಶಿವಶರಣೆಯಾಗಿ 8ನೇ ವರ್ಷದಲ್ಲಿಯೇ ಶಿವಭಕ್ತಿಯನ್ನು ಮೈಗೂಡಿಸಿಕೊಂಡು ಮಹಾರಾಣಿಯಾಗಿ ಉತ್ತರಭಾರತದಲ್ಲಿ ನೂರಾರು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಅಂತಹ ಮಹಾತಾಯಿ ಹುಟ್ಟಿದ ದಿನವೇ ನಾನು ಹುಟ್ಟಿದ್ದೇನೆ. ನಿಮ್ಮೆಲ್ಲರ ಪ್ರೀತಿಗೆ ನಾನು ಚಿರಋಣಿಯಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಮಾಜಿಕ ಸೇವೆಯಡಿಯಲ್ಲಿ ಈ ಭವನವನ್ನು ನಿರ್ಮಿಸಲು ಸಹಾಯ ಮಾಡಿದ್ದಾರೆ ಅವರಿಗೆ ಆ ದೇವರು ಇನ್ನಷ್ಟು ಶಕ್ತಿ ಕೊಡಲಿ ಎಂದರು.

ಸಮಾರಂಭದಲ್ಲಿ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಸಾಯಿನಾಥ ಸ್ವಾಮೀಜಿ, ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿದರು. ಮೈಸೂರು ತಾಲೂಕು ಕುರುಬರ ಸಂಘದ ಗೌರವ ಅಧ್ಯಕ್ಷ ನಾಡನಹಳ್ಳಿ ರವಿ, ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷರಾದ ಹೆಚ್.ಸಿ. ರಾಜು, ಅಣ್ಣಯ್ಯ, ಮಡೆಶಿವರಾಂ, ಅಪ್ಪುಗೌಡ, ಮೈಸೂರು ಬಸವಣ್ಣ, ಮಹೇಂದ್ರ ಕಾಗಿನೆಲೆ, ಬೆಲವತ್ತರಾಮು, ಮಹಾದೇವ, ಪುನೀತ್, ಕಮಲಅನಂತರಾಂ, ಕಲ್ಪನಾ, ಗೀತಾ, ಶೋಭಾ ಹಾಜರಿದ್ದರು.

ಟೀಂ ಮೈಸೂರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ

ಮೈಸೂರು, ಜೂ.5(ಎಸ್‌ಪಿಎನ್)– ಟೀಂ ಮೈಸೂರು ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ವರ್ಷದ ಜಯಂತಿಯನ್ನು ಶನಿವಾರ ಆಚರಿಸಲಾಯಿತು.



ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಸಾಮಾಜಿಕ ವೈಭವ ಸ್ಮರಣೆ ಕುರಿತು ಕರ್ನಾಟಕ ರಾಜ್ಯ ಮುಕ್ತ ವಿವಿ ಮಂಡ್ಯ ಪ್ರಾದೇಶಿಕ ಕಚೇರಿಯ ನಿರ್ದೇಶಕ ಡಾ.ಸುಧಾಕರ್ ಎಸ್ ಹೊಸಳ್ಳಿ ಮಾತನಾಡಿದರು.

ಟಿಪ್ಪು ಆಡಳಿತಾವಧಿಯಲ್ಲಿ ಪರ್ಷಿಯನ್ ಭಾಷೆ ಆಡಳಿತ ಭಾಷೆಯಾಗಿದ್ದ ಕಾರಣ ಕನ್ನಡ ನಶಿಸುವ ಹಂತದಲ್ಲಿತ್ತು. ಕನ್ನಡ ಭಾಷೆಯನ್ನು ಪುನರುತ್ಥಾನಗೊಳಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ. ಆದರೆ, ಇಂದಿನ ಸಾಹಿತಿಗಳು ಟಿಪ್ಪು ಸಹಾ ಕನ್ನಡ ಪ್ರೇಮಿಯಾಗಿದ್ದ ಎಂದು ಮಕ್ಕಳಿಗೆ ತಿರುಚಿ ಹೇಳಲು ಪ್ರಯತ್ನಿಸುತ್ತಿರುವುದು ನಾಚೀಗೇಡಿನ ಸಂಗತಿ ಎಂದರು

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲಾವಧಿಯಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ನಡೆದಿವೆ. ಅದು ಬ್ರಿಟಿಷರ ಬಿಗಿಮುಷ್ಟಿಯಲ್ಲೂ ತಮ್ಮ ಸಂಸ್ಥಾನವನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ್ದು, ಸೋಜಿಗದ ಸಂಗತಿ ಹಾಗೂ ನಮ್ಮ ಸಂವಿಧಾನ ರಚನೆಗೂ ಮೊದಲೇ ಸಾಮಾಜಿಕ ಸುಧಾರಣೆಗಾಗಿ ಮೀಸಲಾತಿ ಅಳವಡಿಸಿದ ಕೀರ್ತಿ ಒಡೆಯರ್‌ಗೆ ಸಲ್ಲುತ್ತದೆ. ಈ ಸತ್ಯ ಸಂಗತಿಯನ್ನು ಎಂತಹ ಕಾಲಘಟ್ಟದಲ್ಲಿ ಜಾರಿಗೆ ತಂದರು ಎಂಬ ಸತ್ಯವನ್ನು ನಮ್ಮ ಜಾತ್ಯಾತೀತ ಸಾಹಿತಿಗಳು ಸಮಾಜಕ್ಕೆ ತಿಳಿಸದಿರುವುದು ಬೇಸರ ಸಂಗತಿ ಎಂದರು.

ಕಾವೇರಿ ಆಸ್ಪತ್ರೆ ಸಂಸ್ಥಾಪಕ ಡಾ.ಚಂದ್ರಶೇಖರ್ ಮಾತನಾಡಿ, ಬೆಂಗಳೂರು ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯಿದೆ. ಅವರ ಆಡಳಿತದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸ್ಥಾಪನೆಗೆ 316 ಎಕರೆ ಜಾಗ ನೀಡಿದ್ದರು. ಅಲ್ಲದೆ, ತಮ್ಮ ಆಡಳಿತಾವಧಿಯಲ್ಲಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿದ ಕೀರ್ತಿ ಒಡೆಯರ್ ಅವರಿಗೆ ಸಲ್ಲುತ್ತದೆ. ಆದರೆ, ಅವುಗಳನ್ನು ಇಂದಿನ ಸರ್ಕಾರಗಳಿಗೆ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ನಗರ ಪಾಲಿಕೆ ಸದಸ್ಯ ಎಂ.ಯು.ಸುಬ್ಬಯ್ಯ, ಟೀಂ ಮೈಸೂರು ತಂಡದ ಸಂಚಾಲಕ ಗೋಕುಲ್ ಗೋವರ್ಧನ್, ತಂಡದ ಸದಸ್ಯ ಹಿರಿಯಣ್ಣ, ಸಹ ಸಂಚಾಲಕ ಯಶವಂತ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 6 ಜೂನ್ 2022

ಶ್ರೀ ಚಾಮರಾಜೇಶ್ವರ ದೇಗುಲದಲ್ಲಿ 2ನೇ ದಿನ ಪೂಜೆಗಳು ಸುಸೂತ್ರ

ಇಂದು ಕುಂಭಾಭಿಷೇಕ, ಅನ್ನಸಂತರ್ಪಣೆ



ಚಾಮರಾಜನಗರ, ಜೂ.5(ಎಸ್‌ಎಸ್)– ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೂರು ದಿನಗಳ ಕಾಲ ನಡೆಯುವ ಕುಂಭಾಭಿಷೇಕ ಮಹೋತ್ಸವದ ಎರಡನೇ ದಿನವಾದ ಭಾನುವಾರ ಪೂಜಾ ಕಾರ್ಯಗಳು ಸುಸೂತ್ರವಾಗಿ ನಡೆದವು.

ಭಾನುವಾರ ಬೆಳಗ್ಗೆಯೇ ಬಿಂಬಶುದ್ಧಿ, ನೂತನ ವಿಗ್ರಹಗಳಿಗೆ ನೇತ್ರೋನ್ಮಿಲನ, ಜಲಾಧಿವಾಸ, ಆಧಿವಾಸ, ಹೋಮಗಳು, ಸ್ಪರ್ಶ ಹೋಮ, ಪೂರ್ವಕ ಹಾಗೂ ಅಷ್ಟಬಂಧನ ಪೂಜೆಗಳು ನಡೆದವು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪತ್ನಿ ವೆಂಕಟಮ್ಮ ಪೂಜಾ ಕಾರ್ಯದಲ್ಲಿ ಪಾಲಗೊಂಡಿದ್ದರು.

ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಸಂಜೆಯಿಂದ ರಾತ್ರಿ ವರೆಗೂ ಸಹ ನಾನಾ ಪೂಜಾ ಕಂಕೈರ್ಯ ಜರುಗಿದವು. ಹಲವು ಅರ್ಚಕರು ಪಾಲ್ಗೊಂಡಿದ್ದರು. ನೂರಾರು ಭಕ್ತರು ಭಾಗಹಿಸಿದ್ದರು. ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ದಂಪತಿ, ತಹಸೀಲ್ದಾರ್ ಬಸವರಾಜು ದಂಪತಿ ಪೂಜಾ ಕಾರ್ಯಗಳಲ್ಲಿ ಹಾಜರಿದ್ದರು.

ಅನ್ನಸಂತರ್ಪಣೆ: ನಾಳೇ(ಜು.6) ಕುಭಾಭಿಷೇಕ ನಡೆಯಲಿದ್ದು, ಸುಮಾರು 10 ಸಾವಿರ ಜನರಿಗೆ ಅನ್ನಸಂತರ್ಪಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ದೇವಸ್ಥಾನದ ಬಲಭಾಗದಲ್ಲಿರುವ ರಥಬೀದಿಯಲ್ಲಿ ದೇವಸ್ಥಾನದ ಮುಂಭಾಗದಿಂದ ಗಣಪತಿ ಕೂರಿಸುವ ಸ್ಥಳದವರೆಗೆ ಶಾಮಿಯಾನ ಹಾಕಲಾಗಿದೆ. ಮಳೆ ಬಂದರೆ ಯಾವುದೇ ಅಡೆತಡೆಗಳು ಆಗದಿರಲಿ ಎಂದು ಸ್ವಲ್ಪ ಭಾಗಕ್ಕೆ ತಗಡಿನ ಶೀಟ್‌ಗಳ ಚಪ್ಪರವನ್ನು ಹಾಕಲಾಗಿದೆ.





ಇಂದು ಕುಂಭಾಭಿಷೇಕ...

ಸೋಮವಾರ ಬೆಳಗ್ಗೆ 6.30 ಪುಣ್ಯಾಹ, ಕಲಶಾರ್ಚನೆ, ಪ್ರಾಣ ಪ್ರತಿಷ್ಠೆ, ನಾಡಿಸಂಧಾನ, ತತ್ವನ್ಯಾಸ, ಕಳಾನ್ಯಾಸ, ಕಳಾಹೋಮ ಪೂರ್ವಕ, ಕಳಶ ಆವಾಹನೆ, ಪೂರ್ಣಾಹುತಿ ಹಾಗೂ ಬೆಳಗ್ಗೆ 10ರಿಂದ 10.30ರೊಳಗೆ ಸಲ್ಲುವ ಶುಭ ಕಟಕ ಲಗ್ನದಲ್ಲಿ ಕುಂಭಾಭಿಷೇಕ, ಮಹಾಮಂಗಳಾರತಿ ನೆರವೇರಲಿದೆ.

ಪದವೀಧರರ ಹಿತ ಕಾಯಲು ಜೆಡಿಎಸ್ ಬದ್ಧ: ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಚಾಮರಾಜನಗರ, ಜೂ.5– ಪದವೀಧರರ ಹಿತ ಕಾಯಲು ಜನತಾದಳ ಬದ್ಧವಾಗಿದ್ದು, 2023ಕ್ಕೆ ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನಿರುದ್ಯೋಗಿ ಪದವೀಧರರಿಗೆ ಮಾಸಿಕ 10 ಸಾವಿರ ಭತ್ಯೆ ಕೊಡುತ್ತೇವೆ. ಆದ್ದರಿಂದ ಹೆಚ್.ಕೆ. ರಾಮು ರವರನ್ನು ಈ ಬಾರಿ ಗೆಲ್ಲಿಸಿ ಕುಮಾರಸ್ವಾಮಿಯವರ ಕೈಬಲಪಡಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ ಮಾಡಿದರು.

ಚಾಮರಾಜನಗರ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಸಂಜೆ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರವಾಗಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಲಕ್ಷಾಂತರ ಪದವೀಧರರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಪ್ರತಿಯೊಂದಕ್ಕೂ ಹೋರಾಟ ಮಾಡಿಯೇ ಪಡೆದುಕೊಳ್ಳಬೇಕಾದ ಪರಿಸ್ಥಿತಿ ರಾಜ್ಯದಲ್ಲಿದೆ. ರಾಜ್ಯ ಸರ್ಕಾರದಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದ್ದು ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನಾನು ಮೈಸೂರು–ಚಾಮರಾಜನಗರದ ಸಮಸ್ಯೆಗಳ ಬಗ್ಗೆ ವಿಧಾನ ಪರಿಷತ್‌ನಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ. ಹೆಚ್.ಕೆ.ರಾಮು ಅವರು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಿಮ್ಮ ಕಷ್ಟ–ಸುಖಗಳು ಗೊತ್ತಿರುವ ವ್ಯಕ್ತಿ. ರಾಮು ಅವರನ್ನು ಮೊದಲ ಪ್ರಾಶಸ್ತ್ಯದ ಮತವನ್ನು ನೀಡುವ ಮೂಲಕ ಗೆಲ್ಲಿಸಿದರೆ ಕುಮಾರಣ್ಣನವರಿಗೆ ಶಕ್ತಿ ಬರುತ್ತದೆ. 24 ಗಂಟೆ ನಿಮ್ಮ ಜೊತೆಗಿದ್ದು ಕೆಲಸ ಮಾಡುತ್ತೇವೆ. ಎಲ್ಲರೂ ಒಗ್ಗಟ್ಟಾಗಿ ದೇಶವನ್ನು ಕಟ್ಟುವ ಕೆಲಸ ಮಾಡೋಣ ಎಂದರು.

ಅಭ್ಯರ್ಥಿ ಹೆಚ್.ಕೆ.ರಾಮು ಮಾತನಾಡಿ, ಕಳೆದ 35 ವರ್ಷಗಳಿಂದ ಜಿಲ್ಲಾ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಕೆಲಸ ಮಾಡಿದ್ದೇನೆ. ಜೆಡಿಎಸ್ ನಾಯಕರು ನನಗೆ ಆಶೀರ್ವಾದ ಮಾಡಿ ಈ ಅವಕಾಶ ಮಾಡಿ ಕೊಟ್ಟಿದ್ದಾರೆ. ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ಆಗಬೇಕಾಗಿದೆ. ಮಳೆ ಪರಿಹಾರಕ್ಕೆ ರಾಜ್ಯ ಸರ್ಕಾರಿ ನೌಕರರ ಸಂಘದಿಂದ 100 ಕೋಟಿ ನೀಡಿದ್ದೇವೆ. ಇನ್ನೂ ಹೆಚ್ಚಿನ ಕೆಲಸ ಮಾಡಲು ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡುವ ಮೂಲಕ ತಮ್ಮ ಸಹೋದ್ಯೋಗಿಗಳು, ನಿರುದ್ಯೋಗಿ ಮತದಾರರ ಮನವೊಲಿಸಿ 12 ಸಾವಿರ ಮತಗಳಲ್ಲಿ ಶೇ.65 ಮತಗಳನ್ನು ನನಗೆ ಕೊಡಿಸುವ ಮುಖಾಂತರ ನಿಮ್ಮ ಧ್ವನಿಯಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ವಕೀಲ ಗಂಗಾಧರಗೌಡ, ಚಿನ್ನ ಮುತ್ತು, ಅನಿತಾ ಚೇತನ್, ಕೆ.ಎಸ್. ಮಾದಪ್ಪ, ಮಹಾದೇವಸ್ವಾಮಿ, ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷರಾದ ರಮೇಶ್, ಟ್ಯೂಬ್ ಮಹಾದೇವ ಹಾಜರಿದ್ದರು.

ಚಾಮರಾಜನಗರದಲ್ಲಿ ವಿಶ್ವ ಪರಿಸರ ದಿನಾಚರಣೆ

ಸುಸ್ಥಿರ ಬದುಕಿಗೆ ಪರಿಸರ ಸಂರಕ್ಷಣೆ ಅಗತ್ಯ ಪ್ರೊ.ಜಯದೇವ



ಚಾಮರಾಜನಗರ, ಜೂ.5–ಭೂಮಿ–ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಸುಸ್ಥಿರವಾದ ಬದುಕು ಹಾಗೂ ಸರಳ ಜೀವನಶೈಲಿಯಿಂದ ಪರಿಸರ ನಾಶ ತಡೆಯುವ ಮೂಲಕ ಪ್ರತಿಯೊಬ್ಬರು ವೈಜ್ಞಾನಿಕವಾಗಿ ಪರಿಸರ ಸಂರಕ್ಷಣೆಗೆ ಮುಂದಾಗುವಂತೆ ದೀನಬಂಧು ಶಾಲೆಯ ಸಂಸ್ಥಾಪಕ ಪ್ರೊ. ಜಿ.ಎಸ್.ಜಯದೇವ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ನಗರಸಭೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಸಂಯುಕ್ತಾಶ್ರಯದಲ್ಲಿಂದು ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನ ಹಾಗೂ ಮತದಾರರ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಗಿಡ ನೆಡುವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಎಲ್ಲರ ಆಸೆ–ಆಕಾಂಕ್ಷೆಗಳನ್ನು ಪೂರೈಸುವಷ್ಟು ಸಂಪತ್ತುಸಂಪನ್ಮೂಲಗಳು ಭೂಮಿಯಲ್ಲಿವೆ. ಹಾಗಿದ್ದರೂ ಸಹ ಮನುಷ್ಯನ ದುರಾಸೆಯಿಂದ ಪ್ರಕೃತಿಯ ಮೇಲೆ ಸಾಕಷ್ಟು ಹಾನಿಯಾಗುತ್ತಿದೆ. ಅನಾವಶ್ಯಕ, ಅಪರಿಮಿತ ಜೀವನ, ವಾಹನಗಳ ಅಧಿಕ ಬಳಕೆ, ಮಿತ ವಸ್ತುಗಳನ್ನು ಅಗತ್ಯಕ್ಕಿಂತ ಹೆಚ್ಚು ಬಳಸುವಿಕೆಯಿಂದ ಪರಿಸರಕ್ಕೆ ಮಾರಕವಾಗುತ್ತಿದೆ. ಭೂಮಿ ಕೇವಲ ಮನುಷ್ಯನ ಸ್ವತ್ತಲ್ಲ. ಸಕಲ ಜೀವರಾಶಿಗಳಿಗೂ ಭೂಮಿ ಆಶ್ರಯ ತಾಣವಾಗಿದೆ ಈ ನಿಟ್ಟಿನಲ್ಲಿ ಪ್ರಜ್ಞಾವಂತ ನಾಗರಿಕರು ಜೀವನವನ್ನು ಸರಳೀಕರಣಗೊಳಿಸಿ ಪರಿಸರ ರಕ್ಷಣಾ ಕಾರ್ಯಕ್ಕೆ ಪಣತೊಡಬೇಕು ಎಂದರು.

ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್.ಭಾರತಿ ಕಾರ್ಯಕ್ರಮ ಉದ್ಘಾಟಿಸಿ, ಪರಿಸರದ ಅರಿವು ಎಲ್ಲರಲ್ಲೂ ಇರಬೇಕು. ಪ್ರತಿಯೊಬ್ಬರೂ ತಮ್ಮ ಮನೆಗಳ ಸುತ್ತಮುತ್ತಲಿನ ಸ್ಥಳಗಳಲ್ಲಿ, ಅಕ್ಕಪಕ್ಕದಲ್ಲಿ ಗಿಡಗಳನ್ನು ನೆಡಬೇಕು. ಮಕ್ಕಳು ಈ ಬಗ್ಗೆ ಹೆಚ್ಚಿನ ಜವಾಬ್ದಾರಿ ಹಾಗೂ ಕಾಳಜಿ ವಹಿಸಬೇಕು ಎಂದರು.

ಜಿಪಂ ಸಿಇಓ ಕೆ.ಎಂ. ಗಾಯತ್ರಿ ಅಧ್ಯಕ್ಷತೆ ವಹಿಸಿದ್ದಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶೆ ಬಿ.ಎಸ್. ಭಾರತಿ ಜಿಲ್ಲಾಡಳಿತ ಭವನದ ಒಳಾವರಣದಲ್ಲಿರುವ ವಿದ್ಯುನ್ಮಾನ ಮತಯಂತ್ರಗಳ ಸಂರಕ್ಷಣಾ ಕಟ್ಟಡದ ಆವರಣದಲ್ಲಿ ಗಿಡ ನೆಟ್ಟು ನೀರೆರೆಯುವ ಮೂಲಕ ವಿಶ್ವ ಪರಿಸರ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹಿರಿಯ ಸಿವಿಲ್ ನ್ಯಾಯಾಧೀಶ ಹೊನ್ನಸ್ವಾಮಿ, ಜಿಪಂ ಉಪ ಕಾರ್ಯದರ್ಶಿ ಗುಡೂರು ಭೀಮಸೇನ, ನಗರಸಭೆ ಆಯುಕ್ತ ಕರಿಬಸವಯ್ಯ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಜು, ಪರಿಸರ ಅಧಿಕಾರಿ ಎಂ.ಜಿ.ರಘುರಾಮ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಎನ್. ಮಂಜುನಾಥ್, ತೋಟ ಗಾರಿಕೆ ಉಪನಿರ್ದೇಶಕ ಶಿವಪ್ರಸಾದ್ ಇತರರಿದ್ದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷರ ನೇಮಕ

ಚಾಮರಾಜನಗರ, ಜೂ.5– ಕನ್ನಡ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷರಾಗಿ ಡಾ.ಸುಗಂಧರಾಜನ್ ಅವರು ನೇಮಕಗೊಂಡಿದ್ದಾರೆ.



ಯಳಂದೂರು ತಾಲೂಕಿನ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರಾಗಿರುವ ಡಾ.ಸುಗಂಧರಾಜನ್ ಅವರನ್ನು ಪರಿಷತ್ ಜಿಲ್ಲಾ ಅಧ್ಯಕ್ಷರಾಗಿ ನೇಮಿಸಿ ರಾಜ್ಯಧ್ಯಕ್ಷ ಡಾ.ಎನ್. ಬಾಲಾಜಿ ಅವರು ಆದೇಶ ಹೊರಡಿಸಿದ್ದಾರೆ. ಇನ್ನು 15 ದಿನದೊಳಗೆ ಜಿಲ್ಲಾ ಘಟಕದ ಪದಾಧಿಕಾರಿಗಳ ಪಟ್ಟಿಯನ್ನು ಅನುಮೋದನೆಗೆ ಕಳುಹಿಸುವಂತೆ ನೇಮಕಾತಿ ಪತ್ರದಲ್ಲಿ ತಿಳಿಸಲಾಗಿದೆ.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ



ಮಡಿಕೇರಿ, ಜೂ.5– ಜಾಗತಿಕ ತಾಪಮಾನಗಳ ವೈಪರೀತ್ಯದಿಂದ ಉಸಿರಾಡಲು ಶುದ್ಧ ಗಾಳಿ ಸಿಗದಂತಹ ಪರಿಸ್ಥಿತಿ ಎದುರಾಗಿದೆ. ಆ ನಿಟ್ಟಿನಲ್ಲಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಹೇಳಿದರು.

ನಗರದ ಗಾಂಧಿ ಮಂಟಪದ ಬಳಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅರಣ್ಯ ಇಲಾಖೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಷ್ಟ್ರೀಯ ಹಸಿರು ಪಡೆಯ ಇಕೋ ಕ್ಲಬ್ ವತಿಯಿಂದ 'ವಿಶ್ವ ಪರಿಸರ ದಿನಾಚರಣೆ' ಹಾಗೂ ಜಿಲ್ಲಾ ಮಟ್ಟದ ಪರಿಸರ ಜಾಗೃತಿ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂಧನ ಬಳಕೆಯನ್ನು ಮಿತಗೊಳಿಸಿ ಸೈಕಲ್ ಬಳಕೆಯೂ ಪರಿಸರ ಸ್ನೇಹಿಯಾಗಿದೆ, ಇದರಿಂದ ನಮ್ಮ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಪರಿಸರವನ್ನು ಕೂಡ ರಕ್ಷಿಸಬಹುದು. ಇರುವುದೊಂದು ಭೂಮಿ ಅದನ್ನು ಉಳಿಸಿ ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂದು ಶಾಸಕರು ಸಲಹೆ ಹೇಳಿದರು.

ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ಗಿಡಗಳನ್ನು ನೆಟ್ಟು ಮಾತನಾಡಿದ ಪಶ್ಚಿಮ ಘಟ್ಟಗಳ ಸಂರಕ್ಷಣೆ ಕಾರ್ಯಪಡೆಯ ಅಧ್ಯಕ್ಷ ರವಿಕುಶಾಲಪ್ಪ ಪರಿಸರ ದಿನ ಒಂದು ದಿನದ ಕಾರ್ಯಕ್ರಮವಾಗಬಾರದು, ಪರಿಸರವಿಲ್ಲದೆ ಮನುಷ್ಯ ಜೀವಿಸುವುದು ಕಷ್ಟಕರ, ಮನುಷ್ಯನ ಜೀವನದಲ್ಲಿ ಪರಿಸರವೂ ಒಂದು ಮುಖ್ಯ ಪಾತ್ರ ವಹಿಸಿದೆ ಎಂದರು.

ಕೇವಲ ಪಶ್ಚಿಮ ಘಟ್ಟಗಳು ಮಾತ್ರವಲ್ಲದೇ ರಾಜ್ಯದ ಎಲ್ಲಾ ಕಡೆ ಪರಿಸರವನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ ಆ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡುವುದರ ಮೂಲಕ ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಜಿಲ್ಲಾಡಳಿತ ವತಿಯಿಂದ ಮಾಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪರಿಸರ ಜಾಗೃತಿ ಮೂಡಿಸಿ ಎಂದು ಹೇಳಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನಿರಂಜನ್ ಮೂರ್ತಿ ಮಾತನಾಡಿ, ಅರಣ್ಯ ಇಲಾಖೆ ವತಿಯಿಂದ ಪರಿಸರ ಜಾಗೃತಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ. ಇರುವುದೊಂದೇ ಭೂಮಿ ಈ ಭೂಮಿಯನ್ನು ಸಂರಕ್ಷಿಸುವ ಕೆಲಸವಾಗಬೇಕು ಹಾಗೂ ಅರಣ್ಯಪ್ರದೇಶವನ್ನು ಕೂಡ ನಾವು ಸಂರಕ್ಷಿಸಬೇಕು. ಆ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಬೀಜ ಬಿತ್ತುವ ಬೀಜೋತ್ಸವ ಕಾರ್ಯಕ್ರಮವನ್ನು ಇಂದಿನಿಂದ ಜೂ. 12ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅನಿತಾ ಎನ್.ಪಿ. ಮಾತನಾಡಿ, ನಮ್ಮ ಕೆಲಸ ಕೇವಲ ಮಾತನಾಡುವುದಲ್ಲ, ಬದಲು ಅದನ್ನು ಅನುಷ್ಠಾನಗೊಳಿಸುವುದಾಗಬೇಕು. ಮನುಷ್ಯನಿಗೆ ಯಾವ ರೀತಿ ಬದುಕುವ ಹಕ್ಕಿದೆಯೋ, ಅದೇ ರೀತಿ ಎಲ್ಲಾ ಜೀವಸಂಕುಲಗಳಿಗೆ ಪರಿಸರದಲ್ಲಿ ಬದುಕುವ ಹಕ್ಕಿದೆ ಎಂದರು.

ಪರಿಸರ ಜಾಗೃತಿ ಜಾಥಾವು ನಗರದ ಪ್ರಮುಖ ಬೀದಿಯಲ್ಲಿ ಸಾಗಿ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಸಮಾಪನಗೊಂಡಿತು. ಜಾಥಾದಲ್ಲಿ 'ಒಂದೇ ಒಂದು ಭೂಮಿ ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ಉದ್ಘೋಷಣೆಯೊಂದಿಗೆ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ ಸೇರಿದಂತೆ ಹಲವು ಘೋಷಣೆಯೊಂದಿಗೆ ಜಾಥಾ ಸಾಗಿತು. ಇದೇ ವೇಳೆಯಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಜೂ.3 ರಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಜಿಲ್ಲಾಮಟ್ಟದಲ್ಲಿ ಏರ್ಪಡಿಸಿದ್ದ ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತಗೊಂಡ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಉಪ ವಲಯ ಅರಣ್ಯಾಧಿಕಾರಿ ಪೂವಪ್ಪ, ನಗರಸಭೆ ಆಯುಕ್ತ ರಾಮದಾಸ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ–ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಉಮಾಶಂಕರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವೇದಮೂರ್ತಿ, ಸ್ಕೌಟ್ ಮತ್ತು ಗೈಡ್ ಮುಖ್ಯ ಆಯುಕ್ತ ಬೇಬಿ ಮ್ಯಾಥ್ಯು, ಜಿಲ್ಲಾ ಸಂಘಟಕರಾದ ದಮಯಂತಿ, ರಾಷ್ಟ್ರೀಯ ಹಸಿರು ಪಡೆಯ ಜಿಲ್ಲಾ ನೋಡಲ್ ಅಧಿಕಾರಿ ಟಿ.ಜಿ.ಪ್ರೇಮಕುಮಾರ್ ಇತರರು ಇದ್ದರು.

48 ಗಂಟೆಗಳ ಯಶಸ್ವಿ ಕಾರ್ಯಾಚರಣೆ

ಕಾಫಿ ತೋಟದಲ್ಲಿದ್ದ ನರ ಹಂತಕ ಕಾಡಾನೆ ಸೆರೆ



ಸಿದ್ದಾಪುರ, ಜೂ.5– ಕಾಫಿತೋಟಗಳಲ್ಲಿ ಬೀಡುಬಿಟ್ಟು ಕೃಷಿ ಫಸಲು ನಾಶ ಮಾಡುವ ಮೂಲಕ ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿದ್ದ ಕಾಡಾನೆಯನ್ನು ಕೊನೆಗೂ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಸಿದ್ದಾಪುರ ಸಮೀಪದ ಬಿಟಿ ಕಾಡು ಭಾಗದಲ್ಲಿ ಕಳೆದೆರಡು ದಿನಗಳಿಂದ ಮತ್ತಿಗೋಡು ಸಾಕಾನೆ ಶಿಬಿರದ ಅಭಿಮನ್ಯು, ಅರ್ಜುನ, ದುಬಾರೆ ಆನೆ ಶಿಬಿರದ ಅಜಯ, ಧನಂಜಯ, ಪ್ರಶಾಂತ್ ಸಾಕಾನೆಗಳ ಸಹಕಾರದೊಂದಿಗೆ 50ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ ಫಲವಾಗಿ 22 ವರ್ಷ ಪ್ರಾಯದ ಗಂಡಾನೆಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಕೃಷಿ ಫಸಲು ನಾಶ ಮಾಡುತ್ತಾ ಕಾರ್ಮಿಕರು ಬೆಳೆಗಾರರ ಪ್ರಾಣಹಾನಿಗೂ ಕಾರಣವಾಗಿದ್ದ 5 ಆನೆಗಳ ಸೆರೆಗೆ ಅನುಮತಿ ನೀಡಿತ್ತು.

ಸಿದ್ದಾಪುರ ವ್ಯಾಪ್ತಿಯಲ್ಲಿ 3 ಆನೆಗಳ ಸೆರೆಗೆ ಕಾರ್ಯಾಚರಣೆ ಆರಂಭಿಸಿದ ಹಿನ್ನೆಲೆಯಲ್ಲಿ 22 ವರ್ಷದ ಗಂಡಾನೆ ಸೆರೆಸಿಕ್ಕಿದ್ದು, ಲಾರಿ ಮೂಲಕ ಬಂಡಿಪುರ ಅರಣ್ಯಕ್ಕೆ ಕಳಿಸಲಾಗಿದೆ.

ಕಾಡಾನೆ ಲಾರಿ ಹತ್ತಿಸಲು ಹರಸಹಾಸ: ಅರವಳಿಕೆ ನೀಡಿ ಸೆರೆ ಹಿಡಿಯಲಾದ ಕಾಡಾನೆಯನ್ನು ಡಾ.ಚಿಟ್ಟಿಪ್ಪ, ಡಾ.ಮುಜೀಬ್ ಆರೈಕೆ ಮಾಡಿದರು ಸಾಕಾನೆಗಳ ಸಹಕಾರದಿಂದ ಜೆಸಿಬಿ ಮೂಲಕ ಹಗ್ಗವನ್ನು ಕಟ್ಟಿ ಲಾರಿಗೆ ಹತ್ತಿಸಲು ಹರ ಸಾಹಸಪಟ್ಟರು.

ಆನೆ ಸೆರೆಹಿದ ಮಾಹಿತಿ ತಿಳಿದ ಸುತ್ತಮುತ್ತಲ ಕಾರ್ಮಿಕರು ಸ್ಥಳೀಯರು ಸ್ಥಳದಲ್ಲಿ ಜಮಾಯಿಸಿದ್ದರು. ಕಾರ್ಯಾಚರಣೆ ಸಂದರ್ಭ ಸಿಸಿಎಫ್ ಮೂರ್ತಿ, ಡಿ.ಸಿಎಫ್ ಚಕ್ರಪಾಣಿ, ಎಸಿಎಫ್ ರೋಶನಿ, ಆರ್‌ಎಫ್‌ಓ ರಂಜನ್, ದೇವಯ್ಯ, ಡಿಆರ್‌ಎಫ್‌ಓ ಸಂಜಿತ್ ಸೋಮಯ್ಯ, ಶಾರ್ಪ್ ಶೂಟರ್ ಅಕ್ರಂ, ಡಾ.ತಮ್ಮಯ್ಯ, ಚೇತನ್ ಮತ್ತಿತರರು ಹಾಜರಿದ್ದರು.

ಪೊನ್ನಂಪೇಟೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಗೋಣಿಕೊಪ್ಪ, ಜೂ.5– ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ವತಿಯಿಂದ ಇಲ್ಲಿನ ಎಂ.ಸಿ.ಮಾದಪ್ಪ ಪೆಟ್ರೋಲ್ ಬಂಕ್ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಸುಮಾರು 345 ಕಾಡು ಮರಗಳ ಗಿಡ ವಿತರಣೆ ಮಾಡಲಾಯಿತು.



ಮಹಾಗನಿ, ನೆಲ್ಲಿಕಾಯಿ, ಸೀಬೆ, ನೇರಳೆ, ಹಲಸು ಗಿಡಗಳನ್ನು ವಿತರಿಸಲಾಯಿತು. ಹಿರಿಯ ಪಶು ವೈದ್ಯ ಕಂಜಿತಂಡ ಚಿಣ್ಣಪ್ಪ, ಉದ್ಯಮಿ ಮಚ್ಚಮಾಡ ಪಾರ್ವತಿ, ಹಿಂದೂ ಕಾರ್ಯಕರ್ತ ಸುಬ್ರಮಣಿ, ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಉಪಾಧ್ಯಕ್ಷ ಮಚ್ಚಮಾಡ ಅನೀಶ್ ಮಾದಪ್ಪ, ಪ್ರ. ಕಾರ್ಯದರ್ಶಿ ಎನ್. ಎನ್. ದಿನೇಶ್, ಖಜಾಂಚಿ ವಿ.ವಿ. ಅರುಣ್‌ಕುಮಾರ್, ನಿರ್ದೇಶಕ ದರ್ಶನ್ ದೇವಯ್ಯ, ಲಯನ್ಸ್ ಕ್ಲಬ್ ಸದಸ್ಯ ಪಾರುವಂಗಡ ಬೋಸ್ ಪೆಮ್ಮಯ್ಯ, ಸಾರ್ವಜನಿಕರಿಗೆ ಸಸಿ ವಿತರಿಸಿದರು.

ಸೈಕಲ್ ತುಳಿಯುವುದರಿಂದ ದೇಹಕ್ಕೆ ಉತ್ತಮ ವ್ಯಾಯಾಮ



ಕುಶಾಲನಗರ, ಜೂ.5– ಬೈಸಿಕಲ್ ತುಳಿಯುವುದರಿಂದ ದೇಹಕ್ಕೆ ಉತ್ತಮ ವ್ಯಾಯಾಮ ದೊರೆಯುತ್ತದೆ. ದೇಹ ದಂಡನೆ ಮಾಡಿದಷ್ಟು ಆರೋಗ್ಯ ಚೆನ್ನಾಗಿರುತ್ತದೆ ಎಂದು ಆರ್ಯವೈಶ್ಯ ಕುಲಗುರು ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಕುಶಾಲನಗರದ ಆರ್ಯವೈಶ್ಯ ಮಂಡಳಿ ಮತ್ತು ರಿಜಿಡ್ ಗ್ರೂಪ್ ಸಹಭಾಗಿತ್ವದಲ್ಲಿ ವಿಶ್ವ ಬೈಸಿಕಲ್ ದಿನದ ಬೈಸಿಕಲ್ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಸ್ವಾಮೀಜಿ, ಬೈಸಿಕಲ್ ಎನ್ನುವುದು ಬಡವರ ವಾಹನ ಎನ್ನುವ ಬ್ರ್ಯಾಂಡ್ ಆಗಿತ್ತು. ಆದರೆ ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಹೆಚ್ಚಾದಂತೆ ಸೈಕಲ್ ಮೇಲೆ ಪ್ರೀತಿಯು ಹೆಚ್ಚಾಗಿ ಶ್ರೀಮಂತರು ಅದನ್ನು ಬಳಸುವಂತಾಗಿದೆ. ಪ್ರೊ.ಲೇಸ್ಜೆಕ್ ಸಿಬಿಲಿಸ್ಕಿ ಎನ್ನುವ ಪರಿಸರ ಪ್ರೇಮಿಯ ಪ್ರೇರಣೆಯಿಂದ 2018ರ ಜೂ.3 ವಿಶ್ವದ ಮೊದಲ ಬೈಸಿಕಲ್ ದಿನವೆಂದು ಘೋಷಣೆಯಾಗಿ, ಅಂದಿನಿಂದ ಈ ದಿನ ಆಚರಣೆಯಲ್ಲಿ ಇದೆ. ಈಗ ವಿಶ್ವದ 80 ರಾಷ್ಟ್ರಗಳು ಇದನ್ನು ಆಚರಣೆ ಮಾಡುವ ಮೂಲಕ ಜನರ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯಲ್ಲಿ ತೊಡಗಿಕೊಂಡಿದೆ ಎಂದು ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ತಿಳಿಸಿದರು.

ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಬಿ.ಎಲ್.ಉದಯಕುಮಾರ್, ಉದ್ಯಮಿ ಎಸ್.ಕೆ.ಸತೀಶ್, ಜಿಲ್ಲಾಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್, ಮಹಿಳಾ ಮಂಡಳಿ ಅಧ್ಯಕ್ಷೆ ಶೋಭಾ ಸತ್ಯ, ಆರ್ಯವೈಶ್ಯ ಯುವ ಪರಿಷತ್ತಿನ ಉಪಾಧ್ಯಕ್ಷ ವಿ.ಆರ್.ಮಂಜುನಾಥ್, ರಿಜಿಡ್ ಗ್ರೂಪಿನ ಕೆ.ಎಸ್.ನಾಗೇಶ್, ಎನ್.ವಿ.ಬಾಬು, ಎ.ಎಸ್.ಕುಮಾರ್ ಸೇರಿದಂತೆ ಹಲವು ಸೈಕಲ್ ಸವಾರರು ಭಾಗವಹಿಸಿದ್ದರು.

ಜೂ.8, ಸೋ.ಪೇಟೆಯಲ್ಲಿ ಹಾಕಿ ಪಟುಗಳಿಗೆ ಸನ್ಮಾನ

ಸೋಮವಾರಪೇಟೆ, ಜೂ.5– ಬ್ಲೂಸ್ಟಾರ್ ಹಾಕಿ ಸಂಸ್ಥೆಯ ವತಿಯಿಂದ ಇಂಡೋನೇಷ್ಯಾದ ಜಕಾರ್ತದಲ್ಲಿ ನಡೆದ ಹೀರೋ ಮೆನ್ಸ್ ಏಷ್ಯಾಕಪ್ ಹಾಕಿ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ಸ್ಥಳೀಯ ಹಾಕಿ ಪಟುಗಳಾದ ಎಸ್.ವಿ. ಸುನೀಲ್ ಮತ್ತು ಆಭರಣ್ ಸುದೇವ್ ಮತ್ತು ಹಾಸನದ ಶೇಷೇಗೌಡ ಅವರುಗಳನ್ನು ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ಅಭಿ ತಿಳಿಸಿದ್ದಾರೆ.

ಜೂ.8ರ ಮಂಗಳವಾರ ಬೆಳಿಗ್ಗೆ 10–30ಕ್ಕೆ ಕ್ರೀಡಾಪಟುಗಳನ್ನು ತೆರೆದ ವಾಹನದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ನಂತರ ಮಹಿಳಾ ಸಮಾಜದ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸನ್ಮಾನ ನಡೆಯುವುದು. ಕಾರ್ಯಕ್ರಮದಲ್ಲಿ ಶಾಸಕ ಅಪ್ಪಚ್ಚು ರಂಜನ್, ಪಪಂ ಅಧ್ಯಕ್ಷ ಪಿ.ಕೆ ಚಂದ್ರು ಸೇರಿದಂತೆ ಹಲವು ಹಿರಿಯ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ.

ಜೂ.ನ್ಯಾಷನಲ್ ಹಾಕಿ ವಿಭಾಗದಲ್ಲಿ ಕಂಚಿನ ಪದಕ ಪಡೆದ ಲಿಖಿತ್, ಶಮಂತ್, ಸೂರ್ಯ ಹಾಗೂ ಸೀನಿಯರ್ ಮಹಿಳಾ ತಂಡದಲ್ಲಿ ಬೆಳ್ಳಿ ಪದಕ ವಿಜೇತ ತಂಡದ ಸೋಮವಾರಪೇಟೆಯ ಪೂಜಾ, ಕಾವ್ಯ, ಶ್ರಾವ್ಯ, ಧನುಶ್ರೀ, ಶನಿವಾರಸಂತೆಯ ಸಂಧ್ಯಾ, ಖೇಲೋ ಇಂಡಿಯಾದಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದ ಎನ್.ಆರ್. ಆಶಿಕ್ ಅವರುಗಳನ್ನು ಗೌರವಿಸಲಾಗುವುದು ಎಂದು ತಿಳಿಸಿದ್ದಾರೆ.

ರಿಯಾಯಿತಿ ದರದಲ್ಲಿ ಸಸಿ ವಿತರಣೆ

ಮಡಿಕೇರಿ, ಜೂ.5– ಸಾಮಾಜಿಕ ಅರಣ್ಯ ವಲಯದ ಹೊದ್ದೂರು–ವಾಟೆಕಾಡು ಇಲಾಖಾ ಸಸ್ಯ ಕ್ಷೇತ್ರದಲ್ಲಿ 2022–23ನೇ ಮಳೆಗಾಲದಲ್ಲಿ ನೆಡಲು ವಿವಿಧ ಹಣ್ಣು–ಹಂಪಲು ಹಾಗೂ ಕಾಡು ಜಾತಿಯ ಸಸಿಗಳನ್ನು ಬೆಳೆಸಲಾಗಿದ್ದು, ಮಹಾಗನಿ, ಶ್ರೀಗಂಧ, ರಕ್ತ ಚಂದನ, ಶಿವಾನೆ, ಸಿಲ್ವರ್, ತೇಗ, ಬೀಟೆ, ಮಳೆಮರ, ನೇರಳೆ, ಹೊನ್ನೆ, ಸುಬಾಬುಲ್, ಕಾಡುಬಾದಮಿ, ಹಲಸು, ಗಜ್ಜಿಗ, ಮತ್ತಿ, ಬಸವನಪಾದ, ಧೂಪ, ಹೆಬ್ಬಲಸು, ಗಸಗಸೆ, ನೆಲ್ಲಿ, ಹೆಬ್ಬಿದಿರು, ಕಾಡುಮಾವು, ನಂದಿ, ಪುನರ್‌ಪುಳಿ, ಆಲ, ಅರಳಿ, ಮುಂತಾದ ಸಸಿಗಳು ಲಭ್ಯವಿದ್ದು, ಮಾಹಿತಿಗೆ ಮಯೂರ್ ಕಾರವೇಕರ್, ವಲಯ ಅರಣ್ಯಾಧಿಕಾರಿ 7829301127, ದರ್ಶಿನಿ, ಉಪ ವಲಯ ಅರಣ್ಯಾಧಿಕಾರಿ 9743722646, ಚಂದ್ರಾವತಿ, ಅರಣ್ಯ ರಕ್ಷಕಿ 7975952388ನ್ನು ಸಂಪರ್ಕಿಸಿ.

ಇಟ್ಟಿಗೆ ಬಿದ್ದು, ಕಾರ್ಮಿಕ ಸಾವು

ವಿರಾಜಪೇಟೆ, ಜೂ.5– ಕಟ್ಟಡದ ಕೆಲಸ ಮಾಡುವ ಸಂದರ್ಭ ಇಟ್ಟಿಗೆ ಬಿದ್ದು, ಯುವ ಕಾರ್ಮಿಕ ಮೃತ ಪಟ್ಟಿರುವ ಘಟನೆ ವಿರಾಜಪೇಟೆ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ

ಪಿರಿಯಾಪಟ್ಟಣ ತಾಲೂಕಿನ ನಿಲುವಾಡಿ ಗ್ರಾಮದ ಕಾರ್ಮಿಕ ಯೋಗೇಶ್ (25) ಮೃತಪಟ್ಟವನು. ಕೂಲಿ ಕೆಲಸಕ್ಕಾಗಿ ವಿರಾಜಪೇಟೆಗೆ ಬಂದಿದ್ದ ಯೋಗೇಶ್ ಸಮೀಪದ ಅಮ್ಮತ್ತಿಯ ರೈತ ಸಂಪರ್ಕ ಕೇಂದ್ರದ ಬಳಿ ಕಟ್ಟಡ ಕೆಲಸ ಮಾಡುತ್ತಿದ್ದ. ಈ ಸಂದರ್ಭ ಅಕಸ್ಮಿಕವಾಗಿ ಇಟ್ಟಿಗೆ ಬಿದ್ದಕಾರಣ ಯೋಗೇಶ್ ತೀವ್ರವಾಗಿ ಗಾಯಗೊಂಡ. ತಕ್ಷಣ ಸ್ಥಳದಲ್ಲಿದ್ದವರು ಗಾಯಾಳುವನ್ನು ಅಮ್ಮತ್ತಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ದಾಖಲಿಸಿದ್ದರು. ಆದರು ಚಿಕಿತ್ಸೆ ಫಲಕಾರಿಯಾಗದೆ ಯೋಗೇಶ್ ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ.



ಮೃತನ ತಂದೆ ಮಲ್ಲೇಶ್ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕ್ ಸ್ಥಾಪಕರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸಹಕಾರಿ ಪಿತಾಮಹ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲರ ಜಯಂತಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ಎಸ್.ಸೋಮಣ್ಣ, ಪಿ.ರಾಜೇಶ್ವರಿ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸವಿತಾ, ಹರೀಶ್‌ಕುಮಾರ್, ಕಾರ್ಯದರ್ಶಿ ಹರ್ಷಿತ್‌ಗೌಡ ಇದ್ದರು.

ಒಂದನೇ ಪುಟದಿಂದ

ಪರಿಸರಕ್ಕೆ ದೊಡ್ಡ ಹಾನಿ

ತ್ಯಾಜ್ಯವನ್ನು ಸಂಪತ್ತಾಗಿಸುವ ಕಾರ್ಯಕ್ರಮಗಳು, ಅಮೃತ್ ಮಿಷನ್ ಅಡಿ ನಗರಗಳಲ್ಲಿ ಆಧುನಿಕ ಒಳಚರಂಡಿ ಸಂಸ್ಕರಣಾ ಘಟಕಗಳ ನಿರ್ಮಾಣ, ಸಿಂಗಲ್ ಯೂಸ್ ಪ್ಲಾಸ್ಟಿಕ್‌ಗಳನ್ನು ಬಳಸಿ ಪರಿಸರವನ್ನು ರಕ್ಷಿಸುವ ಭಾರತದ ಬಹು ಆಯಾಮಗಳಾಗಿವೆ ಎಂದರು.

ಅಭಿವೃದ್ಧಿ ದೇಶಗಳಿಂದ ಪರಿಸರಕ್ಕೆ ದೊಡ್ಡ ಹಾನಿ: ಹವಾಮಾನ ಬದಲಾವಣೆಯಲ್ಲಿ ಭಾರತದ ಪಾತ್ರ ನಗಣ್ಯವಾಗಿರುವ ಸಂದರ್ಭದಲ್ಲಿ ಭಾರತ ಈ ಪ್ರಯತ್ನ ಮಾಡುತ್ತಿದೆ. ಪ್ರಪಂಚದ ಅಭಿವೃದ್ಧಿ ಹೊಂದಿದ ಆಧುನಿಕ ದೇಶಗಳು ಗರಿಷ್ಠ ಪ್ರಮಾಣದಲ್ಲಿ ಇಂಗಾಲದ ಹೊರಸೂಸುವಿಕೆಗೆ ಅವರೇ ಹೊಣೆ ಎಂದು ಪ್ರಧಾನಿ ದೂರಿದರು.

ಅಂತಾರಾಷ್ಟ್ರೀಯ ಮಟ್ಟದ ಸೌರ ಒಕ್ಕೂಟ: ಸಿಡಿಆರ್‌ಐ ಮತ್ತು ಅಂತಾರಾಷ್ಟ್ರೀಯ ಸೌರ ಒಕ್ಕೂಟ ರಚನೆಗೆ ಭಾರತ ನೇತೃತ್ವ ವಹಿಸಿದೆ. ಕಳೆದ ವರ್ಷ, ಭಾರತವು 2070ರ ವೇಳೆಗೆ ನಿವ್ವಳ ಶೂನ್ಯ ಗುರಿಯನ್ನು ಸಾಧಿಸುವ ಬಗ್ಗೆ ಸಂಕಲ್ಪ ಮಾಡಿದೆ. ಇಂದು ನಮ್ಮ ಸೌರಶಕ್ತಿ ಸಾಮರ್ಥ್ಯ ಸುಮಾರು 18 ಪಟ್ಟು ಹೆಚ್ಚಾಗಿದೆ. ಅದು ಹೈಡ್ರೋಜನ್ ಮಿಷನ್ ಆಗಿರಲಿ ಅಥವಾ ಸರ್ಕ್ಯೂಲರ್ ಆರ್ಥಿಕ ನೀತಿಯ ವಿಷಯವಾಗಿರಲಿ, ಇದು ಪರಿಸರವನ್ನು ರಕ್ಷಿಸುವ ನಮ್ಮ ಬದ್ಧತೆಯ ಫಲಿತಾಂಶವಾಗಿದೆ ಎಂದರು..

ಮಣ್ಣನ್ನು ಜೀವಂತವಾಗಿರಿಸಲು 5 ಮಂತ್ರ: ಮಣ್ಣನ್ನು ಜೀವಂತವಾಗಿಡಲು ದೇಶವು ನಿರಂತರವಾಗಿ ಶ್ರಮಿಸುತ್ತಿದೆ. ಮಣ್ಣನ್ನು ಉಳಿಸಲು, ಐದು ಮುಖ್ಯ ವಿಷಯಗಳ ಮೇಲೆ ಕೇಂದ್ರೀಕರಿಸಿದ್ದೇವೆ ಎಂದ ಪ್ರಧಾನಿ, ಮೊದಲನೆಯದಾಗಿ ಮಣ್ಣನ್ನು ರಾಸಾಯನಿಕ ಮುಕ್ತವನ್ನಾಗಿ ಮಾಡುವುದು ಹೇಗೆ? ಎರಡನೆಯದು ಮಣ್ಣಿನಲ್ಲಿ ವಾಸಿಸುವ ಜೀವಿಗಳನ್ನು ಹೇಗೆ ಉಳಿಸುವುದು?, ಇದನ್ನು ತಾಂತ್ರಿಕ ಭಾಷೆಯಲ್ಲಿ ಮಣ್ಣಿನ ಸಾವಯವ ವಸ್ತು ಎಂದು ಕರೆಯುತ್ತೀರಿ. ಮೂರನೆಯದು ಮಣ್ಣಿನ ತೇವಾಂಶವನ್ನು ಹೇಗೆ ಕಾಪಾಡಿಕೊಳ್ಳುವುದು? ನಾಲ್ಕನೆಯದಾಗಿ ಕಡಿಮೆ ಅಂತರ್ಜಲದಿಂದ ಮಣ್ಣಿಗೆ ಆಗುತ್ತಿರುವ ಹಾನಿಯನ್ನು ಹೇಗೆ ತಡೆಯುವುದು ಮತ್ತು ಐದನೆಯದಾಗಿ, ಅರಣ್ಯದ ವ್ಯಾಪ್ತಿಯ ಕಡಿತದಿಂದ ಮಣ್ಣಿನ ನಿರಂತರ ಸವೆತವನ್ನು ಹೇಗೆ ನಿಲ್ಲಿಸುವುದು ಹೇಗೆ ಅನ್ನೋದರ ಬಗ್ಗೆ ಕೇಂದ್ರ ಸರಕಾರ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದೆ ಎಂದು ಪ್ರಧಾನಿ ತಿಳಿಸಿದರು.

ಪೆಟ್ರೋಲ್‌ನಲ್ಲಿ 10% ಎಥೆನಾಲ್ ಮಿಶ್ರಣ: ಈ ಎಲ್ಲ ಪ್ರಯತ್ನಗಳ ನಡುವೆ, ಭಾರತವು ಇಂದು ಪರಿಸರ ದಿನದಂದು ಮತ್ತೊಂದು ಐತಿಹಾಸಿ ಸಾಧನೆಯನ್ನು ಮಾಡಿದೆ ಎಂದ ಪ್ರಧಾನಿ, ಇಂದು ಭಾರತವು ಪೆಟ್ರೋಲ್‌ನಲ್ಲಿ ಶೇ.10ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ಸಾಧಿಸಿದೆ. ನಿಗದಿತ ಅವಧಿಗಿಂತ 5 ತಿಂಗಳ ಮೊದಲೇ ಭಾರತ ಈ ಗುರಿಯನ್ನು ತಲುಪಿದೆ ಎಂದು ಪ್ರಧಾನಿ ಹೇಳಿದರು.

ಮಕ್ಕಳ ಶಿಕ್ಷಣಕ್ಕೆ ಹೊಸ ಯೋಜನೆ

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರಕುಮಾರ್ ಯೋಜನೆ ಘೋಷಣೆ ಮಾಡಿದ್ದಾರೆ. ಸಿಬಿಎಸ್‌ಇ ಮಾನ್ಯತೆ ಪಡೆದ ಮತ್ತು ಕೇಂದ್ರದ ಮಾನದಂಡಗಳನ್ನು ಪೂರ್ಣಗೊಳಿಸಿದ ಖಾಸಗಿ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಮಕ್ಕಳಿಗೆ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗುವುದು. ಪ್ರವೇಶ ಪರೀಕ್ಷೆ ಮೂಲಕ 9 ಮತ್ತು 11ನೇ ತರಗತಿ ಪ್ರವೇಶ ನೀಡಲು ಪರಿಶಿಷ್ಟಜಾತಿಯ 3000 ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಯೋಜನೆಯಡಿ ಖಾಸಗಿ ವಸತಿ ಶಾಲೆಗಳಲ್ಲಿ ಉಚಿತ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ ಎಂದು ಸಚಿವ ಡಾ.ವೀರೇಂದ್ರ ಕುಮಾರ್ ಮಾಹಿತಿ ನೀಡಿದ್ದಾರೆ.

ವಿದ್ಯುತ್ ಅದಾಲತ್

ನೀಡಬೇಕು. ಎಲ್ಲರೂ ಒಂದೇ ಹಳ್ಳಿಗೆ ಭೇಟಿ ನೀಡದೆ, ಬೇರೆ ಹಳ್ಳಿಗಳಿಗೆ ಭೇಟಿ ನೀಡುವಂತೆ ಸಚಿವರು ತಿಳಿಸಿದ್ದಾರೆ. ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರಿಂದ ವ್ಯವಸ್ಥಾಪಕ ನಿರ್ದೇಶಕರ ಮಟ್ಟದ ಅಧಿಕಾರಿಗಳೂ ಅಭಿಯಾನದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಆದ್ಯತೆ ಮೇರೆಗೆ ತಾಲೂಕಿನ ಗಡಿ ಭಾಗದ ಹಳ್ಳಿಗಳಿಂದ ಆರಂಭಿಸಿ, ಪ್ರತಿ ಹಳ್ಳಿಗೆ ಅಭಿಯಾನ ವಿಸ್ತರಿಸಬೇಕು ಎಂದು ವಿವರಿಸಿದ್ದಾರೆ. ಅಭಿಯಾನದ ವಿವರಗಳನ್ನು ಪ್ರತಿ ತಿಂಗಳು ನಿಗದಿತ ನಮೂನೆಯಲ್ಲಿ ನಮೂದಿಸಿ, ಮಾಹಿತಿಯನ್ನು ಸಂಬಂಧಪಟ್ಟ ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸಬೇಕು. ವ್ಯವಸ್ಥಾಪಕ ನಿರ್ದೇಶಕರು ಪ್ರತಿ 3ನೇ ಸೋಮವಾರ ತಪ್ಪದೇ emg 1 energy@gmail.com ಇ–ಮೇಲ್ ಮೂಲಕ ಸರ್ಕಾರಕ್ಕೆ ಕಳುಹಿಸಬೇಕೆಂದು ಆದೇಶಿಸಿದ್ದಾರೆ.

ಯೋಗ ಪೂರ್ವಾಭ್ಯಾಸ



ಈಗಾಗಲೇ ಮೇ 22ರಂದು ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನದಲ್ಲಿ ಮೊದಲ ಯೋಗ ತಾಲೀಮು ನಡೆದು, ಬಳಿಕ ಮೇ 29ರಂದು ಸುತ್ತೂರು ಶಾಖಾ ಮಠದಲ್ಲಿ 2ನೇ ತಾಲೀಮು ನಡೆದಿತ್ತು. ಮೈಸೂರು ಜಿಲ್ಲಾ ಸಚಿವ ಎಸ್.ಟಿ. ಸೋಮಶೇಖರ್, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಯೋಗನರಸಿಂಹಸ್ವಾಮಿ ದೇವಸ್ಥಾನದ ಶ್ರೀನಿವಾಸ್ ಗುರೂಜಿ, ಯೋಗಾಚಾರ್ಯ ಡಾ.ಸತ್ಯನಾರಾಯಣ ಜೋಯಿಸ್ ದಂಪತಿ, ಯೋಗ ಫೆಡರೇಶನ್ ಆಫ್ ಮೈಸೂರು ಅಧ್ಯಕ್ಷ ಹಾಗೂ ಜಿಎಸ್‌ಎಸ್ ಪ್ರತಿಷ್ಠಾನದ ಮುಖ್ಯಸ್ಥ ಡಿ.ಶ್ರೀಹರಿ, ಉಪಾಧ್ಯಕ್ಷ ಡಾ.ಸತ್ಯನಾರಾಯಣ, ಖಜಾಂಚಿ ಬಿ.ಪಿ.ಮೂರ್ತಿ, ಕಾರ್ಯದರ್ಶಿ ಡಾ.ಪಿ.ಎನ್.ಗಣೇಶ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಎಸ್.ಶಶಿಕುಮಾರ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಯೋಗ ದಿನನಿತ್ಯದ ಭಾಗವಾಗಬೇಕು: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು, ಜೂ.5(ಆರ್‌ಕೆಬಿ)– ಯೋಗ ನಮ್ಮ ದಿನನಿತ್ಯದ ಭಾಗವಾಗಬೇಕು. ದಿನಕ್ಕೆ ಕನಿಷ್ಠ ಅರ್ಧ ಗಂಟೆಯಾದರೂ ಯೋಗಕ್ಕೆ ಮೀಸಲಿಡಬೇಕು ಎಂದು ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರಿನ ಅರಮನೆ ಆವರಣದಲ್ಲಿ ಭಾನುವಾರ ಮೊದಲನೇ ಯೋಗ ಪೂರ್ವಾಭ್ಯಾಸಕ್ಕೆ ಚಾಲನೆ ನೀಡಿ ಮಾತನಾಡಿದರು. ಯೋಗ ಹುಟ್ಟಿದ್ದು ನಾರಸಿಂಹ ಅವತಾರದಲ್ಲಿ. ಭಗವಾನ್ ಆಂಜನೇಯಸ್ವಾಮಿ ಮನುಕುಲಕ್ಕೆ ಯೋಗವನ್ನು ಉಪದೇಶಿಸಿದರೆ, ಪತಂಜಲಿ ಯೋಗ ಮಹರ್ಷಿಗಳು ಯೋಗವನ್ನು ಜನಪ್ರಿಯಗೊಳಿಸಿದರು. ಮಾನವನ ಪ್ರತಿಯೊಂದು ಕ್ರಿಯೆಯೂ ಒಂದಲ್ಲ ಒಂದು ಯೋಗಾಸನವನ್ನು ಒಳಗೊಂಡಿರುತ್ತದೆ. ಆದರೆ ಯೋಗವನ್ನು ನಮ್ಮ ದಿನನಿತ್ಯದ ಅಭ್ಯಾಸದಲ್ಲಿ ತೊಡಗಿಸಿಕೊಂಡರೆ ಮನಸ್ಸು ಮತ್ತು ದೇಹವನ್ನು ನಿಯಂತ್ರಿಸಿಕೊಳ್ಳಬಹುದು ಎಂದರು.

1976ರಲ್ಲಿ ತಮ್ಮ ಆಶ್ರಮದಲ್ಲಿ ಯೋಗ ಆರಂಭಿಸಿದಾಗ ಇದೆಂಥ ಯೋಗ ಎಂದು ಕೆಲವರು ಗೇಲಿ ಮಾಡಿದರು. ನಂತರ ನಾನು ದತ್ತ ಕ್ರಿಯಾ ಯೋಗ ಆರಂಭಿಸಿದೆ. ಹಠಯೋಗದಿಂದ ಮನುಷ್ಯ ತನ್ನ ದೇಹ ಮತ್ತು ಮನಸ್ಸನ್ನು ನಿಯಂತ್ರಿಸಿಕೊಳ್ಳಬಹುದು ಎಂಬುದು ಸಾಬೀತಾಯಿತು ಎಂದು ಹೇಳಿದರು.

ಮೋದಿಯವರ ಮೈಸೂರು ಭೇಟಿ ಜಿಲ್ಲೆಗೆ ಹೆಮ್ಮೆ ತಂದಿದೆ. ಯೋಗವನ್ನು 8 ವರ್ಷದ ಹಿಂದೆ ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಣೆ ಮಾಡಿ ವಿಶ್ವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಈ ಬಾರಿ ಮೈಸೂರಿನಲ್ಲಿ ನಡೆಯುವ ಯೋಗೋತ್ಸವವನ್ನು ಪ್ರಧಾನಿ ನರೇಂದ್ರ ಮೋದಿಯವರಿಗೆ ಸಮರ್ಪಿತವಾಗಬೇಕು ಎಂದು ಹೇಳಿದರು.

ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಭಾಷ್ಯಂ ಸ್ವಾಮೀಜಿ ಮಾತನಾಡಿ, ಸ್ವಚ್ಛ ನಗರಿ, ಪಾರಂಪರಿಕ ನಗರಿ, ಅರಮನೆ ನಗರಿ, ಸಾಂಸ್ಕೃತಿಕ ನಗರಿ ಎನಿಸಿರುವ ಮೈಸೂರು ಜೂ.21ರ ನಂತರ ಪ್ರಧಾನಿ ನರೇಂದ್ರ ಮೋದಿಯವರ ಭೇಟಿ ನಂತರ ಯೋಗ ನಗರವಾಗಿಯೂ ಹೊರ ಹೊಮ್ಮಲಿದೆ ಎಂದರು.

ವಿಶ್ವ ಪರಿಸರ ದಿನ

ಕನಕದಾಸನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ

200 ಗಿಡ ನೆಡುವ ಕಾರ್ಯಕ್ರಮಕ್ಕೆ ಮೈಸೂರು ಪಾಲಿಕೆಯಿಂದ ಚಾಲನೆ

ಮೈಸೂರು,ಜೂ.5(ಪಿಎಂ)– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ, ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ) ಮೈಸೂರು ಹಾಗೂ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಸಂಯುಕ್ತಾಶ್ರಯದಲ್ಲಿ ಭಾನುವಾರ ಮೈಸೂರಿನ ದಟ್ಟಗಳ್ಳಿಯ ಕನಕದಾಸ ನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಸುಮಾರು 200 ವಿವಿಧ ಜಾತಿಯ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್‌ರೆಡ್ಡಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸುಮಾರು 2 ಎಕರೆ ವಿಸ್ತೀರ್ಣ ಹೊಂದಿರುವ ಸದರಿ ಪಾರ್ಕ್‌ನಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ನೀರೆರೆಯಲಾಯಿತು. ಅಲ್ಲದೆ, ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಲು 11 ತಿಂಗಳ ಅವಧಿಗೆ ವಾರ್ಡ್ 46ರ ವ್ಯಾಪ್ತಿಯ ಸದರಿ ಉದ್ಯಾನವನ್ನು ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್‌ಗೆ ವಹಿಸಿಕೊಡಲಾಯಿತು. ಈ ಸಂಬಂಧ ಪಾಲಿಕೆಯಿಂದ ಅನುಮತಿ ಪತ್ರವನ್ನೂ ಇದೇ ವೇಳೆ ನೀಡಲಾಯಿತು.



ಮೈಸೂರಿನ ದಟ್ಟಗಳ್ಳಿಯ ಕನಕದಾಸನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಭಾನುವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್‌ರೆಡ್ಡಿ ಚಾಲನೆ ನೀಡಿದರು.

ಇಂದಿನಿಂದ 2023ರ ಮೇ 4ವರೆಗೆ ನಿರ್ವಹಣೆ ಮಾಡಲು ಅವಕಾಶ ನೀಡಲಾಗಿದೆ. ಉದ್ಯಾನವನದಲ್ಲಿ ಪಾಲಿಕೆ ಅಥವಾ ಸರ್ಕಾರದ ಜಾಹೀರಾತು ಅಳವಡಿಸಲು ಯಾವುದೇ ನಿರ್ಬಂಧ ಇಲ್ಲದಂತೆ ಅವಕಾಶ ಕಲ್ಪಿಸಬೇಕು. ಯಾವುದೇ ಖಾಯಂ ಕಟ್ಟಡ ನಿರ್ಮಾಣ ಮತ್ತು ಮಾರ್ಪಾಡು ಮಾಡಬಾರದು. ಉದ್ಯಾನಕ್ಕೆ ಯಾವುದೇ ಹೆಸರು ನಾಮಕರಣ ಮಾಡಬಾರದು ಎಂಬುದು ಸೇರಿದಂತೆ ಕೆಲ ಷರತ್ತುಗಳನ್ನು ವಿಧಿಸಿ, ಉದ್ಯಾನವನದ ನಿರ್ವಹಣೆಯ ಜವಾಬ್ದಾರಿ ನೀಡಲಾಗಿದೆ.

ಸಿಐಐ ಮೈಸೂರು ಅಧ್ಯಕ್ಷೆ ಸುಪ್ರಿಯಾ ಸಾಲಿಯನ್ ಮಾತನಾಡಿ, ಸಿಐಐ ಮೈಸೂರು ನೇತೃತ್ವದಲ್ಲಿ ಇನ್ನು ಅನೇಕ ಉದ್ಯಾನವನಗಳ ನಿರ್ವಹಣೆಗೆ ಹಲವು ಕಂಪನಿಗಳು ಮುಂದೆ ಬಂದಿವೆ. ಶೀಘ್ರದಲ್ಲಿ ಇದಕ್ಕೆ ಚಾಲನೆ ನೀಡಲಾಗುವುದು ಎಂದು ಪ್ರಕಟಿಸಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್‌ರೆಡ್ಡಿ, ಸಾರ್ವಜನಿಕರು ಅಥವಾ ಕೈಗಾರಿಕಾ ಸಂಸ್ಥೆಗಳಿಗೆ ಉದ್ಯಾನವನಗಳನ್ನು ನಿರ್ವಹಣೆಗೆ ನೀಡಲು ಈಗಾಗಲೇ ಪಾಲಿಕೆ ನೀತಿ ರೂಪಿಸಿಕೊಂಡಿದೆ. ಮೈಸೂರು ನಗರದಲ್ಲಿ ಸುಮಾರು 580 ಉದ್ಯಾನವನಗಳಿದ್ದು, ಈ ಪೈಕಿ ಸುಮಾರು 20 ಉದ್ಯಾನಗಳನ್ನು ಸದರಿ ನೀತಿಯಡಿ ನಿರ್ವಹಣೆಗೆ ನೀಡಲಾಗಿದೆ. ಅದೇ ರೀತಿ ಇಂದು ಸದರಿ ಸಾಲುಮರದ ತಿಮ್ಮಕ್ಕ ಉದ್ಯಾನದ ನಿರ್ವಹಣೆ ಜವಾಬ್ದಾರಿ ಯನ್ನು ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್‌ಗೆ ನೀಡಲಾಯಿತು ಎಂದು ತಿಳಿಸಿದರು. ಇದಕ್ಕೂ ಮುನ್ನ ಪಾಲಿಕೆ ತೋಟಗಾರಿಕೆ ವಿಭಾಗದ ತೋಟಗಾರಿಕೆ ನಿರೀಕ್ಷಕ ಪುನೀತ್, ಸಿಬ್ಬಂದಿಯಾದ ರಾಜಶೇಖರ್, ಗಂಗಾಧರ್, ಪಿ.ಚಂದ್ರು ಮಹದೇವಯ್ಯ, ನಾಗಣ್ಣ ಕಾಳೇಗೌಡ ಅವರನ್ನು ಸನ್ಮಾನಿಸಲಾಯಿತು. ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಕಂಪನಿಯ ಹೆಡ್‌ಸ್ಟ್ರಾಟೆಜಿ ಹೆಚ್.ಎಂ.ಪ್ರಶಾಂತ್, ಸಿಐಐ ಮೈಸೂರು ಉಪಾಧ್ಯಕ್ಷಸ್ಯಾಮ್ ಸೆರಿಯನ್, ಪಾಲಿಕೆ ಉಪ ಆಯುಕ್ತರಾದ ಎಂ.ಕೆ.ಸವಿತಾ, ಅಧೀಕ್ಷಕ ಅಭಿಯಂತರ ಜೆ.ಮಹೇಶ್ ಮತ್ತಿತರರು ಹಾಜರಿದ್ದರು.

ವಿವಿಧ ಉದ್ಯಾನದಲ್ಲಿ ಕನಿಷ್ಠ 5 ಗಿಡ ನೆಡುವಿಕೆ

ಏಕಕಾಲದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳ ವಿವಿಧ ಉದ್ಯಾನಗಳಲ್ಲಿ ನೆರಳು ನೀಡುವ ಮತ್ತು ಪಕ್ಷಿಗಳಿಗೆ ಹಣ್ಣು ದೊರಕುವಂತಹ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಪಾಲಿಕೆಯಿಂದ ಪರಿಸರ ದಿನ ಆಚರಿಸಲಾಯಿತು. ಒಂದೊಂದು ಉದ್ಯಾನದಲ್ಲಿ ಕನಿಷ್ಠ 5 ಗಿಡಗಳನ್ನು ನೆಡಲಾಯಿತು. ಇದಕ್ಕಾಗಿ ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ 500 ಗಿಡಗಳನ್ನು ನೀಡಲಾಗಿತ್ತು.

ಮೂಡಲಹುಂಡಿಯಲ್ಲಿ 'ಬಿತ್ತೋತ್ಸವ'ಕ್ಕೆ ಚಾಲನೆ

● ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ವೃಕ್ಷ ಹೊದಿಕೆ ● ಹೆಚ್ಚಿನ ಪರಿಸರ ಸಮತೋಲನ ಕಾಪಾಡಲು ಅಭಿಯಾನ ● ಜೂ.12ರವರೆಗೆ ಬಿತ್ತೋತ್ಸವ ಕಾರ್ಯಕ್ರಮ ಮುಂದುವರಿಕೆ



ಮೈಸೂರು, ಜೂ. 5(ಎಂಟಿವೈ)– ಸಾಮಾಜಿಕ ಅರಣ್ಯ ಪ್ರದೇಶಗಳಲ್ಲಿ ವೃಕ್ಷ ಹೊದಿಕೆ ಹೆಚ್ಚಿಸಿ ಪರಿಸರ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ರಾಜ್ಯದಾದ್ಯಂತ ಇಂದಿನಿಂದ ಜೂ.12 ವರೆಗೆ ನಡೆಸಲಿರುವ 'ಬಿತ್ತೋತ್ಸವ' ಅಭಿಯಾನಕ್ಕೆ ಭಾನುವಾರ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮಕ್ಕೆ ಸೇರಿದ ಮೀಸಲು ಅರಣ್ಯ ಪ್ರದೇಶದಲ್ಲಿ ಬೀಜ ಬಿತ್ತನೆ ಮಾಡುವ ಮೂಲಕ ಡಿಸಿಎಫ್ ಕೆ.ಕಮಲಾ ಕರಿಕಾಳನ್ ಚಾಲನೆ ನೀಡಿದರು.

ಮುಂಬರುವ ದಿನಗಳಲ್ಲಿ ಪರಿಸರದಲ್ಲಿ ಉಂಟಾಗುವ ಏರುಪೇರು ಮತ್ತು ಹವಾಮಾನ ವೈಪರೀತ್ಯ ತಡೆಗಟ್ಟಲು ಪರಿಸರ ರಕ್ಷಿಸಬೇಕಾದ ಅನಿವಾರ್ಯತೆ ಎದುರಾಗಿದ್ದು, ಈ ಹಿನ್ನೆಲೆಯಲ್ಲಿ ವಿಶ್ವಪರಿಸರ ದಿನದ ಅಂಗವಾಗಿ ಅರಣ್ಯ ಇಲಾಖೆ ಮೈಸೂರು ಸೇರಿದಂತೆ ರಾಜ್ಯದಾದ್ಯಂತ 50 ವಿಭಾಗಗಳಲ್ಲಿ 228 ವಲಯದಲ್ಲಿ 'ಬಿತ್ತೋತ್ಸವ' ಅಭಿಯಾನ ನಡೆಸುತ್ತಿದೆ. ಆ ಮೂಲಕ ಅರಣ್ಯ ಇಲಾಖೆಗೆ ಸೇರಿದ ಸಾಮಾಜಿಕ ಅರಣ್ಯ ಹಾಗೂ ಮೀಸಲು ಅರಣ್ಯ ಪ್ರದೇಶದಲ್ಲಿ ಸ್ಥಳೀಯ ಪ್ರದೇಶಕ್ಕೆ ಅನುಗುಣವಾಗಿ ಬೆಳೆಯುವ ಮರಗಳ ಬೀಜ ಬಿತ್ತನೆ ಮಾಡಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲೂ ಬಿತ್ತೋತ್ಸವ ಅಭಿಯಾನವನ್ನು ನಡೆಸಲು ಅರಣ್ಯ ಇಲಾಖೆ ಕ್ರಮ ಕೈಗೊಂಡು ಇಂದಿನಿಂದ ಹಂತ ಹಂತವಾಗಿ ಗುರುತಿಸಲ್ಪಟ್ಟ ಸ್ಥಳದಲ್ಲಿ ಗಿಡ–ಮರಗಳ ಬೀಜವನ್ನು ಬಿತ್ತನೆ ಮಾಡಲಾಗುತ್ತದೆ.

104 ಮಂದಿ ಭಾಗಿ: ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮಕ್ಕೆ ಹೊಂದಿಕೊಂಡಿರುವ ವರಕೋಡು ಮೀಸಲು ಅರಣ್ಯ ಪ್ರದೇಶದಲ್ಲಿ ಬಿತ್ತೋತ್ಸವಕ್ಕೆ ಡಿಸಿಎಫ್ ಕೆ.ಕಮಲಾ ಕರಿಕಾಳನ್ ಬೀಜ ಬಿತ್ತನೆ ಮಾಡುವ ಮೂಲಕ ಚಾಲನೆ ನೀಡಿದರು. ಇದೇ ವೇಳೆ ಆಲ, ಅರಳಿ, ಹೊನ್ನೆ, ಹೊಂಗೆ, ಕಾಡುಬಾದಾಮಿ, ತಾರೆ, ಹೆಬ್ಬೇವು, ತೇಗ, ಬಿದಿರು, ಕಮರ, ಮುತ್ತುಗ, ಶಿವನಿ, ಮಹಾಗನಿ, ಸಂಪಿಗೆ ಮರದ ಬೀಜವನ್ನು ಬಿತ್ತಲಾಯಿತು. ಕಳೆದ ರಾತ್ರಿ ಸುರಿದಿದ್ದ ಭಾರೀ ಮಳೆ ಇಂದು ನಡೆಸಿದ ಬಿತ್ತೋತ್ಸವ ಅಭಿಯಾನಕ್ಕೆ ಪೂರಕವಾಗಿದ್ದರಿಂದ ಗುಂಡಿ ತೋಡಲು ಸುಲಭವಾಗಿ, ಅಭಿಯಾನ ನಿಗದಿಗೂ ಮುನ್ನವೇ ಮುಗಿಯಲು ಕಾರಣವಾಯಿತು.

'ಮೈಸೂರು ಮಿತ್ರ'ನೊಂದಿಗೆ ಡಿಸಿಎಫ್ ಕೆ.ಕಮಲಾ ಕರಿಕಾಳನ್ ಮಾತನಾಡಿ, ಸರ್ಕಾರದ ಆದೇಶದ ಮೇರೆಗೆ ಮೈಸೂರು ಜಿಲ್ಲೆಯಲ್ಲಿ ಹಂತ ಹಂತವಾಗಿ ಬಿತ್ತನೆ ಮಾಡುವ ಅಭಿಯಾನ ಆರಂಭಿಸಲಾಗಿದೆ. ಪರಿಸರ ಸಮತೋಲನ ಕಾಪಾಡುವುದಕ್ಕಾಗಿ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಗಿಡ–ಮರ ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಅದಕ್ಕಾಗಿ ಜೂ.5ರಿಂದ 12ವರೆಗೆ 'ಬಿತ್ತೋತ್ಸವ' ಅಭಿಯಾನ ನಡೆಸುವ ಮೂಲಕ ಸಾಮಾಜಿಕ ಅರಣ್ಯ ಪ್ರದೇಶವನ್ನು ಸಮೃದ್ಧವಾಗಿ ಬೆಳೆಸಲು ಉದ್ದೇಶಿಸಲಾಗಿದೆ. ಮೈಸೂರು ತಾಲೂಕಿನ ಮೂಡಲಹುಂಡಿ ಹಾಗೂ ವರಕೋಡು ಗ್ರಾಮಕ್ಕೆ ಹೊಂದಿಕೊಂಡಂತಿರುವ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಬೀಜ ಬಿತ್ತನೆ ಕಾರ್ಯ ನಡೆಸಲಾಗಿದೆ ಎಂದರು.

ತಿ.ನರಸೀಪುರ ತಾಲೂಕಲ್ಲಿ ತುಂಬಲ ಗ್ರಾಮದ ಮೀಸಲು ಅರಣ್ಯ ಪ್ರದೇಶದಲ್ಲಿ ಹೊಂಗೆ, ತಪಸಿ, ಬಿದಿರು, ಬಿಲ್ವಪತ್ರೆ ಬೀಜ ಬಿತ್ತನೆ ಮಾಡಲಾಗುತ್ತದೆ. ನಂಜನಗೂಡು ತಾಲೂಕಿನ ಕೊಣ್ಣೂರು ಗುಡ್ಡದಲ್ಲಿ ಹೊಂಗೆ, ಕಾಡುಬಾದಾಮಿ, ತಪಸಿ ಮರದ ಬೀಜ ಬಿತ್ತನೆ ಮಾಡಲಾಗುತ್ತದೆ. ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಹಿನ್ನೀರಿನ ಪ್ರದೇಶ ಹಾಗೂ ತೊರವಳ್ಳಿ ಗುಡ್ಡದಲ್ಲಿ ಶ್ರೀಗಂಧ, ಶಿವಾನಿ, ಹುಣಸೆ, ಬೇವು, ಹೊನ್ನೆ, ಅಂಟುವಾಳ, ಮರಳೆ ಹಾಗೂ ಇನ್ನಿತರ ಮರದ ಬೀಜ ನೆಡಲಾಗುತ್ತದೆ. ಸರಗೂರು ತಾಲೂಕಲ್ಲಿ ಚಿಕ್ಕದೇವಮ್ಮ ಬೆಟ್ಟದಲ್ಲಿ ಹೊಂಗೆ, ಹೊನ್ನೆ, ಶಿವಾನಿ, ಶ್ರೀಗಂಧ, ಅಂಟುವಾಳ, ಬಿದಿರು ಹಾಗೂ ಬೇವಿನಮರದ ಬೀಜ ಬಿತ್ತಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಸ್ಥಳೀಯ ಆರ್‌ಎಫ್‌ಓ ಹಾಗೂ ಡಿಆರ್‌ಎಫ್ ನೇತೃತ್ವದಲ್ಲಿ ಬೀಜೋತ್ಸವ ಅಭಿಯಾನ ಮುಂದುವರೆಯಲಿದೆ. ಇದಕ್ಕಾಗಿ ಈಗಾಗಲೇ ಬಿತ್ತನೆ ಬೀಜವನ್ನು ತಂದಿಡಲಾಗಿದೆ ಎಂದು ಹೇಳಿದರು.

ಅಭಿಯಾನದಲ್ಲಿ ಡಿಸಿಎಫ್ ಶ್ರೀಧರ್, ಆರ್‌ಎಫ್‌ಗಳಾದ ಸುನೀತಾ, ಕೆ.ಸುರೇಂದ್ರ, ವರಕೋಡು ಮೊರಾರ್ಜಿ ದೇಸಾಯಿ ಶಾಲೆಯ 44 ವಿದ್ಯಾರ್ಥಿಗಳು, ವಿದ್ಯಾವರ್ಧಕ ಕಾನೂನು ಕಾಲೇಜಿನ 14 ವಿದ್ಯಾರ್ಥಿಗಳು, ಓಡಿಪಿ ಸಂಸ್ಥೆಯ 10 ಮಂದಿ ಸ್ವಯಂಸೇವಕರು, ಪರಿಸರ ಸಂರಕ್ಷಣಾ ಸಮಿತಿಯ 8 ಮಂದಿ ಸದಸ್ಯರು, ಗ್ರೂಪ್ ಆಫ್ ಸ್ಟೂಡೆಂಟ್ ಫಾರ್ ಸೋಶಿಯಲ್ ಸರ್ವಿಸ್ (ಜಿಎಸ್‌ಎಸ್)12 ಹಾಗೂ ಅರಣ್ಯ ಇಲಾಖೆಯ 18 ಮಂದಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮಾನಸಗಂಗೋತ್ರಿ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಣೆ

ಮೈಸೂರು, ಜೂ.5(ಆರ್‌ಕೆಬಿ)– ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ಆವರಣದಲ್ಲಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅವರು ಸಾಂಕೇತಿಕವಾಗಿ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.



ಸ್ವಿತೇನಿಯ ಮಹಾಗನಿ ಗಿಡಗಳನ್ನು ನೆಟ್ಟು, ನೀರೆರೆದ ಕುಲಪತಿ, ಈ ಗಿಡವನ್ನು ಪ್ರತಿನಿತ್ಯ ಗಮನಿಸಿ, ನೀರೆರೆದು ಪೋಷಿಸಿ, ಬೆಳೆಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ವಿಶೇಷ ಅಧಿಕಾರಿ ಡಾ.ಹೆಚ್.ಕೆ.ಚೇತನ್, ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿರ್ದೇಶಕ ಟಿ.ಅನಂತ ಪದ್ಮನಾಭ, ತೋಟಗಾರಿಕೆ ನಿರ್ದೇಶಕ ಮುಜಾಹಿದ್ ಇನ್ನಿತರರು ಉಪಸ್ಥಿತರಿದ್ದರು.

ಎಂಐಟಿಎಂನಿಂದ ಅಣಕು ಸಿಇಟಿ ಪರೀಕ್ಷೆ

ಮೈಸೂರು, ಜೂ.5(ಎಂಟಿವೈ)–ಎಂಐಟಿಎಂ ಶಿಕ್ಷಣ ಸಂಸ್ಥೆ ವತಿಯಿಂದ ಜೂ.13ರಂದು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಅಣಕು ಸಿಇಟಿ ಪರೀಕ್ಷೆ ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಎ.ಎಂ. ಅನಿರುದ್ಧ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಆನ್‌ಲೈನ್ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿತ್ತು. ಈಗ ಕೊರೊನಾ ಹಾವಳಿ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಭೌತಿಕ ಪರೀಕ್ಷೆ ನಡೆಸಲಾಗುತ್ತಿದೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ಆದರೆ ಜೂ.6ರ ಮುನ್ನ ನೋಂದಣಿ ಮಾಡಿಕೊಳ್ಳಬೇಕು. ಈ ಅಣಕು ಪರೀಕ್ಷೆಯಲ್ಲಿ ಮೊದಲ ಐದು ರ್‍ಯಾಂಕ್ ಪಡೆದವರು ಶಿಕ್ಷಣ ಸಂಸ್ಥೆ ಸೇರ್ಪಡೆಯಾದಲ್ಲಿ ಅವರಿಗೆ ಶುಲ್ಕ ರಿಯಾಯಿತಿ ಸಿಗಲಿದೆ. ಪರೀಕ್ಷೆಗೆ ಹಾಜರಾಗುವವರಿಗೆ ಬಸ್ ವ್ಯವಸ್ಥೆ ಇರಲಿದ್ದು, ಹೆಚ್ಚಿನ ಮಾಹಿತಿಗೆ ದೂ. 96202 28021, 96202 28022ನ್ನು ಸಂಪರ್ಕಿಸಬಹುದೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಜಿ.ನರೇಶ್‌ಕುಮಾರ್ ಇದ್ದರು.



ಮೈಸೂರಿನಲ್ಲಿ ನಡೆದ ಜಿಲ್ಲಾ ಬ್ರಾಹ್ಮಣ ಮಹಾಸಭಾ ಕಾರ್ಯಕ್ರಮದಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರು ಭೇಟಿ ಮಾಡಿ ಮತ ಯಾಚಿಸಿದರು. ಈ ವೇಳೆ ಮಹಾಸಭಾದ ಅಧ್ಯಕ್ಷ ನಟರಾಜ ಜೋಯಿಸ್ ಮತ್ತು ವಿಪ್ರ ಮುಖಂಡರುಗಳು ಉಪಸ್ಥಿತರಿದ್ದರು.

ರೈತರಿಗೆ ಕಡಿಮೆ ದರದಲ್ಲಿ ಐದು ಲಕ್ಷ ಸಸಿ

● ಮೈಸೂರಲ್ಲಿ 30 ಕಿ.ಮೀ. ರಸ್ತೆ ಬದಿ ಗಿಡ ನೆಡುವ ಯೋಜನೆ ● ವಿಜಯನಗರ 4ನೇ ಹಂತ, ಆರ್.ಟಿ.ನಗರದಲ್ಲಿ ವನಮಹೋತ್ಸವ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.5–ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಅರಣ್ಯೀಕರಣ ಹಾಗೂ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರೈತರಿಗೆ 5 ಲಕ್ಷ ವಿವಿಧ ತಳಿಯ ಗಿಡಗಳನ್ನು ಕಡಿಮೆ ದರದಲ್ಲಿ ವಿತರಿಸಲು ಅರಣ್ಯ ಇಲಾಖೆ ಮುಂದಾಗಿದೆ. ಇದರೊಂದಿಗೆ ಹಸಿರೀಕರಣ ಯೋಜನೆಯಡಿ ಮೈಸೂರಿನ ವಿವಿಧೆಡೆ ಒಂದು ಲಕ್ಷ ಗಿಡ ನೆಡಲು ಅರಣ್ಯ ಇಲಾಖೆ ಮುಂದಾಗಿದೆ.

ಪರಿಸರ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಪ್ರತಿವರ್ಷ ಅರಣ್ಯ ಇಲಾಖೆ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದು, ಈ ಬಾರಿ ವನಮಹೋತ್ಸವ ಹಾಗೂ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಬೀಜ ಬಿತ್ತನಾ ಕಾರ್ಯಕ್ರಮಕ್ಕೆ ವಿಶ್ವ ಪರಿಸರ ದಿನಾಚರಣೆ ದಿನವಾದ ಭಾನುವಾರ ಚಾಲನೆ ನೀಡಲಾಯಿತು. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ನೀಡಲು 5 ಲಕ್ಷ ಗಿಡ ಬೆಳೆಸಲಾಗಿದ್ದು, ಹಸಿರೀಕರಣ ಯೋಜನೆ ಯಡಿ ರಸ್ತೆ ಬದಿ ಲಕ್ಷ ಗಿಡ ಬೆಳೆಸಿ ವನಮಹೋತ್ಸವಕ್ಕೆ ಅರಣ್ಯ ಇಲಾಖೆ ಸಜ್ಜಾಗಿದೆ. ಮೈಸೂರು ನಗರದ ಪ್ರಮುಖ ಮೂರು ಸಸ್ಯಕ್ಷೇತ್ರ(ನರ್ಸರಿ)ದಲ್ಲಿ ರೈತರೂ ಸೇರಿದಂತೆ ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಗಿಡ ಪೂರೈಸಲಾಗುತ್ತಿದೆ. ಇದರೊಂದಿಗೆ ತಾಲೂಕು ಕೇಂದ್ರಗಳ ನರ್ಸರಿಗಳಲ್ಲೂ ಗಿಡ ಮಾರಾಟಕ್ಕೆ ಇಡಲಾಗಿದೆ

ರೈತರಿಗಾಗಿ 5 ಲಕ್ಷ ಗಿಡ: ಈ ವರ್ಷ ಜಿಲ್ಲೆಯ ರೈತರಿಗೆ ವಿತರಿಸಲು ಅರಣ್ಯ ಇಲಾಖೆ 5 ಲಕ್ಷ ವಿವಿಧ ರೀತಿಯ ಗಿಡ ಬೆಳೆಸಿದೆ. ಅದರಲ್ಲಿಯೂ ಭಾರೀ ಬೇಡಿಕೆಯಿರುವ ಶ್ರೀಗಂಧ, ತೇಗ, ಹೆಬ್ಬೇವು, ಸಿಲ್ವರ್ ಓಕ್ ಗಿಡಕ್ಕೆ ಬೇಡಿಕೆ ಹೆಚ್ಚಾಗಿದೆ. ಕ್ರಮಬದ್ಧವಾಗಿ ಈ ನಾಲ್ಕು ಮರಗಳನ್ನು ಬೆಳೆಸಿದರೆ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದನ್ನು ಮನಗಂಡಿರುವ ರೈತರು ಈ ನಾಲ್ಕು ಗಿಡಕ್ಕೆ ಹೆಚ್ಚಿನ ಬೇಡಿಕೆ ಇಡುತ್ತಿದ್ದಾರೆ. ಹುಣಸೂರು, ಪಿರಿಯಾಪಟ್ಟಣ ಸೇರಿದಂತೆ ವಿವಿಧೆಡೆ ರೈತರು ತಮ್ಮ ಹೊಲ, ಗದ್ದೆಗಳ ಬದುಗಳಲ್ಲಿ ಹೆಬ್ಬೇವು ಬೆಳೆಸಿ ಆದಾಯ ಗಳಿಸಿದ್ದಾರೆ. ಇದರಿಂದ ಹೆಬ್ಬೇವಿಗೂ ಎಲ್ಲಿಲ್ಲದ ಬೇಡಿಕೆ ಉಂಟಾಗುತ್ತಿದ್ದು, ರೈತರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತಿದೆ. ಬೇಡಿಕೆಗೆ ಅನುಗುಣವಾಗಿ ಗಿಡ ಪೂರೈಸಲು ಕ್ರಮ ಕೈಗೊಂಡಿರುವ ಇಲಾಖೆ ಮೈಸೂರಿನ ಮೂರು, ತಿ.ನರಸೀಪುರ, ನಂಜನಗೂಡು, ಹೆಚ್.ಡಿ. ಕೋಟೆ, ಹುಣಸೂರಿನಲ್ಲಿರುವ ನರ್ಸರಿಗಳಲ್ಲಿ ಗಿಡಗಳನ್ನು ರೈತರಿಗೆ ಸರಬರಾಜು ಮಾಡಲು ಕ್ರಮ ಕೈಗೊಂಡಿದೆ.



51 ಬಗೆಯ ಗಿಡ ಲಭ್ಯ: ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಈ ಬಾರಿ 51 ಬಗೆಯ ಗಿಡಗಳನ್ನು ಬೆಳೆಸಲಾಗಿದೆ. ಮೂರು ವಿಭಾಗದಲ್ಲಿ ಗಿಡ ಬೆಳೆಸಲಾಗಿದ್ದು, ರೈತರು ಮಾತ್ರವಲ್ಲದೆ ಪರಿಸರ ಪ್ರೇಮಿಗಳಿಗೂ ಬೇಕಾದ ಗಿಡಗಳು ನರ್ಸರಿಯಲ್ಲಿ ಲಭ್ಯವಿರುತ್ತವೆ. ಹಣ್ಣಿನ ಗಿಡಗಳ ವಿಭಾಗದಲ್ಲಿ 18 ಬಗೆಯ ಗಿಡ ಬೆಳೆಸಲಾಗಿದೆ. ಜಂಬುನೇರಳೆ, ನಾಯಿನೇರಳೆ, ಪನ್ನೇರಳೆ, ರಾಮಫಲ, ಸೀತಾಫಲ, ಲಕ್ಷ್ಮಣಫಲ, ಸೀಬೆ, ಬೆಟ್ಟದ ನೆಲ್ಲಿ, ಚಳ್ಳೆ, ಹುಣಸೆ, ಬೇವು, ಅತ್ತಿ, ಅರಳಿ, ಗೋಣಿ, ಸಿಂಗಪುರ್ ಚೆರ್ರಿ (ಗಸಗಸೆ), ಹಲಸು, ಮಾವಿನ ಗಿಡಗಳನ್ನು ಮಾರಾಟಕ್ಕಿಡಲಾಗಿದೆ.

ಹೂ, ಅಲಂಕಾರಿಕ ಹಾಗೂ ರಸ್ತೆಬದಿ ಬೆಳೆಸುವುದಕ್ಕಾಗಿ 25 ಬಗೆಯ ಗಿಡಗಳನ್ನು ಬೆಳೆಸಲಾಗಿದೆ. ಜಕರಂಡಾ, ಗುಲ್ಮೊಹರ್, ಜವಾನಿಕ, ಪೆಲ್ಟೊಫಾರ್ಮ್, ಕಾಡುಬೆಂಡೆ, ತಟ್ಟೆಲೆ ಮರ, ಪಾತಾಳ ಮರ, ಬಿಳಿ ಬೂರುಗ, ಟಬೂಬಿಯಾ ಔಲಾಂಡ, ಟಬೂಬಿಯಾ ರೋಸಿಯಾ, ಟಬೂಬಿಯಾ ಅರ್ಜೆಂಟೀಯಾ, ಟಬೂಬಿಯಾ ಪಲ್ಲಿಡಾ, ಕಾಡುಬಾದಾಮಿ, ಆಕಾಶ ಮಲ್ಲಿಗೆ, ಆನೆಗುಲಗಂಜಿ, ಬುಗುರಿ, ಮಹಾಗನಿ, ಗಾಳಿಚಂದ, ಬಸವನಪಾದ, ಸಂಪಿಗೆ ಪುತ್ರಂಜೀವಿ, ಹೊಳೆದಾಸವಾಳ, ಗಸಗಸೆ/ಚೆರ್ರಿ, ಅಂಟುವಾಳ ಹಾಗೂ ಹೊಂಗೆ ಗಿಡ ಲಭ್ಯವಿದೆ. ಧಾರ್ಮಿಕ ಮಹತ್ವದ ಮರಗಳಾದ ಬಿಲ್ವಪತ್ರೆ, ಬನ್ನಿ, ತಾರೆ, ಅರಳಿ, ಬೇವು, ಅತ್ತಿ, ಸೀತಾ ಅಶೋಕ, ಸಂಪಿಗೆ ಹಾಗೂ ಶ್ರೀಗಂಧದ ಗಿಡಗಳು ದೊರೆಯಲಿವೆ.

1 ರೂ, 3 ರೂ.ಗೆ ಒಂದು ಗಿಡ: ನರ್ಸರಿಯಲ್ಲಿ ಬೆಳೆಸಿರುವ ಗಿಡಗಳಲ್ಲಿ ಪ್ಯಾಕ್‌ಗೆ ಅನುಗುಣವಾಗಿ ದರ ನಿಗದಿ ಮಾಡಲಾಗಿದೆ. 6X9 ಬ್ಯಾಗ್‌ನ ಗಿಡವೊಂದಕ್ಕೆ 3 ರೂ., 5X8 ಬ್ಯಾಗ್‌ನಲ್ಲಿರುವ ಗಿಡಕ್ಕೆ 1 ರೂ. ದರ ನಿಗದಿ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಹೊಲ, ಗದ್ದೆಗಳಲ್ಲಿ ನೆಡಲು ಆರ್‌ಟಿಸಿ ಪ್ರತಿ ನೀಡಬೇಕಾಗಿದೆ. ನಗರ ಪ್ರದೇಶದಲ್ಲಿ ವನಮಹೋತ್ಸವಕ್ಕಾಗಿ, ಶಾಲಾ, ಕಾಲೇಜು, ಕಚೇರಿ ಆವರಣ, ಮನೆ ಬಳಿ ನೆಡಲು ಯಾವುದೇ ದಾಖಲೆ ಅಗತ್ಯವಿಲ್ಲ.

ಪ್ರೋತ್ಸಾಹ ಧನ: ಗಿಡ ಬೆಳೆಸಲು ರೈತರಿಗೆ ಸರ್ಕಾರ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮ ರೂಪಿಸಿದೆ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರೈತರು ಒಂದು ಗಿಡ ಪೋಷಿಸಿದರೆ ಮೂರು ವರ್ಷಕ್ಕೆ 125 ರೂ. ಪ್ರೋತ್ಸಾಹ ಧನ ನೀಡುತ್ತದೆ. ಮೊದಲ ವರ್ಷದಲ್ಲಿ 35 ರೂ., ಎರಡನೇ ವರ್ಷ 40 ರೂ. ಹಾಗೂ ಮೂರನೇ ವರ್ಷ 50 ರೂ. ನೀಡಲಾಗುತ್ತದೆ. ಅಲ್ಲದೆ ಗಿಡ ನೆಡಲು ಪ್ರೋತ್ಸಾಹಿಸುವ ಸಂಘ–ಸಂಸ್ಥೆಗಳಿಗೂ ಅರಣ್ಯ ಇಲಾಖೆ ಮೂರು ವರ್ಷದ ಅವಧಿಯಲ್ಲಿ ಗಿಡವೊಂದಕ್ಕೆ ಮೂರು ಹಂತದಲ್ಲಿ 5 ರೂ. ನೀಡುತ್ತದೆ. ನಿಯಮಾನುಸಾರ 400 ಗಿಡಕ್ಕೆ ಮಾತ್ರ ಪ್ರೋತ್ಸಾಹ ಧನ ನೀಡಲಾಗುತ್ತದೆ.

ಮೈಸೂರು ನಗರದಲ್ಲಿ ಒಂದು ಲಕ್ಷ ಗಿಡ

ಮೈಸೂರಿನ ವಿಜಯನಗರದ 4ನೇ ಹಂತ, ಆರ್.ಟಿ.ನಗರ ಸೇರಿದಂತೆ ವಿವಿಧೆಡೆ ಈ ಬಾರಿ 30 ಕಿಮಿ ರಸ್ತೆ ಬದಿಯಲ್ಲಿ ಗಿಡ ನೆಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಈ ಸಾಲಿನಲ್ಲಿ ಒಂದು ಲಕ್ಷ ಗಿಡ ಬೆಳೆಸಲಾಗಿದೆ. ಮೈಸೂರು ನಗರದಲ್ಲಿ ಗಿಡ ನೆಡಲು ಸಂಘ ಸಂಸ್ಥೆಗಳು ಬಯಸಿದರೆ ಇಲಾಖೆ ಗಿಡ ಪೂರೈಸಲಿದೆ ಕೃಷಿ, ಅರಣ್ಯ ಪ್ರೋತ್ಸಾಹ ಯೋಜನೆಯಡಿ 5 ಲಕ್ಷ ಗಿಡಗಳನ್ನು ರೈತರಿಗೆ ನೀಡಲಾಗುತ್ತಿದೆ. ಅರಣ್ಯ ಇಲಾಖೆಯ ಎಲ್ಲಾ ನರ್ಸರಿಗಳಲ್ಲೂ ವಿವಿಧ ಬಗೆಯ ಗಿಡಗಳನ್ನು ಬೆಳೆಸಲಾಗಿದೆ. ರೈತರಿಗೆ ಬೇಕಾದ ಗಿಡಗಳನ್ನು ವಿತರಿಸುತ್ತಿದ್ದೇವೆ ಅಲ್ಲದೆ ಮೈಸೂರು ನಗರದ ಬಡಾವಣೆಗಳು, ಶಾಲಾ–ಕಾಲೇಜು, ಸಂಘ–ಸಂಸ್ಥೆಗಳ ಆವರಣ ಹಾಗೂ ರಸ್ತೆ ಬದಿಗಳಲ್ಲಿ ವೈಜ್ಞಾನಿಕವಾಗಿ ಗಿಡ ನೆಡಲು ಕ್ರಮ ಕೈಗೊಳ್ಳಲಾಗಿದೆ. ವಿಶ್ವ ಪರಿಸರದ ದಿನದಿಂದ ಗಿಡ ವಿತರಿಸಲಾಗುತ್ತದೆ.



-ಕೆ.ಕಮಲಾ ಕರಿಕಾಳನ್, ಡಿಸಿಎಫ್

ಮೈಸೂರು ಜಿಲ್ಲೆಯ ವಿವಿಧೆಡೆ ವಿಶ್ವ ಪರಿಸರ ದಿನಾಚರಣೆ

ನಂಜನಗೂಡು, ಸರಗೂರು, ಹೆಚ್.ಡಿ.ಕೋಟೆ, ತಿ.ನರಸೀಪುರ, ಪಿರಿಯಾಪಟ್ಟಣ, ಹುಣಸೂರು ಸೇರಿದಂತೆ ಮೈಸೂರು ಜಿಲ್ಲೆಯ ವಿವಿಧೆಡೆ ಭಾನುವಾರ 'ವಿಶ್ವ ಪರಿಸರ ದಿನ' ಆಚರಿಸಲಾಯಿತು. ಶಾಲಾ-ಕಾಲೇಜು ಹಾಗೂ ಸರ್ಕಾರಿ ಕಚೇರಿ ಆವರಣ ಸೇರಿದಂತೆ ಮೈಸೂರು ಜಿಲ್ಲೆಯ ವಿವಿಧೆಡೆ ಗಿಡ ನೆಟ್ಟು, ನೀರೆರೆಯುವ ಮೂಲಕ ಪರಿಸರ ದಿನದ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು.

ಗಿಡ ನೆಟ್ಟು ಪರಿಸರ ಸಂರಕ್ಷಣೆಗೆ ಮುಂದಾಗಿ



ನಂಜನಗೂಡು, ಜೂ.5(ಸುದರ್ಶನ್)– ಪರಿಸರ ನಾಶದಿಂದಾಗಿ ಯಥೇಚ್ಛವಾಗಿ ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಮನುಷ್ಯ ಈಗಲಾದರೂ ಗಂಭೀರತೆಯನ್ನು ಅರಿತು ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಿವಿಲ್ ನ್ಯಾಯಾಧೀಶರಾದ ಕಿಶೋರ್‌ಕುಮಾರ್ ಹೇಳಿದರು.

ನಗರದ ನ್ಯಾಯಾಲಯದ ಆವರಣದಲ್ಲಿ ಭಾನುವಾರ ವಿಶ್ವಪರಿಸರ ದಿನಾಚರಣೆಯ ಅಂಗವಾಗಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಆರೋಗ್ಯ ಇಲಾಖೆಯಿಂದ ನಡೆದ ಸಸಿ ನೆಡುವ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ನೀರೆರೆದು ಅವರು ಮಾತನಾಡಿದರು.

ಮುಂದಿನ ಪೀಳಿಗೆಗೆ ಉತ್ತಮ ಪರಿಸರ, ವಾತಾವರಣವನ್ನು ಕೊಡುಗೆಯಾಗಿ ನೀಡಬೇಕಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸಬೇಕು ಎಂದು ಸಲಹೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಅನುಪಮಾ ಲಕ್ಷ್ಮೀ ಮಾತನಾಡಿ, ಮನುಷ್ಯನ ಸ್ವಾರ್ಥ ಗುಣದಿಂದಾಗಿ ಗಿಡ-ಮರಗಳನ್ನು ಕಡಿದು ಪರಿಸರ ನಾಶಕ್ಕೆ ಕಾರಣರಾಗುತ್ತಿದ್ದಾನೆ. ಕಳೆದ 2 ವರ್ಷಗಳ ಹಿಂದೆ ಕೊರೊನಾ ಮಹಾಮಾರಿ ಪರಿಸರ ಸಂರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ತೋರಿಸಿಕೊಟ್ಟು ಹೋಗಿದೆ. ಇನ್ನಾದರೂ ನಾವು ಎಚ್ಚೆತ್ತುಕೊಂಡು ನಮ್ಮ ಆರೋಗ್ಯದ ಹಿತದೃಷ್ಟಿಯಿಂದ ಪರಿಸರ ಸಂರಕ್ಷಣೆಗೆ ಸನ್ನದ್ಧರಾಗಬೇಕು ಎಂದರು. ಕಾರ್ಯ ಕ್ರಮದಲ್ಲಿ ನ್ಯಾಯಾಧೀಶರಾದ ರಘುರಾಂ, ಶಶಿಕಲಾ, ಅರಣ್ಯ ಸಂರಕ್ಷಣಾಧಿಕಾರಿ ಶಿವರಾಂ, ವಲಯ ಸಂರಕ್ಷಣಾಧಿಕಾರಿ ರಕ್ಷಿತ್, ವಕೀಲರ ಸಂಘದ ಅಧ್ಯಕ್ಷ ಬಸವರಾಜು ಸೇರಿದಂತೆ ಇತರರು ಇದ್ದರು.



ಹುಣಸೂರು ತಾಲೂಕಿನ ಕೊತ್ತೇಗಾಲ ಕ್ಲಸ್ಟರಿನ ಅರಸು ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಸೋಮಶೇಖರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ರಮೇಶ್, ಮುಖ್ಯ ಶಿಕ್ಷಕ ರಾಜಶೇಖರ್, ಶಿಕ್ಷಕರಾದ ಕೃಷ್ಣ, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇದ್ದರು.

ಪರಿಸರ ದಿನ ನಿರಂತರ ಆಚರಣೆಯಾಗಲಿ: ದೊರೆಸ್ವಾಮಿ



ಸರಗೂರು, ಜೂ.5(ನಾಗೇಶ್)– ಪರಿಸರ ದಿನ ಕೇವಲ ಗಿಡ ನೆಡುವುದಕ್ಕೆ ಸೀಮಿತವಾಗದೇ ನಿರಂತರವಾಗಿರಬೇಕು. ಪರಿಸರ ಸ್ವಚ್ಛತೆಯೊಂದಿಗೆ ಉತ್ತಮ ವಾತಾವರಣ ಸೃಷ್ಟಿಸುವ ಕಾರ್ಯ ನಮ್ಮೆಲ್ಲರದಾಗಬೇಕು ಎಂದು ರಕ್ಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ದೊರೆಸ್ವಾಮಿ ತಿಳಿಸಿದರು. ವಿಶ್ವ ಪರಿಸರದ ಅಂಗವಾಗಿ ತಾಲೂಕಿನ ಬಿದರಹಳ್ಳಿ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಮುಂದಿನ ಪೀಳಿಗೆಗೆ ಪರಿಸರ ಉಳಿಸಿ, ಬೆಳೆಸಬೇಕು. ಇದಕ್ಕಾಗಿ ಪ್ರತಿ ಗ್ರಾಮಗಳ ಮನೆಗಳಲ್ಲಿ ಒಂದೊಂದು ಗಿಡ ನೆಟ್ಟು, ಪೋಷಿಸುವ ಕೆಲಸವಾಗಬೇಕು ಎಂದು ಹೇಳಿದರು.

ರಕ್ಷಣಾ ಸೇವಾ ಟ್ರಸ್ಟ್ ಸಂಸ್ಥಾಪಕರಾದ ಚಂದ್ರಿಕಾ ದೊರೆಸ್ವಾಮಿ ಮಾತನಾಡಿ, ಶಿಕ್ಷಣಕ್ಕೆ ಪೂರಕವಾದ ಪರಿಸರಬೇಕು. ಆದ್ದರಿಂದ ಶಾಲೆಗಳಲ್ಲಿ ಮಕ್ಕಳು ಗಿಡ ನೆಟ್ಟು, ಪೋಷಿಸಬೇಕು ಎಂದರು. ಈ ವೇಳೆ ಗ್ರಾಮ ಸದಸ್ಯ ವಿಜಯಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ್, ಸದಸ್ಯರಾದ ರಾಜು, ನಾಗೇಂದ್ರ, ಚಿಕ್ಕಣ್ಣ, ಮಹದೇವ, ಸೃಷ್ಟಿ ಕಲಾವಿದ ಕುಮಾರ್, ಅಜಯಕುಮಾರ್, ಮುಖ್ಯ ಶಿಕ್ಷಕ ಎಸ್.ಶಂಕರ್, ಸಹ ಶಿಕ್ಷಕರಾದ ವಿನುತಾ, ಮೀನಾಕ್ಷಿ, ಚಂದನಾ, ಆಶಾ ಸೇರಿದಂತೆ ಗ್ರಾಮಸ್ಥರು ಇದ್ದರು.

ಅನೈತಿಕ ಸಂಬಂಧ: ಸಡಕನ ಕೊಚ್ಚಿ ಕೊಲೆ

ನಂಜನಗೂಡು, ಜೂ.5(ಸುದರ್ಶನ್)– ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಪತ್ನಿಯ ತಂಗಿಯ ಗಂಡನನ್ನು ವ್ಯಕ್ತಿಯೊಬ್ಬ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ನಂತರ ಮಚ್ಚಿನೊಂದಿಗೆ ದೊಡ್ಡ ಕವಲಂದೆ ಪೊಲೀಸ್ ಠಾಣೆಗೆ ತೆರಳಿ ಶರಣಾದ ಘಟನೆ ಭಾನುವಾರ ನಡೆದಿದೆ.

ತಾಲೂಕಿನ ಮಾಡ್ರಹಳ್ಳಿ ಗ್ರಾಮದ ಸಿದ್ಧಶೆಟ್ಟಿ(47) ಕೊಲೆಯಾದವನಾಗಿದ್ದು, ಈತನ ಪತ್ನಿಯ ಅಕ್ಕನ ಗಂಡ ಶಿವಣ್ಣ(59) ಹತ್ಯೆ ಮಾಡಿದ್ದಾನೆ.

ಏನಿದು ಘಟನೆ?: ಹೆಡತಲೆ ಗ್ರಾಮದ ಒಂದೇ ಕುಟುಂಬದ ಅಕ್ಕ-ತಂಗಿಯರನ್ನು ಮಾಡ್ರಹಳ್ಳಿ ಗ್ರಾಮದ ಶಿವಣ್ಣ ಹಾಗೂ ಸಿದ್ಧಶೆಟ್ಟಿ ವಿವಾಹವಾಗಿದ್ದರು. ಆದರೆ, ಕೆಲವು ವರ್ಷಗಳಿಂದ ಶಿವಣ್ಣನ ಪತ್ನಿಯೊಂದಿಗೆ ಸಿದ್ಧಶೆಟ್ಟಿ ಅಕ್ರಮ ಸಂಬಂಧವಿಟ್ಟುಕೊಂಡಿದ್ದ ಎನ್ನಲಾಗಿದ್ದು, ಈ ವಿಚಾರವಾಗಿ ಶಿವಣ್ಣ ಹಾಗೂ ಸಿದ್ಧಶೆಟ್ಟಿ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು ಎಂದು ಹೇಳಲಾಗಿದೆ. ಭಾನುವಾರವೂ ಇದೇ ವಿಚಾರಕ್ಕೆ ಗಲಾಟೆ ನಡೆದಿದೆ. ಈ ವೇಳೆ ಶಿವಣ್ಣ ಮಚ್ಚಿನಿಂದ ಸಿದ್ಧಶೆಟ್ಟಿಯನ್ನು ಕೊಚ್ಚಿ ಕೊಲೆ ಮಾಡಿದ ಬಳಿಕ, ಮಚ್ಚಿನೊಂದಿಗೆ ಕವಲಂದೆ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ತನ್ನ ಪತ್ನಿಯೊಂದಿಗೆ ಸಿದ್ಧಶೆಟ್ಟಿ ಅನೈತಿಕ ಸಂಬಂಧ ಹೊಂದಿದ್ದ ಕಾರಣಕ್ಕಾಗಿ ಆತನನ್ನು ಕೊಲೆ ಮಾಡಿರುವುದಾಗಿ ಶಿವಣ್ಣ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಎಎಸ್‌ಪಿ ಶಿವಕುಮಾರ್, ಡಿವೈಎಸ್‌ಪಿ ಗೋವಿಂದರಾಜು, ಸಿಪಿಐ ಲಕ್ಷ್ಮೀಕಾಂತ ತಳವಾರ್, ಪಿಎಸ್‌ಐ ಮಹೇಂದ್ರ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ದೊಡ್ಡ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಳೆಯಿಂದ ಬೆಳೆ ಹಾನಿ: ಪರಿಹಾರಕ್ಕೆ ಒತ್ತಾಯ



ಹುಣಸೂರು, ಜೂ.5ಕೆಕೆ)– ತಾಲೂಕಿನ ಬನ್ನಿಕುಪ್ಪೆ ಮತ್ತು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಮರಳಯ್ಯನಕೊಪ್ಪಲು, ಮೂಡಲಕೊಪ್ಪಲು, ದೊಡ್ಡೇಗೌಡನಕೊಪ್ಪಲು, ಮಾದಹಳ್ಳಿ ಕೊಪ್ಪಲು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ನಷ್ಟ ಉಂಟಾಗಿದೆ.

ನೀರು ನುಗ್ಗಿದ ಪರಿಣಾಮ ಭತ್ತ, ತಂಬಾಕು, ತರಕಾರಿ, ಶುಂಠಿ, ಹತ್ತಿ ಬೆಳೆ ನಾಶವಾಗಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹಾನಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಬೇಕು. ರೈತರಿಗೆ ಸೂಕ್ತ ಪರಿಹಾರ ಕೊಡಿಸಿಕೊಡಬೇಕು ಎಂದು ಗ್ರಾಪಂ ಸದಸ್ಯರಾದ ಎಂ.ಸಿ.ಚಂದ್ರಶೇಖರ್ ಹಾಗೂ ಗ್ರಾಮದ ಮುಖಂಡರು ಮನವಿ ಮಾಡಿದ್ದಾರೆ.

ಪ್ರಜ್ಞಾವಂತ ಮತದಾರರು ಮೈ.ವಿ.ರವಿಶಂಕರ್‌ರನ್ನು ಬೆಂಬಲಿಸಲಿದ್ದಾರೆ

ವರುಣಾ ಕ್ಷೇತ್ರ ಬಿಜೆಪಿ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ವಿಶ್ವಾಸ



ತಿ.ನರಸೀಪುರ, ಜೂ.5(ಎಸ್‌ಕೆ)– ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವವನ್ನು ಅರಿತಿರುವ ಪದವೀಧರ ಮತದಾರರು ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರು ಸಾಮಾಜಿಕ ಬದ್ಧತೆಯನ್ನು ತಿಳಿದಿರುವುದರಿಂದ ವಿಧಾನ ಪರಿಷತ್‌ನ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಿ ಗೆಲ್ಲಿಸಲಿದ್ದಾರೆ ಎಂದು ವರುಣಾ ಕ್ಷೇತ್ರ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ಹೊಸಕೋಟೆ ಗ್ರಾಮದ ಗುರುಮಲ್ಲೇಶ್ವರ ಸರ್ಕಾರಿ ಶಾಲೆಯಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೋಂದಾಯಿತ ಪದವೀಧರ ಮತದಾರರನ್ನು ಭೇಟಿಯಾಗಿ ಪದವೀಧರರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರ ಮತಯಾಚಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೆಚ್ಚಿರುವ ಪ್ರಜ್ಞಾವಂತ ಮತದಾರರು ರವಿಶಂಕರ್ ಅವರು ಕಳೆದ ಚುನಾವಣೆಯಲ್ಲಿ ಪರಾಭವ ಗೊಂಡಿರುವುದರಿಂದ ಈ ಬಾರಿ ಕೈ ಹಿಡಿಯಲಿದ್ದಾರೆ ಎಂಬ ನಂಬಿಕೆಯಿದೆ ಎಂದರು. ವಿಧಾನಪರಿಷತ್ ಸದಸ್ಯರಾದ ಗೋಪಿನಾಥರೆಡ್ಡಿ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಪ್ರಭಾರಿಗಳಾದ ಅಶ್ವಥನಾರಯಣ, ಪ್ರಧಾನ ಕಾರ್ಯದರ್ಶಿ ಎ.ಎನ್. ರಂಗುನಾಯಕ, ಮಂಜುನಾಥ್, ರಾಜೇಂದ್ರ ರಘು, ಮಹದೇವಸ್ವಾಮಿ ಹಾಜರಿದ್ದರು.

ಗ್ರಾಮೀಣರಿಗೆ ಮೋದಿ ಆಡಳಿತದ ಅರಿವು ಮೂಡಿಸಲು ಸಲಹೆ



ಹೆಚ್.ಡಿ.ಕೋಟೆ, ಜೂ.5(ಮಂಜು)– ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಗ್ರಾಮೀಣ ಭಾಗದಲ್ಲಿ ನಮ್ಮ ಕಾರ್ಯಕರ್ತರು ಅರಿವು ಮೂಡಿಸಿದ್ದೇ ಆದಲ್ಲಿ ನಮ್ಮ ಜಯ ಕಟ್ಟಿಟ್ಟಬುತ್ತಿ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಆಶಾಭಾವನೆ ವ್ಯಕ್ತಪಡಿಸಿದರು.

ಸಮೀಪದ ಶೀಂಡೇನಹಳ್ಳಿ ಗ್ರಾಮದಲ್ಲಿ ಪ್ರಚಾರ ನಡೆಸಿದ ಮಾತನಾಡಿದ ಅವರು, ನಾನು ಕಳೆದ ಬಾರಿ 183 ಮತಗಳಿಂದ ಸೋಲನ್ನು ಅನುಭವಿಸಿದೆ. ಕುಲಗೆಟ್ಟ ಮತಗಳೇ 3,400 ಆಗಿದ್ದರಿಂದ ಸೋಲುವ ಪರಿಸ್ಥಿತಿ ಎದುರಾಗಿತ್ತು. ಈ ಬಾರಿ ಕುಲಗೆಟ್ಟ ಮತಗಳನ್ನು ಹಾಕದಂತೆ ಮತದಾರರಿಗೆ ಅರಿವು ಮೂಡಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಕ್ಷೇತ್ರದ ವ್ಯಾಪ್ತಿಗೊಳಪಡುವ 4 ಜಿಲ್ಲೆಗಳಿಂದ 1,43,000 ಪದವೀಧರ ಮತದಾರರಿದ್ದಾರೆ. ಅದರಲ್ಲಿ ಮೈಸೂರು ಮತ್ತು ಗ್ರಾಮಾಂತರ ಭಾಗದಲ್ಲಿ 65,000 ಮತಗಳಿವೆ. ಇವರೆಲ್ಲರನ್ನು ಭೇಟಿ ಮಾಡುವ ಕಾರ್ಯ ಭರದಿಂದ ಸಾಗಿದೆ ಎಂದು ತಿಳಿಸಿದರು.

ಅರಣ್ಯ ಮತ್ತು ವಿಹಾರಧಾಮಗಳ ಅಧ್ಯಕ್ಷ ಅಪ್ಪಣ್ಣ ಮಾತನಾಡಿ, ಪದವೀಧರರೇ ಮತದಾನ ಮಾಡುತ್ತಿರುವುದರಿಂದ ಕುಲಗೆಟ್ಟ ಮತಗಳಿಗೆ ಆಸ್ಪದ ನೀಡದೇ ನಮ್ಮ ಪಕ್ಷದ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು ಎಂದು ಮತದಾರರಿಗೆ ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್, ತಾಲೂಕು ಮಂಡಲದ ಅಧ್ಯಕ್ಷ ಹೆಚ್.ಸಿ. ಗುರುಸ್ವಾಮಿ, ಜಿಲ್ಲಾ ಸಹ ಸಂಚಾಲಕರ ವಸಂತಕುಮಾರ್, ತಾಲೂಕು ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಲಕ್ಷ್ಮಣ್, ಶಿಕ್ಷಣ ಪ್ರಕೋಷ್ಠ ಸಂಚಾಲಕ ರವೀಶ್, ಶ್ಯಾಮರಾವ್, ಶಕ್ತಿ ಕೇಂದ್ರದ ಅಧ್ಯಕ್ಷ ರಮೇಶ್, ಅರಣ್ಯ ಮತ್ತು ವಿಹಾರ ಧಾಮಗಳ ನಿರ್ದೇಶಕ ಪರೀಕ್ಷಿತರಾಜ ಅರಸ್, ಯುವ ಮುಖಂಡ ಜಿ.ಎಂ.ಹಳ್ಳಿ ಹೇಮಂತ್‌ಕುಮಾರ್, ಜಿಲ್ಲಾ ಯುವ ಘಟಕದ ಪ್ರಧಾನ ಕಾರ್ಯದರ್ಶಿ ನವೀನ್ ಪಾಟೀಲ್ ಇದ್ದರು.

ತಿ.ನರಸೀಪುರ ಅಭಿವೃದ್ಧಿ ಹಿನ್ನಡೆಗೆ ಅವಕಾಶ ನೀಡಲ್ಲ

ಪುರಸಭಾ ಸದಸ್ಯ ಅರ್ಜುನ್ ರಮೇಶ್ ಭರವಸೆ



ತಿ.ನರಸೀಪುರ, ಜೂ.5(ಎಸ್‌ಕೆ)– ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ತಮವಾದ ಕೆಲಸ ಮಾಡುವ ಶಕ್ತಿ ನನಗಿಲ್ಲದಿದ್ದರೂ, ಅಭಿವೃದ್ಧಿಗೆ ಹಿನ್ನಡೆಗೆ ಹಾಗೂ ಭ್ರಷ್ಟಾಚಾರಕ್ಕೆ ಮಾತ್ರ ಅವಕಾಶ ನೀಡುವುದಿಲ್ಲ ಎಂದು ಚಲನಚಿತ್ರ ನಟರೂ ಆದ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಹೇಳಿದರು.

ಗೋಪಾಲಪುರ ಗ್ರಾಮದ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ಅರ್ಜುನ್‌ರವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿಮಾನಿಗಳು, ಸ್ನೇಹಿತರು ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ, ಅಭಿಮಾನಿಗಳಿಂದ ಹುಟ್ಟುಹಬ್ಬದ ಶುಭಾಶಯ ಸ್ವೀಕರಿಸಿ ಅವರು ಮಾತನಾಡಿದರು.

ನಮ್ಮ ತಂದೆ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ರವರು ಇಂದಿನ ನನ್ನ ಬೆಳವಣಿಗೆಗೆ ಬುನಾದಿ ಹಾಕಿಕೊಟ್ಟಿದ್ದು ಅವರ ಮಾರ್ಗದರ್ಶನದಲ್ಲಿ ಉತ್ತಮ ಜನಸೇವೆ ಮಾಡಲು ನಿರ್ಧರಿಸಿದ್ದೇನೆ. ದುಡ್ಡು ಮಾಡುವುದೇ ಮುಖ್ಯವಲ್ಲ, ಹೆಸರು ಮಾಡುವುದು ಮುಖ್ಯ. ಭ್ರಷ್ಟಾಚಾರ ರಹಿತವಾಗಿ ಹೇಗೆ ಬದುಕಬೇಕೆಂಬುದನ್ನು ಅವರು ಹೇಳಿಕೊಟ್ಟಿದ್ದು, ತಂದೆ ಹೇಳಿಕೊಟ್ಟಿರುವ ಆದೇಶವನ್ನು ಪಾಲಿಸಿ ಜನಪರವಾದ ನಿಷ್ಕಲ್ಮಷ ಸೇವೆ ಸಲ್ಲಿಸುತ್ತೇನೆ ಎಂದರು.

ತಂದೆಯವರು ನನಗೆ ಕೊಟ್ಟ ದೊಡ್ಡ ಆಸ್ತಿಯೆಂದರೆ ತಿಳುವಳಿಕೆ, ವಿವೇಚನೆ. ಜನಪರವಾದ ಕೆಲಸ ಮಾಡಲು ತಂದೆ ಕೊಟ್ಟಿರುವ ಈ ಎರಡು ಆಸ್ತಿಯನ್ನು ಬಳಕೆ ಮಾಡುತ್ತೇನೆ. ತಾಲೂಕಿನಲ್ಲಿ ಹೆಚ್ಚಿನ ಮಟ್ಟದಲ್ಲಿ ಒಳ್ಳೆಯ ಕೆಲಸ ಮಾಡುವ ಶಕ್ತಿ ನನಗಿಲ್ಲದಿದ್ದರೂ, ಕೆಟ್ಟದನ್ನು ತಡೆಗಟ್ಟುವ ಶಕ್ತಿ ನನಗಿದೆ. ತಾಲೂಕಿನಲ್ಲಿ ನನ್ನ ಉಪಸ್ಥಿತಿ ಇರುವವರೆಗೂ ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಜನರ ಪರವಾದ ಹೋರಾಟದಲ್ಲಿ ತೊಡಗಿಕೊಳ್ಳುತ್ತೇನೆ ಎಂದರು. ನಂತರ ನಡೆದ ರಕ್ತದಾನ ಶಿಬಿರದಲ್ಲಿ 30ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ಶಿಬಿರದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, 'ಕೌಟಿಲ್ಯ' ಚಿತ್ರದ ನಿರ್ದೇಶಕ ಪ್ರಭಾಕರ್ ಶೇರ್‌ಖಾನ್, ಬಾಬು ಜಗಜೀವನರಾಂ ಸಂಘದ ತಾಲೂಕು ಅಧ್ಯಕ್ಷ ಮಲೆಯೂರು ಶಂಕರ್, ಉಪಾಧ್ಯಕ್ಷ ಗೋವಿಂದರಾಜು, ಮುಖಂಡರಾದ ಸಿ.ಮಹದೇವು, ಬಿ.ಎಲ್.ಮಹದೇವು, ಪ್ರದೀಪ್, ರಾಜಣ್ಣ, ಸಂದೀಪ್, ಚಿಕ್ಕರಂಗ, ನಂದನ್‌ಕುಮಾರ್, ವಿಶ್ವ, ಸುರೇಶ್, ಆಲಗೂಡು ರಾಜು, ಸಿ.ಡಿ.ವೆಂಕಟೇಶ್ ಮತ್ತಿತರರಿದ್ದರು.

ಮುಖ್ಯಾಂಶಗಳು

- ಅರ್ಜುನ್‌ರಮೇಶ್‌ಗೆ ಹುಟ್ಟುಹಬ್ಬದ ಸಂಭ್ರಮ
- ಅಭಿಮಾನಿಗಳು, ಬೆಂಬಲಿಗರಿಂದ ಶುಭ ಹಾರೈಕೆ
- ಪಟ್ಟಣದಲ್ಲಿ ನಾನಾ ಸೇವಾ ಕಾರ್ಯ

'ಕೌಟಿಲ್ಯ' ಸಿನಿಮಾದ ಟೀಸರ್, ಹಾಡು ಬಿಡುಗಡೆ

ತಿ.ನರಸೀಪುರ: ಪಟ್ಟಣದಲ್ಲಿ ಭಾನುವಾರ ರಾತ್ರಿ ನಡೆದ ಅದ್ಧೂರಿ ಕಾರ್ಯಕ್ರಮದಲ್ಲಿ ಅರ್ಜುನ್ ರಮೇಶ್ ಅವರು ನಟಿಸಿರುವ 'ಕೌಟಿಲ್ಯ' ಸಿನಿಮಾದ ಟೀಸರ್ ಹಾಗೂ ಹಾಡನ್ನು ವಾಟಾಳ್ ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಶಾಸಕ ಡಾ.ಎನ್.ಎಲ್.ಭಾರತಿ ಶಂಕರ್ ಬಿಡುಗಡೆಗೊಳಿಸಿದರು.

ಈ ವೇಳೆ ನಟ, ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮಾತನಾಡಿ, ನನ್ನ ಜೀವನದ ಪ್ರಮುಖ ಘಟ್ಟವಾದ 'ಕೌಟಿಲ್ಯ' ಸಿನಿಮಾ 2 ವರ್ಷಗಳಿಂದ ಸತತವಾಗಿ ಚಿತ್ರೀಕರಣ ನಡೆದು ಜುಲೈನಲ್ಲಿ ತೆರೆಕಾಣುತ್ತಿದೆ. ಖ್ಯಾತ ನಿರ್ದೇಶಕ ಸೂರಿ ಗರಡಿಯಲ್ಲಿ ಪಳಗಿರುವ ಪ್ರಭಾಕರ್ ಶೇರ್‌ಖಾನ್ ಚಿತ್ರವನ್ನು ನಿರ್ದೇಶನ ಮಾಡಿದ್ದು, ಚಿತ್ರ ತುಂಬಾ ಉತ್ತಮವಾಗಿ ಮೂಡಿ ಬಂದಿದೆ ಎಂದರು.

ಸಿನಿಮಾದ ಟೀಸರ್ ಮತ್ತು ಕೊನೆಯ ಹಾಡನ್ನು ನನ್ನ ಹುಟ್ಟೂರಿನಲ್ಲೇ ಬಿಡುಗೊಳಿಸಿರುವುದು ಹೆಮ್ಮೆಯ ವಿಷಯವಾಗಿದ್ದು, ಉತ್ತಮ ಮನರಂಜನಾತ್ಮಕ ಸಿನಿಮಾ 'ಕೌಟಿಲ್ಯ'ವನ್ನು ಜನ ಕೈಹಿಡಿದರೆ ಒಳ್ಳೆಯ ಮಟ್ಟದಲ್ಲಿ ಹೆಸರು ಮಾಡಲಿದೆ. ಒಂದೆಡೆ ಚಿತ್ರರಂಗ, ಮತ್ತೊಂದೆಡೆ ರಾಜಕೀಯ ಎರಡರಲ್ಲೂ ಗುರುತಿಸಿಕೊಂಡಿರುವ ನಾನು 'ಕೌಟಿಲ್ಯ' ಚಿತ್ರದ ಮೂಲಕ ಚಿತ್ರರಂಗದಲ್ಲಿ ತಾಲೂಕಿನ ಹೆಮ್ಮೆ, ಗರಿಮೆಯನ್ನು ಕಾಪಾಡುವ ಕೆಲಸ ಮಾಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕುರುಬ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಪುರಸಭಾ ಸದಸ್ಯ ಪ್ರಕಾಶ್, ಪ್ರೊಡ್ಯೂಸರ್ ಬಿ.ಎ.ವಿಜೇಂದ್ರ, ನಟಿ ಪ್ರಿಯಾಂಕಾ ಚಿಂಚೋಳ್ಳಿ, ಸಂಗೀತ ನಿರ್ದೇಶಕರಾದ ಕಿರಣ್, ಕೃಷ್ಣಮೂರ್ತಿ, ಸಹ ನಟರಾದ ನಿನಾಸಮ್‌ಅಶ್ವಥ್, ಚಿಲ್ಲರ್ ಮಂಜು, ಮಡೇನೂರ್‌ಮನು, ನಯನ, ಸೂರಜ್, ಕಾರ್ತಿಕ್ ಹುಲಿ ಇತರರು ಇದ್ದರು.



ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10.40ಕ್ಕೆ, ಬೂಲ್ ಬುಲಾಯ್ಯ (ಹಿಂ): ಮ.1.15ಕ್ಕೆ, ವಿಕ್ರಂ (ತ): ಸಂ.4ಕ್ಕೆ, ಮೇಜರ್ (ತೆ): ರಾ.7.20ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಮೆಟಡೊರ್ (ಕ): ಬೆ.11ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1.45ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.4.05ಕ್ಕೆ, ಪೃಥ್ವಿರಾಜ್ (ಹಿಂ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಮೇಜರ್ (ತೆ): ಬೆ.10.15ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಪೃಥ್ವಿರಾಜ್ (ಹಿಂ): ಸಂ.4.20ಕ್ಕೆ, ಮೇಜರ್ (ಹಿಂ): ರಾ.7ಕ್ಕೆ, ಮೇಜರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ವಿಕ್ರಂ (ತ): ಬೆ.9.45ಕ್ಕೆ, ಮ. 1ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಟಾಪ್‌ಗನ್ (ಇಂ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಂ (ತ): ಬೆ.11.35ಕ್ಕೆ, ಮ.3.10ಕ್ಕೆ, ಸಂ.6.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.9.40ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಮ.1.10ಕ್ಕೆ, ರಾ.7.15ಕ್ಕೆ, ಮೇಜರ್ (ತೆ): ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸಾಮ್ರಾಟ್ ಪೃಥ್ವಿರಾಜ್ (ಕ): ಬೆ.9.50ಕ್ಕೆ, ರಾ.10.30ಕ್ಕೆ, ಮೆಟಡೊರ್ (ಕ): ಮ.12.45ಕ್ಕೆ, ಮನಸ್ಮಿತ (ಕ): ಮ.3.40ಕ್ಕೆ, ವಿಕ್ರಂ (ತ): ಸಂ.6.55ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.9.55ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1ಕ್ಕೆ, ಮೇಜರ್ (ಹಿಂ): ಸಂ.6.50ಕ್ಕೆ, ಕೆಜಿಎಫ್ 2(ಕ): ಮ.3.25ಕ್ಕೆ, ಬೂಲ್ ಬುಲಾಯ್ಯ 2(ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್-2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಕ್ರಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮೇಜರ್ (ಹಿಂ)	4 ಪ್ರದರ್ಶನಗಳು
ರಾಜ್‌ಕಮಲ್	
ಪೃಥ್ವಿರಾಜ್ (ಹಿಂ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಮೇಜರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮೇಜರ್ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಮೇಜರ್ (ತೆ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಜಾನನ ಅಂಡ್ ಗ್ಯಾಂಗ್ (ಕ)	4 ಪ್ರದರ್ಶನಗಳು

ಚಿಲ್ಕುಂದ: ವಿಶ್ವ ತಂಬಾಕು ವಿರೋಧಿ ಮಾಸಾಚರಣೆ



ಕಂಪಲಾಪುರ, ಜೂ.5(ಸದಾ)– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಂಪಲಾಪುರ ವಲಯದ ಚಿಲ್ಕುಂದ ಗ್ರಾಮದಲ್ಲಿ ವಿಶ್ವತಂಬಾಕು ವಿರೋಧಿ ಮಾಸಾಚರಣೆ ಆಚರಿಸಲಾಯಿತು.

ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಹವ್ಯಾಸಗಳನ್ನು ರೂಢಿಸುವ ಮೂಲಕ ದುಶ್ಚಟಗಳಿಂದ ದೂರವಿರಿಸಬೇಕು ಎಂದರು. ಈ ಭಾಗದಲ್ಲಿ ತಂಬಾಕು ಬೆಳೆಗಾರರೇ ಹೆಚ್ಚಾಗಿದ್ದು, ತಂಬಾಕು ಆರೋಗ್ಯಕ್ಕೆ ಮಾರಕವಾಗಿರುವುದರಿಂದ ಮುಂದಿನ ದಿನಗಳಲ್ಲಿ ಸರ್ಕಾರವೇ ಈ ಬೆಳೆಯನ್ನು ಬ್ಯಾನ್ ಮಾಡುವ ಸಾಧ್ಯತೆಗಳಿವೆ. ಆದ್ದರಿಂದ ನಾವು ಹಸಿರು ಕೃಷಿ ಮಾಡುವ ಯೋಚನೆ ಮಾಡಬೇಕಿದೆ ಎಂದರು.

ಸಂಪನ್ಮೂಲ ವ್ಯಕಿಯಾಗಿ ಆಗಮಿಸಿದ್ದ ಶಿಕ್ಷಕ ಸಂತೋಷ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ರವಿ, ಸತೀಶ್, ನಾಗರತ್ನ, ಹಿರಿಯ ಮುಖಂಡ ಅಣ್ಣಯ್ಯಶೆಟ್ಟಿ, ಒಕ್ಕೂಟದ ಅಧ್ಯಕ್ಷೆ ಮಮತಾ, ಜ್ಞಾನ ವಿಕಾಸ ಕೇಂದ್ರ ಸಮನ್ವಯಾಧಿಕಾರಿ ಶಾರದಾ, ವಲಯ ಮೇಲ್ವಿಚಾರಕಿ ರವಿಕಲಾ ಶೆಟ್ಟಿ, ಸೇವಾ ಪ್ರತಿನಿಧಿಗಳಾದ ರೂಪಾ, ನೌಸಿನ್, ಸ್ಫೂರ್ತಿ ಜ್ಞಾನ ವಿಕಾಸ ಕೇಂದ್ರ ಮತ್ತು ಸ್ವಸಹಾಯ ಸಂಘಗಳ ಸದಸ್ಯರು ಸೇರಿದಂತೆ ಇತರರು ಹಾಜರಿದ್ದರು.

ವಿದ್ಯುತ್ ಶಾರ್ಟ್‌ಸರ್ಕ್ಯೂಟ್: ಬ್ಯಾಂಕ್‌ನ ಪೀಠೋಪಕರಣ, ಕಡತ ಸಂಪೂರ್ಣ ಭಸ್ಮ



ಬೈಲಕುಪ್ಪೆ, ಜೂ.5– ಇಲ್ಲಿನ ಕೆನರಾ ಬ್ಯಾಂಕ್ ಶಾಖಾ ಕೇಂದ್ರದಲ್ಲಿ ಶನಿವಾರ ರಾತ್ರಿ ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದ ಹಾನಿ ಸಂಭವಿಸಿದೆ. ಘಟನೆಯಿಂದ ಬ್ಯಾಂಕ್‌ನ ವ್ಯವಸ್ಥಾಪಕರ ಕೊಠಡಿ ಸಂಪೂರ್ಣ ಭಸ್ಮಗೊಂಡ ಪರಿಣಾಮ ಪೀಠೋಪಕರಣ ಹಾಗೂ ಕಡತಗಳು ಬೆಂಕಿಯಿಂದ ಭಸ್ಮವಾಗಿದೆ.

ಬ್ಯಾಂಕ್ ಪೊಲೀಸ್ ಠಾಣೆಯ ಪಕ್ಕದಲ್ಲೇ ಇರುವುದರಿಂದ ಘಟನೆ ಸಂಭವಿಸಿದ ಕೂಡಲೇ ಬ್ಯಾಂಕ್‌ನ ವ್ಯವಸ್ಥಾಪಕರಿಗೆ ಮಾಹಿತಿ ನೀಡಿದರು. ಬಳಿಕ, ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದರು. ಈ ಸಂಬಂಧ ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್.ಬಿ.ಜಗನ್ನಾಥ್ ನಿಧನ



ಹೆಚ್.ಡಿ.ಕೋಟೆ, ಜೂ.5– ಪಟ್ಟಣದ ಎರಡನೇ ಮುಖ್ಯರಸ್ತೆಯ ನಿವಾಸಿ ಪಂಡಿತರ ವಂಶದ ಹಿರಿಯ ಜ್ಯೋತಿಷಿ ಎಸ್.ಬಿ.ಜಗನ್ನಾಥ್ (78) ಶನಿವಾರ ನಿಧನರಾದರು. ಮೃತರು ಸೋದರ ಪತ್ರಕರ್ತ ಹೆಚ್.ಬಿ.ಪುರುಷೋತ್ತಮ್, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರೀಯೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿತು.

ಪರಿಸರ ದಿನ: ಫ್ರೂಟ್ ಪಾರ್ಕ್ ಯೋಜನೆಗೆ ಚಾಲನೆ



ಮೈಸೂರು, ಜೂ.5–ಪರಿಸರ ದಿನದ ಅಂಗವಾಗಿ ಮೈಸೂರಿನ ವಾರ್ಡ್ ನಂ.3 ರಲ್ಲಿ 'ಫ್ರೂಟ್ ಪಾರ್ಕ್' ಎಂಬ ವಿನೂತನ ಕಾರ್ಯಕ್ರಮವನ್ನು ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ. ಮಲ್ಲೇಶ್ ಅವರಿಂದ ಏರ್ಪಡಿಸಲಾಗಿತ್ತು.

100ಕ್ಕೂ ಹೆಚ್ಚು ಹಣ್ಣಿನ ಗಿಡಗಳನ್ನು ನೆಟ್ಟು, ಜನ, ಪ್ರಾಣಿ, ಪಕ್ಷಿಗಳಿಗೆ ಅನುಕೂಲವಾಗುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದ್ದು, ಕಾರ್ಯಕ್ರಮಕ್ಕೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಂತಾರಾಷ್ಟ್ರೀಯ ಕ್ರಿಕೆಟರ್ ಜಾವಗಲ್ ಶ್ರೀನಾಥ್ ಹಾಗೂ ಜೆಎಸ್‌ಎಸ್ ಸಂಸ್ಥೆ ಸಂಸ್ಥಾಪಕ ಶ್ರೀಹರಿ ಚಾಲನೆ ನೀಡಿದರು. ಈ ವೇಳೆ ಪರಿಸರವಾದಿ ಗಳಾದ ವೈರಮೇಶ್, ಲೋಕೇಶ್ ಮೊಸಳೆ ಹಾಗೂ ಅಂತರರಾಷ್ಟ್ರೀಯ ಕ್ರೀಡಾಪಟು ಕಲ್ಪನಾ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನ ಅಧ್ಯಕ್ಷ ಕೆ.ವಿ.ಶ್ರೀಧರ್, ಮುಂದಿನ ಪೀಳಿಗೆಗೆ ನಾವು ಒಳ್ಳೆಯ ಪರಿಸರವನ್ನು ಒದಗಿಸಬೇಕು. ಮಕ್ಕಳಿಗೆ ಪರಿಸರ ಸಂರಕ್ಷಣಾ ಕಾರ್ಯಕ್ರಮಗಳನ್ನು ಮಾಡಿ ಅರಿವು ಮೂಡಿಸಿ, ಒಳ್ಳೆಯ ಪರಿಸರದ ಭವಿಷ್ಯವನ್ನು ಕೊಟ್ಟು, ಒಳ್ಳೆ ಅರೋಗ್ಯ ಜೀವನ ನಡೆಸಲು ಸ್ಫೂರ್ತಿಯಾಗಬೇಕು ಎಂದರು.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ಲಾಸ್ಟಿಕ್ ಬಳಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ಜನರಿಗೆ ಮನದಟ್ಟು ಮಾಡಿದರು.

ಜಾವಗಲ್ ಶ್ರೀನಾಥ್ ಮಾತನಾಡಿ, ಪರಿಸರ ಸಂರಕ್ಷಣೆ ಬಗ್ಗೆ ಹಾಗೂ ಕೆ.ವಿ. ಶ್ರೀಧರ್ ಅವರ ಪರಿಸರ ಸಂರಕ್ಷಣಾ ಕಾರ್ಯ ವೈಖರಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಜೆಎಸ್‌ಎಸ್ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ, ಪರಿಸರಕ್ಕೆ ನಾವು ಹಾನಿ ಉಂಟು ಮಾಡಿದರೆ ಮುಂದಿನ ಪೀಳಿಗೆಗೆ ಉಸಿರಾಡಲು ಗಾಳಿಯ ಸಮಸ್ಯೆ ಎದುರಾಗುವುದು ಎಂದರು.



ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸುವಂತೆ ಕೆಪಿಸಿಸಿ ಸದಸ್ಯ ಕೆ.ಮರಿಗೌಡರು ಮನವಿ ಮಾಡಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರ ಮುಖಂಡ ಹೆಚ್.ಸಿ. ಕೃಷ್ಣಕುಮಾರ್ ಸಾಗರ್, ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷ ಜೆ.ಸತೀಶ್‌ಕುಮಾರ್, ಕೃಷ್ಣಪ್ಪ, ಚಾಮುಂಡೇಶ್ವರಿ ಕ್ಷೇತ್ರ ಬ್ಲಾಕ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಶಂಕರ್, ಮಹದೇವಣ್ಣ, ಶಿವರಾಜ್, ರವಿ, 58ನೇ ವಾರ್ಡ್ ಅಧ್ಯಕ್ಷರಾದ ರಾಜೇಂದ್ರ ಪ್ರಸಾದ್, ಚಾಮುಂಡೇಶ್ವರಿ ಕ್ಷೇತ್ರ ಎನ್‌ಎಸ್‌ಯುಐ ಅಧ್ಯಕ್ಷ ರವಿಕುಮಾರ್, ಚಂದನ್, ತೇಜು, ವರುಣ್, ಮಧು ಇನ್ನಿತರರು ಉಪಸ್ಥಿತರಿದ್ದರು.